(SRI K. HANUMANTHAIYA.)

while the case relating to acquisition and compensation was pending before the court. Therefore, Sir, this matter is *sub judice* and I have brought this to the notice of the House and that I cannot make a statement at this stage until the Contempt of Court case is disposed of.

BUDGET FOR 1956-57—DEMANDS FOR GRANTS.

Mr. DEPUTY SPEAKER.—Now Demands. Demands Nos. 12, 18 and 28. For the first Demand we may allot about 45 minutes; for Education about two hours and half-an-hour for Demand No. 28.

MEMBERS.—Yes.

Mr. DEPUTY SPEAKER.—Some time limit has also got to fixed. If the House has no objection, I will use my discretion in the matter.

MEMBERS.—Yes.

DEMAND No. 12—GENERAL ADMINISTRATION (STATE LEGISLATURE AND ELECTION CHARGES).

25. GENERAL ADMINISTRATION (B. PARLIAMENT AND THE STATE LEGISLATURE AND C. ELECTIONS.)

Mr. SPEAKER.—Motion moved:

"That a sum not exceeding Rs. 25,09,000 be granted to defray the charges which will come in course of payment during the year ending 31st day of March 1957, in respect of 'General Administration (State Legislature and Election Charges)'."

*Sri J. MOHAMED IMAM (Jagalur).—Sir, I am opposing this Demand, as I want to avail myself of the opportunity to point out the defects that are in the way of elections. Very soon we have to face general elections and this is the opportune time for us to point out the defects in the present system of elections, specially, to those that belong to the parties other than the ruling party. Sir, democracy stands on free and fair elections and every care should be taken that elections are held in a free and fair atmosphere. Most of us have undergone the difficulties of the last general elections and we know how disadvantageous it is for persons belonging to other parties than the Congress.

The chief difficulty is, elections would be held when persons of the ruling party are still in office, in power. During elections the Ministers continue to hold the office and there is every presumption that they use undue influence and there is no fair and free atmosphere. I have stated this even before, that, at the time of elections, Ministers should lay down office and should contest elections just as any other person does.

Sri P. R. RAMAIYA (Basavanagudi).—I would like to know as to how it is done in England and in America.

Sri J. MOHAMED IMAM.—It is true, Sir, that Constitution does not prohibit persons from holding office at the time of elections. But, conditions in England and America are quite different from that of India. There, the electorate is highly educated and they have built up democracy from centuries. We have very good experience of the last elections; we know how persons exercised their votes. It is also our experience during the last elections that persons who held office went round and made several promises to the people—which perhaps they did not carry out—and asked the people to vote for their party. Ministers took advantage of their office and misused their mission.

Mr. DEPUTY SPEAKER.—Sri Imam, I do not know whether this House is competent to discuss that question. Elections are governed by rules and procedure laid down in the Constitution and the Election Commission which has been constituted by the President has got powers to deal with these matters. I think we are not competent to discuss this.

Sri J. MOHAMED IMAM.—I may submit that last year we have discussed all these matters. It is the duty

of this Government to bring all these matters to the notice of the Central Government and the Election Commission. We have to ventilate our difficulties and it is the duty of Government to transmit all these to the Centre for their guidance.

*Sri T. MARIAPPA (Mysore City North).—I indeed agree with the Leader of the Opposition when he says that healthy practices have got to be set up. But, while substantiating the case, he must also give instances where Ministers have misused their powers. There are a number of instances even in India where even with the illiterate voters, several Ministers have faced defeats at the polls. Therefore, to say that they misused their position and got elected is not correct. Unless the Hon'ble Member cites instances, it is not proper on his part to allege such things.

*Sri A. G. RAMACHANDRA RAO (Minister for Law and Education).—I want to bring to the notice of the House an identical fact which the Chair observed regarding the competency of this House to discuss this matter. According to the Constitution VII Schedule—item No. 72 provides that it is a Union subject, namely, "Elections to Parliament, to the Legislatures of States and to the offices of President and Vice-President; the Election Commission." There is a specific provision in the Constitution which provides for discussion, deliberation and decision and that should be done by Parliament.

Sri P. R. RAMAIYA.—On a point of order. He is referring to the competence of this House to discuss this matter of elections to the Legislature and the Parliament. But on page 29 of the Budget Memorandum, for election. . . .

Mr. DEPUTY SPEAKER.—The Hon'ble Minister has not completed what he has to say.

Sri P. R. RAMAIYA.—I wish to say this. The Speaker himself doubted the competence of this House. He made some remarks which amounted to a doubt being entertained as to the competence of this House.

Mr. DEPUTY SPEAKER.—I did not give a ruling; I simply felt a doubt about it. I just wanted to clarify it.

Sri P. R. RAMAIYA.—Only to remove that doubt, I am stating some facts. On page 29 of the Budget Memorandum, under General Administration—C. Elections for Legislatures, Rs. 9·94 lakhs are provided in the Budget and that is to be voted by this House. Last year it was only Rs. 1·93 lakhs. Therefore, when we are asked to vote for this amount of Rs. 9·94 lakhs, it is certainly within the competency of this House to discuss the question of election to the Legislature and also to the Parliament. In a general way we may discuss, but there are some functions of the Election Commission with which we are not concerned and it is within the competency of this House to deal with the question in a general way.

Sri J. MOHAMED IMAM.—We are expected to vote a certain amount. My submission is that we should not vote this amount on account of certain reasons. I am stating those reasons. Sri Mariappa. . . .

Sri T. MARIAPPA.—I did not question the competence of the Legislature but I only said you must substantiate. . . .

*Sri J. MOHAMED IMAM.—It is within my personal knowledge. Last time I had toured in a certain constituency and there a certain Minister also was touring. It came within my personal knowledge that the Minister went round and was promising lands and other concessions to important persons because he wanted them to vote for him or for his nominee. This is my within personal knowledge. Otherwise, I am the last man to make any reckless remarks.

Mr. DEPUTY SPEAKER.—That is a very good case for an election petition.

Sri J. MOHAMED IMAM.—I know persons who have filed election petitions have spent a lot of money and have been ruined.

If there is any defect, let it be remedied in the initial stage alone. The Constitution of course allows the Minister to continue under the present circumstances; but our worry is, if

(SRI J. MOHAMED IMAM.)

the Ministers continue in office, then it is very difficult to have a fair and free atmosphere and to have free election. That is No. 1. Secondly, I know in the case of small parties, it is difficult for them to contend in general elections. I know the ruling party is very well backed by funds, and by power and they have a very good organisation. Democracy demands that other parties also should come up. Otherwise, it will be an autocracy. They must also have a free and fair democracy. Small parties like the P.S.P. are helpless parties with no public backing, with no funds and other things. You can just imagine how difficult it is for them to contest against the nominees of a mighty party.

There is another thing which is very much of a disadvantage to other parties. Right up from the polling officer to the person who handles the voting box, the polling officer, the returning officer and all other officers are the servants of the Ministers at that time.

Mr. DEPUTY SPEAKER.—They are not the servants of the Ministers.

Sri A. BHEEMAPPA NAIK (Molakalmuru).—You could have said 'servants of Government'.

Sri J. MOHAMED IMAM.—They are the subordinates of the Ministers who form the Government at that time. They handle the entire election transactions from beginning to end. The returning officer, the polling officer, the person recording and every person connected with it are all Government officers. So when the Ministers continue in office, you can just imagine what will be the state of their (officers') feelings. As subordinates, perhaps most of them think that it is their duty to obey the behests and commands of the Ministers. Under these conditions, it is very difficult to have a fair and a free atmosphere.

I must also point out the dangers of having the present arrangements of these ballot boxes. A certain kind of ballot box has been evolved and I do not know who is the gentleman that evolved it. I myself do not know its contrivance. But that particular ballot box gives rise to a good deal of scandal and in many cases, it is not merely a scandal, but the rumours connected with it are very well-founded. The ballot-box must be abolished, must be done away with. You remember one member of this House last time challenged that he would open that ballot box, but the Minister did not accept it though he was very vehement. That box must be done away with and some other kind of box which is quite proof against any malpractice being committed must be devised. If the same ballot box or the same contrivance is continued, I am sure there will not be free election. This is a very serious matter which is to be brought to the notice of the Central Government. Let all the parties be satisfied that they are putting the voting paper into a box which is foolproof and which cannot be tampered with; but, if the same box is continued, I am afraid in many places ballot papers will go from one box to another and this will work to the disadvantage of many persons.

I must bring to the notice of the Government about the constitution of the Tribunal. We are voting a good deal of money and the Tribunal is constituted by the Election Commission, but their names are suggested by the Central Government. What I want to say is, this system is not working properly. In the first place, the members of the Tribunal may be upright, may be honest. But it gives rise to a sort of suspicion in everybody's mind. Since the members of the Tribunal owe their existence or their appointment to the recommendations of the local Government a feeling is created, a presumption is raised that they may not do their duty fairly and honest y. It looks as if they take their own time. A matter which can be disposed of within a month, I understand, they take years and years. A case was pending recently before a Tribunal. Though it was a very simple matter, still the Tribunal has been putting off every time and no verdict has been given till now. So, I would suggest in this connection—now that

all the States are going to be reorganised and the Zonal Council is going to be appointed—I would suggest that the members of the Tribunal of one State should come from another State—members who have nothing to do with local matters or local politics and who can exercise their discretion fairly and freely. For example, for Mysore we can select members of the Tribunal and its Chairman from Madras or Andhra or Bombay and *vice versa*. I think this will be a good arrangement. Though it is not relevant to mention here, I would like the same system to be applied for the constitution of the members of the Public Service Commission also, because that will give a sense of security to the members of this House.

These are the important points which I thought it is my duty to bring to the notice of the local Government, so that they may refer these to the Central Government. The most important is about the ballot box. They must evolve a system which will create confidence in the minds of people so that when they put their votes, they will not be tampered with. Secondly, the constitution of the Election Tribunal and thirdly, the Government should take every care to see that official influence is not brought to bear upon the voters, and persons holding offices will not misuse their position to the advantage of their own party and to the detriment of other parties.

*ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ರಾಜ್ಯಾಂಗದಲ್ಲಿ ಮುಖ್ಯವಾಗಿರತಕ್ಕಂಥ ಮೂರು ಬಾಬುಗಳೆಂದರೆ ಶಾಸನಗಳನ್ನು ರಚಿಸತಕ್ಕ ಶಾಸನಾಂಗ, ಕಾರ್ಯಗಳನ್ನು ನಡೆಸಿಕೊಂಡು ಹೋಗತಕ್ಕ ರಾಜ್ಯಾಂಗ ಮತ್ತು ನ್ಯಾಯಗಳನ್ನು ತೀರ್ಮಾನಿಸತಕ್ಕ ನ್ಯಾಯಾಂಗ ಎಂದು ಮೂರು ಭಾಗಗಳಿವೆ. ಈ ಮೂರು ಭಾಗಗಳೂ ಒಂದಕ್ಕೊಂದು ಯಾವ ವಿಧವಾಗಿ ಹೊಂದಿಕೊಂಡು ಕೆಲಸ ನಡೆಸಬೇಕು, ಇವುಗಳಿಗೆ ಸಂಬಂಧ ಹೇಗಿರಬೇಕು ಎನ್ನುವುದು ನಮಗೆಲ್ಲರಿಗೂ ಈಗ ಬಹಳ ಮಟ್ಟಿಗೆ ಗೊತ್ತಾಗಿದೆ. ಆದರೆ ಸರ್ಕಾರದವರು ಈ ಕಾರ್ಯವನ್ನು ಪೂರ್ಣಗೊಳಿಸುವುದಕ್ಕೆ ಏಕೆ ಹಿಂಜರಿಯುತ್ತಿದ್ದಾರೋ ಅದು ನನಗೆ ಅರ್ಥವಾಗುತ್ತಿಲ್ಲ. ಆ ನ್ಯಾಯಾಂಗ, ಕಾರ್ಯಾಂಗದಿಂದ ಬಿಡುಗಡೆಯಾಗಿ, ಅದು ಸ್ವತಂತ್ರವಾಗಿರಬೇಕು ಎಂಬುದನ್ನು ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ. ಅದನ್ನೇನೋ ಈಗ ಸ್ವಲ್ಪಮಟ್ಟಿಗೆ ಜಾರಿಗೆ ತರುವುದಕ್ಕೆ ಪ್ರಯತ್ನಗಳನ್ನು ಮಾಡಿದ್ದಾರೆಂದು ಇತ್ತೀಚೆಗೆ ಗೊತ್ತಾಯಿತು. ಆದರೆ ಅದರಷ್ಟೇ ಮುಖ್ಯವಾಗಿರತಕ್ಕಂಥ ಶಾಸನಾಂಗಕ್ಕೆ ಸಂಬಂಧಪಟ್ಟ ಈ ಶಾಸನಸಭಾ ಸೆಕ್ರೆಟೇರಿಯೆಟ್ ಕಛೇರಿಯು ಆಡಳಿತಗಳೂ ಸಹ ಸ್ವಾತಂತ್ರ್ಯದಿಂದ ಇರಬೇಕೆಂದು ಹೇಳುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆ ಜ್ಯುಡಿಷಿಯರಿ ಎಷ್ಟು ಇಂಡಿಪೆಂಡೆಂಟ್ ಆಗಿರಬೇಕೋ ಇದೂ ಅಷ್ಟೇ ಇಂಡಿಪೆಂಡೆಂಟ್ ಆಗಿರಬೇಕು. ಆ ಜ್ಯುಡಿಷಿಯರಿ ಇಂಡಿಪೆಂಡೆಂಟ್ ಆಗಿರಬೇಕೆಂದು ಹೇಳುವುದಕ್ಕೆ ಏನೇನು ಕಾರಣಗಳಿವೆಯೋ ಅವೇ ಕಾರಣಗಳನ್ನೇ ಇದಕ್ಕೂ ನಾವು ಹೇಳಬಹುದು.

1-30 P.M.

ಸರ್ಕಾರದವರು ಈ ಸೆಕ್ರೆಟೇರಿಯೆಟ್‌ಗೆ ಸಂಬಂಧಪಟ್ಟಂಥ ವಿಷಯಗಳಲ್ಲಿ ಯಾವ ವಿಧವಾದ ಕಂಟ್ರೋಲನ್ನಿಟ್ಟುಕೊಂಡಿರುವುದೂ ಸರಿಯಲ್ಲ ಎಂದು ಹೇಳಬೇಕಾದ್ದಿಲ್ಲ. ನಾನು ಈ ಹೊಸ ಶಾಸನ ಬಂದ ಮೇಲೆ ಮೊದಲನೆಯ ಸ್ಪೀಕರ್ ಆಗಿದ್ದೆ. ಈ ಶಾಸನಾಂಗ ಸ್ವತಂತ್ರವಾಗಿರಬೇಕೆಂದು ಹೇಳುವುದಕ್ಕೆ ಸರ್ಕಾರದವರಿಗೆ ಏನು ಸಲಹೆಗಳನ್ನು ಕೊಡಬಹುದೋ ಅವುಗಳನ್ನು ದೆಹಲಿಗೆ ಹೋಗಿ ಅಲ್ಲಿ ಸೆಕ್ರೆಟೇರಿಯಟ್ ಹೇಗೆ ಕೆಲಸ ಮಾಡುತ್ತಾ ಇದೆ, ಮದರಾಸಿನಲ್ಲಿ ಸೆಕ್ರೆಟೇರಿಯಟ್ ಹೇಗೆ ಕೆಲಸ ಮಾಡುತ್ತಾ ಇದೆ ಎಂಬುದನ್ನು ನೋಡಿಕೊಂಡು ಬಂದು ಬಹುಮಟ್ಟಿಗೆ ಒತ್ತಾಯ ಪೂರ್ವಕವಾಗಿ ಕೊಟ್ಟೆ. ಆಗ ಮಂತ್ರಿಗಳಾಗದೇ ಇದ್ದಂಥ, ಈಗ ಮಂತ್ರಿಗಳಾಗಿರತಕ್ಕ ಶ್ರೀ ರಾಮಚಂದ್ರರಾಯರು ಆಗ ಸಭೆಯಲ್ಲಿದ್ದು ನಾನು ಏನೇನು ಹೇಳಿದೆನೋ ಅದನ್ನೆಲ್ಲಾ ಒತ್ತಾಯ ಮಾಡಿರುವುದು ನನಗೆ ಚೆನ್ನಾಗಿ ಜ್ಞಾಪಕವಿದೆ. ಆದರೆ ಅವರು ಈ ಸ್ಥಾನಕ್ಕೆ ಬಂದು ನಾಲ್ಕು ವರ್ಷಗಳಾದರೂ ಕೂಡ ಇನ್ನೂ ಪೂರ್ಣವಾಗಿ ಆ ಸಲಹೆಗಳನ್ನು ಜಾರಿಗೆ ತರಲಿಲ್ಲವಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಸ್ವಾಮಿ, ಈ ಸೆಕ್ರೆಟೇರಿಯಟ್ಟು ಪೂರ್ಣ ಸ್ವತಂತ್ರವಾಗಿರಬೇಕು ಎಂದು ಹೇಳಿದರೆ, ಈ ಸೆಕ್ರೆಟೇರಿಯಟ್ಟಿಗೆ ಸಂಬಂಧಪಟ್ಟಂಥ ಕೆಲಸಗಾರರನ್ನು ನೇಮಕ ಮಾಡಿಕೊಳ್ಳುವುದರಲ್ಲಿ, ಸೆಕ್ರೆಟರಿಯವರ ಸಂಬಳ ಸಾರಿಗೆಗಳನ್ನು ಗೊತ್ತುಮಾಡುವುದರಲ್ಲಿ, ಸರ್ಕಾರದವರಿಗೆ ಒಂದು ಅನುಕೂಲ ಮಾಡಿಕೊಡುತ್ತೇವೆ ಎನ್ನುವ ದೃಷ್ಟಿ ಇಲ್ಲದೇ ಇರತಕ್ಕ ರೀತಿಯಲ್ಲಿ ಏರ್ಪಾಡನ್ನು ಮಾಡಬೇಕಾದದ್ದು ಅಗತ್ಯ. ಸಣ್ಣ ಪುಟ್ಟ ವಿಷಯಗಳಿಗೆಲ್ಲಾ ಸ್ಪೀಕರ್ ಆದವರು ಸರ್ಕಾರದ ಕೈಕಾದುಕೊಂಡಿರುವುದು ಅನಾವಶ್ಯಕ, ಅಲ್ಲದೆ ಅದು ಸರಿಯಲ್ಲ. ಸ್ಪೀಕರ್ ಅವರು ಮಂತ್ರಿಗಳ ಸ್ಥಾನ ಎಷ್ಟು ದೊಡ್ಡದೋ ಅಷ್ಟೇ ದೊಡ್ಡ ಸ್ಥಾನದಲ್ಲಿ ಇರತಕ್ಕವರು. ಅಥವಾ ಇನ್ನೂ ಹೆಚ್ಚಿನ ಸ್ಥಾನದಲ್ಲಿ ಇದ್ದಾರೆ ಎಂದರೂ ತಪ್ಪಿಲ್ಲ. ಮಂತ್ರಿಗಳಿಗೆ ಇಷ್ಟಿಷ್ಟು ಮೊತ್ತದ ಕೆಲವು ಹಣವನ್ನು ತಮ್ಮ ಜವಾಬ್ದಾರಿಯಿಂದ ಖರ್ಚು ಮಾಡುವುದಕ್ಕೆ ಈ ಶಾಸನಸಭೆ ಹೇಗೆ ವಹಿಸುತ್ತದೆಯೋ ಅದೇ ರೀತಿ ಸ್ಪೀಕರ್ ಅವರಿಗೂ ವಹಿಸಿಕೊಡಬೇಕಾದದ್ದು ಅಗತ್ಯ. ಸ್ಪೀಕರ್ ಅವರಿಗೆ, ಸ್ಪೀಕರ್‌ಗೆ ಸಂಬಂಧಪಟ್ಟಂಥ ಕೆಲವು ಕೆಲಸಗಳಿಗೆ ಹಣ ಬೇಕಾಗುತ್ತದೆ. ಹಣ ಬೇಕಾದಾಗ ಸರ್ಕಾರದವರು ಮಂಜೂರು ಮಾಡಿದರೆ ಉಂಟು ಇಲ್ಲದೆ ಇದ್ದರೆ ಇಲ್ಲ. ಬಹುಶಃ ತಮಗೇ ಜ್ಞಾಪಕವಿದೆ, ಸ್ವಾಮಿ, ತಾವು ರೈಲ್ವೇ ಸ್ಟೇಷನ್ನಿಗೆ ಹೋಗಿ ಹಿಂದಕ್ಕೆ ಬಂದಿರಿ. ಹೋಗಿ ಎಂದು ಮೊದಲು ಹೇಳಿ ಆ ಮೇಲೆ ದುಡ್ಡು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ಕಳುಹಿಸಿದರು. ಸ್ಪೀಕರ್ಸ್ ಕಾನ್ಫರೆನ್ಸ್‌ಗೆ ಹೋಗಬೇಕೆಂದು ತಾವು ರೈಲ್ವೇ ಸ್ಟೇಷನ್ನಿಗೆ ಹೋಗಿದ್ದವರು ಹಿಂದಕ್ಕೆ ಬಂದಿರಿ.

ಉಪಾಧ್ಯಕ್ಷರು.—ರೈಲ್ವೆ ಸ್ಟೇಷನ್ನಿಗೆ ಹೋಗಿರಲಿಲ್ಲ.

ಶ್ರೀ ವಿ. ವೆಂಕಟಪ್ಪ.—ಟಿಕೆಟ್ ತರಿಸಿಕೊಂಡಿದ್ದಿರಿ. ಈ ತರಹ ಆಗತಕ್ಕದ್ದು ಸರಿಯಲ್ಲ. ಈಗ ಲೋಕಸಭೆಯ ಸ್ಪೀಕರ್ ಅವರಿಗೆ ಅನೇಕ ವಿಷಯಗಳಲ್ಲಿ ಸ್ವಾತಂತ್ರ್ಯವಿದೆ. ಆ ಇಲಾಖೆಗೆ ಸಂಬಂಧಪಟ್ಟಂಥ ಗೆಜೆಟೆಡ್ ಮತ್ತು ನಾನ್‌ಗೆಜೆಟೆಡ್ ನೌಕರರುಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅವರಿಗೆ ಅಧಿಕಾರ ಕೊಟ್ಟಿದ್ದಾರೆ. ಇಲ್ಲಿ ಆ ವಿಧವಾದ ಯಾವ ಅಧಿಕಾರವನ್ನೂ ಇನ್ನೂ ಸ್ಪೀಕರ್ ಅವರಿಗೂ ಮತ್ತು ಚೇರ್ಮನ್ ಅವರಿಗೂ ಕೊಟ್ಟಿಲ್ಲ. ಮತ್ತು ಕೆಲವು ವಿಷಯಗಳಲ್ಲಿ, ನಾನು ಹಿಂದೆಯೂ ಅದನ್ನು ಹೇಳಿದ್ದೇನೆ—ಈ ಸಭೆ ನಡೆಯುತ್ತಾಯಿರತಕ್ಕ ಸಮಯದಲ್ಲಿ ಬೇರೆ ಇಲಾಖೆಯ ಕೆಲವು ನೌಕರರುಗಳಿಗೆ ಡ್ಯೂಟಿ ಅಲೋಯನ್ಸ್ ಕೊಡುತ್ತಾರೆ. ಅದನ್ನು ನಮ್ಮ ಈ ಸೆಕ್ರೆಟೇರಿಯೆಟ್ಟಿನ ಕೆಲಸಗಾರರಿಗೂ ಬಹಳ ಕಾಲದಿಂದ ಎಂದರೆ ಎಂದು ಪ್ರಜಾಪ್ರತಿನಿಧಿ ಸಭೆ ಪ್ರಾರಂಭವಾಯಿತೋ ಆ ಕಾಲದಿಂದ ಇಲ್ಲಿಯವರೆಗೂ ಕೊಡುತ್ತಾ ಇದ್ದರು. ಇಲ್ಲಿಯವರೆಗೂ ಎಂದರೆ ಈ ಮಂತ್ರಿ ಮಂಡಲ ಬರುವವರೆಗೂ ಕೊಡುತ್ತಾ ಇದ್ದರು. ಸಭೆ ನಡೆಯತಕ್ಕ ಕಾಲದಲ್ಲಿ ಹೆಚ್ಚಿಗೆ ಕೆಲಸಗಾರರು ಏನಾದರೂ ಬೇಕಾದರೆ ಅವರನ್ನು ನೇಮಕ ಮಾಡಿಕೊಳ್ಳುವುದಕ್ಕೂ ಈಗ ಲೋಕಸಭೆಯಲ್ಲಿ 30-40 ಜನರನ್ನು ನೇಮಕ ಮಾಡಿಕೊಳ್ಳಬಹುದು ಎಂದು ಹೇಳಿ ಅಲ್ಲಿ ಅಧಿಕಾರ ಕೊಟ್ಟಿದ್ದಾರೆ. ಅದೇ ರೀತಿ ಪ್ರಜಾ ಪ್ರತಿನಿಧಿ ಸಭೆ ನಡೆಯುತ್ತಾ ಇದ್ದಾಗ ಅಧಿಕಾರ ಕೊಟ್ಟಿದ್ದರು. ಆ ರೀತಿ ನೇಮಕ ಮಾಡಿಕೊಳ್ಳುತ್ತಾ ಇದ್ದರು. ನಾನೇ ಇದು ಅನಾವಶ್ಯಕವಾಗಿ ಹೆಚ್ಚು ಖರ್ಚಾಗುತ್ತದೆಯೋ ಏನೋ ಎಂದು ಹೇಳಿ—ಅದರಲ್ಲಿ ಸ್ವಲ್ಪ misuse ಆಗುತ್ತಾ ಇತ್ತು, ಏಕೆಂದರೆ ಅದನ್ನು ಸರ್ಕಾರದವರೇ ಮಾಡುತ್ತಾ ಇದ್ದರು ನಮ್ಮವರಲ್ಲ—ಆದ್ದರಿಂದ ಅದನ್ನು ತಪ್ಪಿಸಿ ಬಹಳ ಹಣವನ್ನು ಉಳಿಸಿಕೊಟ್ಟೆ. ನಮ್ಮ ಸೆಕ್ರೆಟೇರಿಯೆಟ್ಟಿನಲ್ಲಿ ಬೆಳಗಿನಿಂದ ಸಾಯಂಕಾಲದವರೆಗೂ ಕೆಲಸ ಮಾಡತಕ್ಕವರಿಗೆ ಇತರರಿಗೆ ಕೊಟ್ಟಂತೆ ಭತ್ಯವನ್ನು ಕೊಡಬೇಕೆಂದರೆ ಹೋದ ಸಭೆಯಲ್ಲಿ ಏನು ಹೇಳಿದರು ? ಇಲ್ಲ ಯಾರಿಗೂ ಕೊಟ್ಟಿಲ್ಲ ಎಂದು ಹೇಳಿದರು. ಅದು ಸರಿಯಲ್ಲ. ಇತರ ಇಲಾಖೆಯಲ್ಲಿ ಈಗ ಹೆಚ್ಚು ಕೆಲಸ ಮಾಡುತ್ತಾಯಿರತಕ್ಕವರಿಗೆ, ಈ ಸಭೆ ನಡೆಯತಕ್ಕ ಕಾಲದಲ್ಲಿ ಭತ್ಯವನ್ನು ಕೊಡುತ್ತ ಇದ್ದು ಈ ಸಭೆಯ ಕಾರ್ಯಕಲಾಪಗಳಿಗೆ ನೆರವಾಗಿ ಕೆಲಸ ಮಾಡತಕ್ಕ ಇದೇ ಸೆಕ್ರೆಟೇರಿಯಟ್ಟಿನವರಿಗೆ ಅದೂ ಕೆಲವರೇ ಇರತಕ್ಕ ನೌಕರರಿಗೆ ನೀವು ಭತ್ಯವನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ನಿಲ್ಲಿಸಿರುವುದು ನಿಜವಾಗಿಯೂ ವಿಷಾದಕರ. ಆದ್ದರಿಂದ ಈ ವಿಷಯವನ್ನು ಸರ್ಕಾರದವರು ಕೂಡಲೇ ಪರಿಶೀಲನೆ ಮಾಡಿ ಏನು ತೊಂದರೆ ಇದೆಯೋ ಅದನ್ನು ಪರಿಹಾರ ಮಾಡಬೇಕು. ಮತ್ತು ಮುಂದೆ ನಮ್ಮ ಮೈಸೂರು ಸಂಸ್ಥಾನಕ್ಕೆ ಸೇರತಕ್ಕ ಹೈದರಾಬಾದು, ಬೊಂಬಾಯಿ, ಮಡಕಸಿರಾ ಮತ್ತು ಮದರಾಸು ಈ ಎಲ್ಲಾ ಸಂಸ್ಥಾನಗಳಲ್ಲಿಯೂ ಷಾರ್ಟ್‌ಹ್ಯಾಂಡ್ ರಿಪೋರ್ಟರುಗಳಿಗೆ ಕೊಡತಕ್ಕ ಸಂಬಳ ನಮ್ಮ ರಿಪೋರ್ಟರುಗಳಿಗೆ ಕೊಡುವ ಸಂಬಳಕ್ಕಿಂತ ಹೆಚ್ಚಾಗಿದೆ. ಈಗ ಕೆಲವು ಇಲಾಖೆಗಳಲ್ಲಿ ಕೇಂದ್ರ ಸರ್ಕಾರಕ್ಕೆ ಸಂಬಂಧ ಪಟ್ಟಂಥ ಅಧಿಕಾರಿಗಳೂ ಇದ್ದು, ನಮ್ಮ ದೇಶದ ಅಧಿಕಾಗಳೂ ಇದ್ದು ಕಡಿಮೆ ಸಂಬಳ ತೆಗೆದುಕೊಳ್ಳುತ್ತಾಇರುವುದರಿಂದ ಅವರಲ್ಲಿ ಯಾವ ವಿಧವಾದ ಮನೋಭಾವ ಉಂಟಾಗಿದೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಅದೇ ವಿಧವಾದ ಮನೋಭಾವ ಇಲ್ಲಿ ಕೆಲಸಮಾಡತಕ್ಕ ನಮ್ಮ ರಿಪೋರ್ಟರುಗಳಿಗೆ ಉಂಟಾಗಬಾರದು. ಇತರರು ಎಂದರೆ ಆಗಲೇ ನಾಲ್ಕು ಸಂಸ್ಥಾನಗಳು ಯಾವುದು ಹೇಳಿದೆನೋ ಅವರು ಏನು ಸಂಬಳ ಕೊಡುತ್ತಾ ಇದ್ದಾರೆಯೋ ಅದಕ್ಕಿಂತಲೂ ನಮ್ಮ ದೇಶದಲ್ಲಿ ಕೊಡುತ್ತಾಯಿರುವುದು ಕಡಿಮೆ. ಆದ್ದರಿಂದ ಆದಷ್ಟು ಜಾಗ್ರತೆ ಇದನ್ನು ಅವರ ಮಟ್ಟಕ್ಕೆ ತಂದು ನಮ್ಮ ಸೆಕ್ರೆಟೇರಿಯಟಿನ ಕೆಲಸ ಸುಸೂತ್ರವಾಗಿ ಮತ್ತು ಚೆನ್ನಾಗಿ ನಡೆಯುವಂತಾಗಲು ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳಬೇಕು.

ಮತ್ತು ಈ ಸಭೆಯ ಪ್ರೊಸೀಡಿಂಗ್ಸ್ ಪ್ರಿಂಟ್ ಮಾಡಿಸುವ ವಿಚಾರದಲ್ಲಿ ಇವೊತ್ತು ಆದದ್ದನ್ನು ನಾಳೆ ಅಥವಾ ನಾಡಿದ್ದು ಪ್ರಿಂಟ್ ಮಾಡಿಸಿ ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಆಲೋಚನೆ ಮಾಡಿ ಕೆಲವು ದಿವಸ ಮಾಡಿದೆವು. ಆರೀತಿ ಆಗಬೇಕಾದರೆ ಸ್ವಲ್ಪ ಹೆಚ್ಚಿಗೆ ಹಣ ಕೊಡಬೇಕಾಗಿ ಬರುತ್ತದೆ ಎಂದು ಕಂಡುಬಂತು. ಅದಕ್ಕೆ ಸರ್ಕಾರ ಒಪ್ಪಲಿಲ್ಲ. ಈಗ ನೋಡಿ ಹೋದವರ್ಷದ ಪ್ರಿಂಟೆಡ್ ವಾಲ್ಯೂಂಗಳು ಒಟ್ಟಿಗೆ ಇರುವುದು ಇನ್ನೂ ನಮ್ಮ ಕೈಸೇರಿಲ್ಲ. ಅದೇ ಸರ್ಕಾರದ ಯಾವುದಾದರೂ ಭಾಷಣ ಆಗಲಿ ಅಥವಾ ಚೀಫ್ ಮಿನಿಸ್ಟರ ಭಾಷಣ ಮತ್ತು ಅದಕ್ಕೆ ಸಂಬಂಧಪಟ್ಟ ರಿಪೋರ್ಟ್ ಆಗಲಿ ಎಷ್ಟು ಜಾಗ್ರತೆ ಪ್ರಿಂಟ್ ಮಾಡಿಸಿ ಎಲ್ಲಾ ಕಡೆಗೂ ಹಂಚುತ್ತಾರೆ. ಪ್ರಜಾಪ್ರತಿನಿಧಿ ಸಭೆಗೆ ಸಂಬಂಧಪಟ್ಟ ಪ್ರೊಸೀಡಿಂಗ್ಸ್ ಇವೊತ್ತು ಎಲ್ಲಾದರೂ ಇಟ್ಟುಕೊಂಡು ಹಿಂದೆ ಯಾರುಯಾರು ಏನೇನು ಹೇಳಿದ್ದಾರೆ ಎಂಬುದನ್ನು ನೋಡುವುದಕ್ಕೆ ಅವಕಾಶವಿಲ್ಲ. ಕಾರಣ ಬೌಂಡ್ ವ್ಯಾಲ್ಯೂಂ ಬಂದಿಲ್ಲ. ಈ ರೀತಿ ನಿಧಾನವಾಗುವುದು ಸರಿಯಲ್ಲ. ಆದಷ್ಟು ಜಾಗ್ರತೆ ಈ ಕಾರ್ಯ ನಡೆಯುವಂತೆ ಏರ್ಪಾಡುಮಾಡಬೇಕೆಂದು ನಾನು ಸೂಚಿಸುತ್ತೇನೆ.

* ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.-ನರಸೀಪುರ).—ಈ ಬಡ್ಜೆಟ್ ಪುಸ್ತಕದ 25ನೇ ಪುಟದಲ್ಲಿ ಎಲೆಕ್ಷನ್ ಟ್ರಿಬ್ಯುನಲ್‌ಗೆ 10 ಸಾವಿರ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೀರಿ. ಎಲೆಕ್ಷನ್ ಟ್ರಿಬ್ಯೂನಲ್‌ಗಳಿಗೆ ಮೈಸೂರು ಸಂಸ್ಥಾನದವರು ಯಾವ ವಿಧವಾದ ಖರ್ಚು ಮಾಡಬೇಕೆಂಬುದು ಸರಿಯಾಗಿ ಅರ್ಥವಾಗಿಲ್ಲ. ಸರ್ಕಾರದವರ ಸ್ವಲ್ಪ ವಿವರಣೆ ಕೊಡಬೇಕು. ಎರಡನೆಯದಾಗಿ ಯಾವುದಾದರೂ ಒಂದು ಚುನಾವಣೆಯಲ್ಲಿ ಹೆಚ್ಚುಕಡಮೆಯಾಗಿದ್ದರೆ ಅದಕ್ಕೆ ಚುನಾವಣಾ ತಕರಾರು ಅರ್ಜಿಯನ್ನು ದಾಖಲ್ ಮಾಡಬೇಕೆಂದು ಶಾಸನದಲ್ಲಿ ಇದೆ. ಇಂಡಿಯಾ ಸರ್ಕಾರದ 'ಎಲೆಕ್ಷನ್ ಕಮಿಷನರು ಒಂದು ಪಂಚಾಯಿತಿಯನ್ನೂ ಸಹ ನೇಮಕಮಾಡುತ್ತಾರೆ. ಆರೀತಿ ಮಾಡತಕ್ಕ ಕಾಲದಲ್ಲಿ ಅಂಥ ಎಲೆಕ್ಷನ್ ಪೆಟಿಷನ್ನಿನ ತೀರ್ಮಾನವನ್ನು ಅಥವಾ ಅದರ ಸೂಚನೆಯನ್ನು ಕೊಟ್ಟು ಫೈಸಲು ಮಾಡುವುದಕ್ಕೆ ಒಂದು ಅವಧಿಯನ್ನು ಗೊತ್ತುಮಾಡುತ್ತಾರೆ. ಸ್ವಲ್ಪ ದಿವಸದ ಹಿಂದೆ ಒಂದು ಎಲೆಕ್ಷನ್ ಟ್ರಿಬ್ಯೂನಲ್ ಪ್ರಾರಂಭವಾಯಿತು, ಪ್ರಾರಂಭವಾಗಿ $1\frac{1}{2}$ ವರ್ಷವಾಯಿತು. ಆ ಟ್ರಿಬ್ಯೂನಲ್ಲಿಗೆ ಅವಧಿ ಗೊತ್ತುಮಾಡಿರಲಿಲ್ಲವೋ ಏನೋ ಎಂದು ಶಂಕೆ ಇದೆ. ಏಕೆಂದರೆ ಚುನಾವಣೆ ನಡೆದು ಆಕ್ಷೇಪಣೆ ಬಂದರೆ ಅವಧಿ ಗೊತ್ತು ಮಾಡದೆ ಮುಂದಿನ ಚುನಾವಣೆ ತನಕ ಫೈಸಲಾಗದಿದ್ದರೆ ಏನು ಪ್ರಯೋಜನ ! ಇದು ಬಹಳ ಮುಖ್ಯವಾದದ್ದು.

ಬ್ಯಾಲೆಟ್ ಬಾಕ್ಸ್ ವಿಚಾರದಲ್ಲಿ ನಮ್ಮ ಲೀಡರ್‌ರವರು ಕೆಲವು ಅಭಿಪ್ರಾಯಗಳನ್ನು ಕೊಟ್ಟರು.

ನನ್ನದು ಒಂದು ಸಲಹೆ ಇದೆ. ಚುನಾವಣೆ ಆದ ಕೂಡಲೇ ಬ್ಯಾಲೆಟ್ ಬಾಕ್ಸನ್ನು ಸೀಲ್‌ಮಾಡುವ ವಿಧಾನದಲ್ಲಿ ಸ್ವಲ್ಪ ಬದಲಾವಣೆ ಆಗಬೇಕು. ಬಟ್ಟೆ ಸುತ್ತಿ ಸೀಲ್ ಮಾಡಿದರೆ ಸ್ವಲ್ಪ ಅನೂಕೂಲ ಎಂದು ನನ್ನ ಅಭಿಪ್ರಾಯ. ನಮ್ಮ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಸಾಧಾರಣವಾಗಿ ಅದೇರೀತಿ ಸೀಲ್ ಮಾಡುತ್ತೇವೆ. ಆದರೆ ಈ ಅಸೆಂಬ್ಲಿ ಚುನಾವಣೆಯಲ್ಲಿ ಬರೀ ದಾರ ಸುತ್ತಿ ಸೀಲ್ ಹಾಕುತ್ತೇವೆ. ಆ ಪದ್ಧತಿಯನ್ನು ತಪ್ಪಿಸಿ ಬಟ್ಟೆ ಸುತ್ತಿ ಸೀಲ್ ಹಾಕಿದರೆ ಸ್ವಲ್ಪ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಮೂರನೆಯದಾಗಿ ತಮ್ಮಲ್ಲಿ ಒಂದು ಇಂಪ್ರೆಸ್ಟ್ ಇರಬೇಕು. ಇತರ ಶಾಸನ ಸಭೆಗಳಲ್ಲಿ ಇರುವಹಾಗೆ ತಮ್ಮಲ್ಲೂ ಇಂಪ್ರೆಸ್ಟ್ ಇರಬೇಕೆಂದು ನನ್ನ ಅಭಿಪ್ರಾಯ. ಏನು ಅನುಕೂಲ ಎಂದರೆ ಕೂಡಲೇ ಯಾವುದೋ ಒಂದು ಸಂಚಾರ ಮಾಡಬೇಕಾಗುತ್ತದೆ ಅಥವಾ ಟಿ.ಎ., ಡಿ.ಎ. ಕೊಡಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ನೇರವಾಗಿ ಇಂಪ್ರೆಸ್ಟ್‌ನಿಂದ ಕೊಟ್ಟು ಆ ಮೇಲೆ ಬಿಲ್ ಮಾಡಿ ರೀಕೂಪ್ ಮಾಡಿಕೊಳ್ಳಬಹುದು. ಈರೀತಿ ಬೊಂಬಾಯ್ ಅಸೆಂಬ್ಲಿಯ ಸ್ಪೀಕರ್‌ರವರಿಗೆ ಇಂಪ್ರೆಸ್ಟ್ ಇಟ್ಟುಕೊಳ್ಳಲು ಅವಕಾಶಮಾಡಿಕೊಟ್ಟಿದ್ದಾರೆ. ಇಲ್ಲೂಕೂಡ ಇಂಪ್ರೆಸ್ಟ್ ಇಟ್ಟುಕೊಳ್ಳುವ ವ್ಯವಸ್ಥೆಮಾಡಬೇಕು.

ಇನ್ನೊಂದು ವಿಚಾರವನ್ನು ಶ್ರೀ ವೆಂಕಟಪ್ಪನವರು ಈಗಾಗಲೇ ಹೇಳಿದರು. ಲೆಜಿಸ್ಲೇಚರ್ ಸೆಕ್ರೆಟೆರಿಯಟ್‌ನವರಿಗೆ ಅಲೋಯನ್ಸ್ ಕೊಡುವ ವಿಚಾರದಲ್ಲಿ ನನ್ನ ಒಂದು ಪ್ರಶ್ನೆ ಇತ್ತು. 1953ನೇ ಇಸವಿಯಲ್ಲಿ ಆ ಪ್ರಶ್ನೆ ಹಾಕಿದ್ದೆ. ಅದಕ್ಕೆ ಕೊಡುವುದಕ್ಕಾಗುವುದಿಲ್ಲ ಎಂದು ಜವಾಬು ಕೊಟ್ಟಿದ್ದರು. ಈಗ ಗೆಸ್ಟ್‌ಹೌಸ್‌ಗೆ ವಿಶೇಷ ಸಿಬ್ಬಂದಿಯನ್ನು ತಾವು ಹಾಕುತ್ತೀರಿ. ಅವರೆಲ್ಲರಿಗೂ ಅಲೋಯನ್ಸ್ ಕೊಡುತ್ತೀರಿ. ಒಂದು ಭಾಗದಲ್ಲಿ ಅಲೋಯನ್ಸ್ ಕೊಡುವುದಕ್ಕೆ ಅವಕಾಶವಾಯಿತು. ಇನ್ನೊಂದು ಭಾಗದಲ್ಲಿ ಕೊಡುವುದಕ್ಕಾಗಲಿಲ್ಲ. ಈ ಪದ್ಧತಿ ಸರಿಯೇ ಎಂಬುದನ್ನು ಪುನರ್‌ವಿಮರ್ಶೆಮಾಡಬೇಕು. ಮತ್ತು ಈ ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ನವರಿಗೆ ಓವರ್‌ಟೈಂ ಅಲೋಯನ್ಸ್ ಕೊಡತಕ್ಕ ಪದ್ಧತಿಯನ್ನು ಜಾರಿಗೆ ತರಬೇಕು. ಏಕೆಂದರೆ ಬಹಳ ಹೆಚ್ಚಾದಂಥ ಕೆಲಸ ಇದೆ. ಆ ದೃಷ್ಟಿಯಿಂದಲೇ ಜಾರಿಗೆ ತರಬೇಕೆಂದು ಹೇಳುತ್ತೇನೆ.

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ನಾನು ಹೆಚ್ಚಿಗೆ ಏನೂ ಹೇಳುವುದಿಲ್ಲ. ಶ್ರೀ ಇಮಾಂರವರಿಗೆ ಒಂದು ಜವಾಬು ಹೇಳುವುದೇನೆಂದರೆ ಅವರು ಮಂತ್ರಿಗಳಾಗಿದ್ದಾಗ ಅರ್ಧ ಜವಾಬ್ದಾರಿ ಸರ್ಕಾರ ಬಂದಿತ್ತು. ಚುನಾವಣೆಗಳು ನಡೆಯುವಾಗ ಅವರು ಮಂತ್ರಿಗಳ ಸ್ಥಾನವನ್ನೇನೂ ಬಿಡಲಿಲ್ಲ. ಮಂತ್ರಿಮಂಡಲದಲ್ಲಿ ಇದ್ದುಕೊಂಡೇ ಕೆಲಸಮಾಡಿದರು. ಈಗಲಾದರೋ ಒಂದು ಪಾರ್ಟಿ ಬೇಸಿಸ್‌ಮೇಲೆ ಕೆಲಸ ಕಾರ್ಯಗಳು ನಡೆಯುತ್ತವೆ. ಆಗ ಅವರಿಗೆ ಬೇಕಾದ ಹಾಗೆ ನಡೆದುಕೊಂಡು ಹೋಗುತ್ತಿದ್ದರು. ಅವರು ಹೇಳಿದ್ದು ಬಾಲ ಆಡಿಸುವುದಕ್ಕೆ ತಲೆ ಇದ್ದರೆ ಸಾಕು ಎಂದು ಹೇಳಿದ ಹಾಗೆ ಆಯಿತು. ಜಗತ್ತಿನಲ್ಲಿ ಎಲ್ಲೂ ಇಲ್ಲದೇ ಇರುವ ಪದ್ಧತಿಯನ್ನು ಹೇಳುವುದು ಅಷ್ಟು ಸೂಕ್ತವಲ್ಲ ಎಂದು ಹೇಳುತ್ತೇನೆ.

Mr. DEPUTY SPEAKER.—It is not the Mysore Government that conducts the elections.

ಶ್ರೀ ಎ. ಭೀಮಪ್ಪನಾಯಕ್.—ಯಾರೇ ಆಗಲಿ ಅವರಿಗೆ ಸ್ಥಾನ ಕೊಡುತ್ತೇವೆ. ಆದ್ದರಿಂದ ಎಲ್ಲೂ ಇಲ್ಲದೇ ಇದ್ದ ಉದಾಹರಣೆಗಳನ್ನು ಕೊಡಬಾರದು, ಪ್ರಪೋಸಲ್ಸ್ ಮಾಡಬಾರದು ಎಂದು ನಾನು ಅವರಿಗೆ ಹೇಳುತ್ತೇನೆ. ಅಮೇಲೆ ಈ ಶಾಸನಾಂಗದ ವಿಚಾರವನ್ನು ಶ್ರೀ ವೆಂಕಟಪ್ಪನವರು ಹೇಳಿದರು. ಶಾಸನಾಂಗ ಸ್ವತಂತ್ರವಾಗಿರಬೇಕೆಂದು ರಾಜ್ಯಾಂಗದಲ್ಲಿ ಉಲ್ಲೇಖಿತವಾಗಿದ್ದರೂ ಕೂಡ ಕ್ರಮವಿರುದ್ಧವಾಗಿ ಸರ್ಕಾರದವರು ಅದರಮೇಲೆ ಅಧಿಕಾರವನ್ನಿಟ್ಟುಕೊಂಡಿದ್ದಾರೆ. ಅದು ಸರಿಯಲ್ಲ. ಪ್ರತಿವರ್ಷವೂಕೂಡ ಏನಾದರೂ ಜವಾಬು ಹೇಳಿ, ಅವರಿಗೇಕೆ ಸ್ವಾತಂತ್ರ್ಯ ಅವರು ತಮ್ಮ ಕೈಯಲ್ಲೇ ಇರಬೇಕು ಎನ್ನುತ್ತಾರೆಯೇ ಹೊರತು ಇತರರೂ ತಮ್ಮಷ್ಟೇ ಯೋಗ್ಯರೂ, ದಕ್ಷರೂ, ಸತ್ಯವಂತರೂ ಆಗಿರುತ್ತಾರೆ ಎಂದು ತಿಳಿದುಕೊಂಡೇ ಇಲ್ಲ.

ಇವರ ಅಧಿಕಾರದ ಆಡಳಿತದಲ್ಲಿ, ಇವರ ಕೃಪಾಛತ್ರದಲ್ಲಿ ಯಾರಿಗಾದರೂ ಎರಡು ರೂಪಾಯಿಗಳ ಅಲೋಯನ್ಸ್ ಕೊಡುವುದಕ್ಕೆ ಹೇಳಿಕೊಳ್ಳಬೇಕು. ಇವರು ಇಲ್ಲವೆಂದರೆ ಬಾಯಿಮುಚ್ಚಿಕೊಂಡು ಸುಮ್ಮನೆ ಇರಬೇಕು. ಲೆಜಿಸ್ಲೇಚರ್ ಆಫೀಸಿನವರು overtime ಕೆಲಸ ಮಾಡುತ್ತಾರೆ. ತಮಗೆಲ್ಲ ಗೊತ್ತಿರುವಂತೆ ಒಬ್ಬ ಸ್ಟೆನೋಗ್ರಾಫರ್ (ರಿಪೋರ್ಟರ್) ವಿಚಾರ ತೆಗೆದುಕೊಂಡರೆ ಮಧ್ಯಾಹ್ನ 12 ಘಂಟೆಯಿಂದ ಪ್ರಾರಂಭ ಮಾಡಿ ಸಭೆ ಮುಕ್ತಾಯವಾಗುವವರೆಗೂ ಇದ್ದು ಇಲ್ಲಿ ನಡೆಯುವ ಭಾಷಣಗಳನ್ನೆಲ್ಲ ರಿಕಾರ್ಡ್ ಮಾಡಿಕೊಂಡು, ಅದನ್ನೆಲ್ಲ ಟೈಪ್ ಮಾಡಿ ಅಥವಾ ಬರೆದು ಎಲ್ಲರಿಗೂ ಕಳುಹಿಸಬೇಕು. ರಾತ್ರಿ 9-10 ಘಂಟೆಯವರೆಗೂ ಅವರುಗಳು ಆಫೀಸಿನಲ್ಲಿ ಕೆಲಸ ಮಾಡುವುದನ್ನು ನಾವು ನೋಡಿದ್ದೇವೆ. ಅವರಿಗೆ allowance ಕೊಡಬೇಕಾದದ್ದು ನ್ಯಾಯ ಮತ್ತು ಧರ್ಮ. ಇದನ್ನು ಸರ್ಕಾರದವರು ಪರಿಶೀಲಿಸಿ, allowance ಮೊದಲಿನಂತೆ ಕೊಡಬೇಕು ಎಂದು ಹೇಳುತ್ತೇನೆ.

ಈ ಸಂದರ್ಭದಲ್ಲಿ ಇನ್ನು ಒಂದು ವಿಷಯವನ್ನು ಮಾತ್ರ ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೇಲ್ಮನೆಗೆ ಸಂಬಂಧಪಟ್ಟ ಖರ್ಚೆಲ್ಲವೂ ಈ ಡಿಮ್ಯಾಂಡಿನಲ್ಲಿ ಸೇರಿದೆ. ಮೇಲ್ಮನೆ ನಿಜವಾಗಿ ಅನೇಕ ಉಪಯುಕ್ತವಾದ ಕೆಲಸಗಳನ್ನು ಮಾಡಿದೆ. ಆದರೆ ಅದಕ್ಕೆ ಖರ್ಚಾಗತಕ್ಕ ಹಣಕ್ಕೂ ಮತ್ತು ಅದರಿಂದ ಬರತಕ್ಕ ಉಪಯೋಗಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಮೇಲ್ಮನೆ ಇರುವುದು ಅಗತ್ಯವೇ ಎಂಬ ವಿಷಯವನ್ನು ಈ ಸಭೆಯವರು ಯೋಚನೆ ಮಾಡಬೇಕಾದದ್ದು ಅತ್ಯಗತ್ಯ. ಮೇಲ್ಮನೆ ಅಷ್ಟು ಉಪಯೋಗಕರವಾಗಿಲ್ಲವೆಂಬುದು ನನ್ನ ಖಚಿತವಾದ ಅಭಿಪ್ರಾಯವೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಮಾನ್ಯ ವಿರೋಧಪಕ್ಷದ ನಾಯಕರು ಮುಖ್ಯವಾಗಿ ಬ್ಯಾಲಟ್‌ಬಾಕ್ಸ್ ವಿಷಯವನ್ನು ಹೇಳಿದರು. ಇದನ್ನು ವಾಸ್ತವಾಂಶದ ಆಧಾರವಿಲ್ಲದೆ ಹೇಳುತ್ತಿದ್ದಾರೆಂದು ನನಗಾದರೂ ಅನ್ನಿಸುತ್ತಿದೆ.

Sri J. MOHAMED IMAM.—There are people who can demonstrate it. It is possible to open without damaging the seal.

Mr. DEPUTY SPEAKER.—Was there any election petition filed on the ground that the box was defective?

Sri J. MOHAMED IMAM.—I think it was done outside Mysore State. Not within the State.

Sri A. G. RAMACHANDRA RAO.—Such allegations have been made but nowhere they have been proved nor have they been accepted.

Sri S. SRINIVASA IYENGAR.—It is not an allegation. It is a possibility, Sir.

Sri A. G. RAMACHANDRA RAO.—That is why I say it is based more on fears than on realities. In the whole of India, elections have been held and in the conduct of elections the best representation for all parties are given. No allegation of the ballot box being tampered with has actually come to our notice.

Sri J. MOHAMED IMAM.—Any number of them.

Sri A. G. RAMACHANDRA RAO.—Well, Sir, if it could be demonstrated that it is possible to open it without damaging the seal, personally I have no objection. But my only feeling is that such allegations are based on fears and not on realities.

Regarding the separation of powers, the Hon'ble Sri V. Venkatappa told me what views I held before. I continue to hold the same views. As a matter of fact, the status of the Hon'ble Speaker and the Hon'ble Chairman has been placed on the same footing as that of Ministers and even in point of honours, they have been placed above them as this House knows. Regarding journeys such latitude which they did not enjoy before has been conceded after coming to an understanding between the Chairman and Speaker on the one hand and the Ministry on the other. Even regarding the appointment, the Board has been constituted consisting of Speaker and Chairman and their decision, the Government is not interfering with. Therefore, the state of affairs that existed before are not available today and if any further progress has to be made, I do not think Government will come in the way to put it on the basis that it is being worked in other States. Regarding the separation and enjoyment of powers by the Legislature and the independence they should have, I have absolutely no doubt that it is a sound principle.

Mr. DEPUTY SPEAKER.—He only wanted to see that whatever autonomy is obtaining in other legislature secretariats must be conceded in Mysore also.

Sri A. G. RAMACHANDRA RAO.—I said we have conceded thus far and if it is necessary to go further than this, we have no objection.

Regarding the allowances, I may bring to the notice of the House that I do not know how far the Hon'ble Member is correct in his statement. The charge, made as I understand, was that while other Departments were receiving allowances, Legislature Secretariat did not get the allowance.

Sri V. VENKATAPPA.—There is a Government Order. If you want, I will give it to you tomorrow.

Sri A. G. RAMACHANDRA RAO.—I feel it ought not to be there. I will get it examined, Sir. So far as I know, no Department is getting the allowance.

Sri S. SRINIVASA IYENGAR.—We do not want that Government should discontinue the payment of allowance to others. We want allowances to be paid to this staff too. Let it be made clear.

Sri A. BHEEMAPPA NAIK.—The same concessions should be shown to this Legislature Secretariat also.

Sri A. G. RAMACHANDRA RAO.—With these remarks, I submit that this Demand may be passed.

Mr. DEPUTY SPEAKER.—The question is :

> "That a sum not exceeding Rs. 25,09,000 be granted to defray the charges which will come in course of payment during the year ending 31st day of March 1957, in respect of 'General Administration (State Legislature and Election Charges)'."

The motion was adopted.

DEMAND No. 18.—EDUCATION.

37 EDUCATION.

Mr. DEPUTY SPEAKER.—Motion moved :

"That a sum not exceeding Rs. 4,87,53,000 be granted to the Government to defray the charges which will come in course of payment during the year ending 31st day of March 1957, in respect of 'Education'."

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಮಾನ್ಯಸಭಾಧ್ಯಕ್ಷರೇ, ಸರ್ಕಾರದವರು 4,87,53,000 ರೂಪಾಯಿಗಳ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದರ ಸಂಬಂಧದಲ್ಲಿ ಒಂದೆರಡು ಅಂಶಗಳನ್ನು ಪ್ರಸ್ತಾಪಮಾಡಲು ಇಷ್ಟಪಡುತ್ತೇನೆ. ಮೊದಲು University Education ಸಂಬಂಧದಲ್ಲಿ ಕೆಲವು ವಿಷಯಗಳನ್ನು ಹೇಳಲು ಬಯಸುತ್ತೇನೆ. ನಮ್ಮ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಲೆಕ್ಚರರುಗಳನ್ನೂ, ಅಸಿಸ್ಟೆಂಟ್ ಪ್ರೊಫೆಸರುಗಳನ್ನೂ, ಹಾಗೂ ಪ್ರೊಫೆಸರುಗಳನ್ನೂ ನೇಮಿಸತಕ್ಕ ವಿಷಯದಲ್ಲಿ ಕೆಲವು ಅಸಮಾಧಾನಗಳು ಈಚೆಗೆ ಉಂಟಾಗಿವೆ. ನಾವುಗಳೆಲ್ಲರೂ ಕೂಡ ಈ ಕೆಲಸಗಳನ್ನು ಕೊಡುವಾಗ ಯಾವವಿಧವಾದ ರೀತಿಯಲ್ಲಿಯೂ ಅಲ್ಲಿನ ಅಧ್ಯಾಪಕ ವರ್ಗದಲ್ಲಿ ಅಸಮಾಧಾನಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಇರಬೇಕು ಮತ್ತು ವಿದ್ಯಾಭ್ಯಾಸವನ್ನು ಹೇಳಿಕೊಡತಕ್ಕ ವಿಷಯದಲ್ಲಿ ಯಾವವಿಧದಲ್ಲಿಯೂ ಕೂಡ ಅಲ್ಲಿನ ಅಂತಸ್ತು ಕಡಿಮೆಯಾಗದ ರೀತಿಯಲ್ಲಿ ನೋಡಬೇಕು. ಈ ದೃಷ್ಟಿಯಿಂದ ಏನು ಮಾಡಬೇಕೆಂದು ಈ ಮಾನ್ಯಸಭೆಯ ಎಲ್ಲ ಸದಸ್ಯರೂ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆ ರೀತಿಯಾಗಿ ಹೇಳಿಕೊಂಡು ಬಂದಿದ್ದಾರೆ. ಈಚೆಗೆ ನಮ್ಮ ಮೈಸೂರು ಸರ್ಕಾರದವರು ಕೆಲವು ಅಸಿಸ್ಟೆಂಟ್ ಪ್ರೊಫೆಸರುಗಳನ್ನೂ ಮತ್ತು ಪ್ರೊಫೆಸರುಗಳನ್ನೂ ನೇಮಿಸುವುದರಲ್ಲಿದ್ದಾರೆಂದು ನಾನು ಕೇಳಿದ್ದೇನೆ. ಅದರಲ್ಲಿ ಕೆಲವರು ಉಪಾಧ್ಯಾಯರುಗಳು ಹತ್ತಾರು ವರ್ಷಗಳಿಂದ ವಿಶ್ವವಿದ್ಯಾನಿಲಯದಲ್ಲಿ ಕೆಲಸಮಾಡುತ್ತಿದ್ದರೂ ಕೂಡ, ಹಾಗೂ ಅವರ ಒಳ್ಳೆಯ ಕೆಲಸಕ್ಕಾಗಿ ಇದೇ ವಿಶ್ವವಿದ್ಯಾನಿಲಯದವರು ಡಾಕ್ಟರೇಟ್ ಡಿಗ್ರಿ ಮೊದಲಾದ ಪ್ರಶಸ್ತಿಗಳನ್ನು ಕೊಟ್ಟಿದ್ದರೂ ಕೂಡ ಅಂಥವರಿಗೆ ಯಾವವಿಧವಾದ ಪ್ರೋತ್ಸಾಹವೂ ಸಿಕ್ಕದೆ ಅವರ ಕೈಕೆಳಗೆ ವಿದ್ಯಾರ್ಥಿಗಳಾಗಿದ್ದು, ಉಪಾಧ್ಯಾಯರುಗಳಾದಂಥವರು ಅಸಿಸ್ಟೆಂಟ್ ಪ್ರೊಫೆಸರುಗಳಾಗಿರುವ ನಿದರ್ಶನ, ಸನ್ನಿವೇಶ ಇವೊತ್ತು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಂಟಾಗಿದೆ. ಒಂದು ಉದಾಹರಣೆ ಕೊಡಬಹುದಾದರೆ ಡಾಕ್ಟರ್ ಸಿ. ಡಿ. ಗೋವಿಂದರಾವ್ ಎಂಬವರು ಅಧ್ಯಾಪಕರಾಗಿದ್ದಾರೆ. ನಾನೂ ಒಬ್ಬ ಅವರ ವಿದ್ಯಾರ್ಥಿ. ಹಾಗೆಯೇ ಶ್ರೀಮಾನ್ ಅಣ್ಣಯ್ಯಗೌಡರು ಅವರ ವಿದ್ಯಾರ್ಥಿ. ನನಗಿಂತಲೂ ಅಣ್ಣಯ್ಯಗೌಡರು ಒಂದು ವರ್ಷ ಜೂನಿಯರ್. ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಶ್ರೀಮಾನ್ ಅಣ್ಣಯ್ಯಗೌಡರು ಈಗ ಅಸಿಸ್ಟೆಂಟ್ ಪ್ರೊಫೆಸರಾಗಿದ್ದಾರೆ. ಡಾಕ್ಟರ್ ಸಿ.ಡಿ. ಗೋವಿಂದರಾವ್ ಎಂಬುವರು ordinary lecturer ಆಗಿದ್ದಾರೆ. ಇಂಥ ಒಂದು ಪರಿಸ್ಥಿತಿ ನಿಜವಾಗಿಯೂ ತಪ್ಪಬೇಕಾದದ್ದು ಅತ್ಯಾವಶ್ಯಕವೆಂದು ನಾನು ಒತ್ತಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಅವರು ಈಗ ಎಲ್ಲಿ ಕೆಲಸ ಮಾಡುತ್ತಿದ್ದಾರೆ?

ಶ್ರೀ ಎ. ವಿ. ನರಸಿಂಹರೆಡ್ಡಿ.—ಕಾಲೇಜಿನಿಂದ ಪಾಸ್ ಆದವರು ಲೆಕ್ಚರರ್ ಆಗಿ ಕೆಲಸ ಮಾಡುತ್ತಿದ್ದು ಈಗ ಅಸಿಸ್ಟೆಂಟ್ ಪ್ರೊಫೆಸರಾಗಿದ್ದಾರೆ. ಮತ್ತು ಹಾಲಿ ನಮ್ಮ ಮುಖ್ಯಮಂತ್ರಿಗಳ ಆಫೀಸಿನಲ್ಲಿದ್ದಾರೆ.

ಸ್ವಾಮಿ, ಈ ವಿಧವಾದ ನೇಮಕಗಳು ವಿಶ್ವವಿದ್ಯಾನಿಲಯದಲ್ಲಿ ಆಗುವುದಾದರೆ, ಅಲ್ಲಿ ಕೆಲಸಮಾಡುವ ಅಧ್ಯಾಪಕರಿಗೆ ಏನು ಉತ್ಸಾಹವಿರುತ್ತದೆನ್ನುವುದನ್ನು ನಾವುಗಳೆಲ್ಲರೂ ಕೂಡ ಯೋಚಿಸಬೇಕು. ಹುಡುಗರು ಮುಂದಿನ ಸತ್ಪ್ರಜೆಗಳಾಗಬೇಕು, ವಿದ್ಯಾಭ್ಯಾಸವು ಮುಂದುವರಿಯಬೇಕು ಎಂದು ನಾವುಗಳೆಲ್ಲ ನಿರೀಕ್ಷೆ ಮಾಡುತ್ತೇವೆ. ಅದು ಎಲ್ಲಿ ಈಡೇರುತ್ತಿದೆ ಎಂದು ಸರ್ಕಾರವನ್ನು ಕೇಳುತ್ತೇನೆ. ಇನ್ನು ಹೆಚ್ಚು ಹೇಳುವುದಕ್ಕೆ ಬಯಸದೆ, ಸರ್ಕಾರದವರು ಈ ಕೂಡಲೇ ಇಂಥ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಪ್ರಯತ್ನಮಾಡುತ್ತಾರೆಂದು ನಿರೀಕ್ಷಿಸಿ ಆ ಮಾತನ್ನು ಬಿಡುತ್ತೇನೆ.

ಸರ್ಕಾರದವರು ಅನೇಕ ಖಾಸಗಿ ಸಂಸ್ಥೆಗಳಿಗೆ ಸಹಾಯ ದ್ರವ್ಯವನ್ನು ಕೊಟ್ಟು ಅವರು ಸಮಾಜದ ಮೇಲ್ಮೆಗೆ ಕೆಲಸ ಮಾಡುವುದಕ್ಕೆ ಪ್ರೋತ್ಸಾಹನೀಡುತ್ತಿದ್ದಾರೆ. ಇದರಲ್ಲಿ ಮುಖ್ಯವಾಗಿ ಪ್ರಸ್ತಾಪಮಾಡುವುದಾದರೆ ಭಾರತ ಸೇವಾದಳ ಮತ್ತು ಸ್ಕೌಟ್ ಸಂಸ್ಥೆ ಇವೆರಡರ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಭಾರತ ಸೇವಾದಳದವರಿಗೆ ಕಳೆದ ಮೂರು ಸಾಲುಗಳಿಂದಲೂ ಕೂಡ, 1,50,000 ರೂಪಾಯಿಗಳ ಗ್ರಾಂಟನ್ನು ಸರ್ಕಾರದವರು ಕೊಡುತ್ತಿದ್ದಾರೆ. ಅಲ್ಲದೆ ಇವರಿಗೆ Compost making ಹಾಗೂ Physical training ಎಂದು ಬೇರೆ ಬಾಬುಗಳಲ್ಲಿಯೂ ಹಣವನ್ನು ಬಡ್ಜೆಟ್‌ನಲ್ಲಿ ನಮೂದು ಆಗದೆ ಇದ್ದರೂ ಕೂಡ direct grant ಮೂಲಕ ಕೊಟ್ಟಿದ್ದಾರೆ ಎಂದು ಕೇಳಿದ್ದೇನೆ. ಇದು ಸುಮಾರು ಮೂರು ಲಕ್ಷದವರೆಗೂ ಆಗುತ್ತದೆಂದು ಕೇಳಿದ್ದೇನೆ, 1956-57 ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ 1,80,000 ರೂಪಾಯಿಗಳನ್ನು ಸೇವಾದಳದವರಿಗೆ ಕೊಡುವುದಕ್ಕೆ ತೋರಿಸಿದ್ದಾರೆ. ಹಿಂದೆ ಸ್ಕೌಟ್ ಸಂಸ್ಥೆ ಮತ್ತು ಭಾರತ ಸೇವಾದಳ ಇವೆರಡಕ್ಕೂ ಒಂದೇ ಸಮನಾಗಿ ಹಣವನ್ನು ಕೊಡುತ್ತಿದ್ದರು. ಈಗ ಎರಡು ವರ್ಷಗಳಿಂದಲೂ ಸ್ಕೌಟ್ ಸಂಸ್ಥೆಗೆ ಕೇವಲ 75 ಸಾವಿರ ರೂಪಾಯಿ ಕೊಡುತ್ತಿದ್ದಾರೆ. ಈ ವರ್ಷ ಅದನ್ನು 50 ಸಾವಿರ ರೂಪಾಯಿಗಳಿಗೆ ಇಳಿಸಿದ್ದಾರೆ. ನಾನು ಈ ವಿಷಯವನ್ನು ಪ್ರಸ್ತಾಪ ಮಾಡುವಾಗ ಸರ್ಕಾರದವರ ಗಮನಕ್ಕೆ ಏನನ್ನು ತರಬೇಕು ಎಂದು ಬಯಸುತ್ತೇನೆಂದರೆ, ಭಾರತ ಸೇವಾದಳದವರು ಅಧಿಕಾರಿ ವರ್ಗದಲ್ಲಿರತಕ್ಕವರು. ಅನೇಕರು ಸಂಬಳ ಸಾರಿಗೆಗಳನ್ನು ತೆಗೆದುಕೊಳ್ಳುತ್ತಾರೆ. ಅವರ ಓಡಾಟದ ಅನುಕೂಲಗಳಿಗೆ ಒಂದಲ್ಲ, ಎರಡು ವ್ಯಾನ್‌ಗಳಿವೆ. ಈ ಸಂಸ್ಥೆ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟರಮಟ್ಟಿನ ಸೇವೆಮಾಡುತ್ತಿದೆ ಎನ್ನುವುದಕ್ಕೆ ಒಂದು ನಿದರ್ಶನವನ್ನು ಹೇಳ ಬಯಸುತ್ತೇನೆ. ವರ್ಷದ ಕೊನೆಯೊಳಗೆ ಅಮಲ್ದಾರರ ಹೆಸರಿಗೆ 200-300 ರೂಪಾಯಿಗಳ ಚೆಕ್ ಕಳುಹಿಸಿ ನಿಮ್ಮ ತಾಲ್ಲೂಕಿನ ಯಾವುದಾದರೂ ಒಂದು ಹಳ್ಳಿಯನ್ನು ಆರಿಸಿಕೊಂಡು ಅಲ್ಲಿ ಒಂದು ಗ್ರಾಮ ನೈರ್ಮಲ್ಯದ ಕೆಲಸ, ರಸ್ತೆ ರಿಪೇರಿ ಕೆಲಸ ಇತ್ಯಾದಿಗಳನ್ನು ಮಾಡಿ ಎಂದು ತಿಳಿಸುತ್ತಾರೆ. ಅಮಲ್ದಾರರು ಆ ಹಣಕ್ಕೆ ಲೆಕ್ಕ ಕೊಟ್ಟರೆ ಆಯಿತು. ಈ ರೀತಿಯಾಗಿ ಇವೊತ್ತು

(ಶ್ರೀ ಎ. ವಿ. ನರಸಿಂಹರೆಡ್ಡಿ)

ಕೆಲಸಗಳು ನಡೆಯುತ್ತಿವೆ. ಇದು ನಿಜವಾದ ಅಂಶ. ಇವೊತ್ತು ಅವರು ಮಾಡುತ್ತಿರತಕ್ಕ ಸಮಾಜ ಸೇವೆ ಇದು. ಇಷ್ಟಕ್ಕೆ ಪ್ರತಿವರ್ಷ ಒಂದು ಲಕ್ಷ ರೂಪಾಯಿ, ಒಂದು ಲಕ್ಷಕ್ಕೆ ಮೇಲ್ಪಟ್ಟು ಹಣ ಅವರಿಗೆ ಸಿಕ್ಕುವುದಾಗಿದೆ. ಇದಲ್ಲದೆ ಅಧಿಕಾರವರ್ಗದಲ್ಲಿರತಕ್ಕವರು 1,000 ರೂಪಾಯಿಗಳಿಂದ 1,500 ರೂಪಾಯಿಗಳವರೆಗೂ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಸಮಾಜಸೇವಾಕರ್ತರು ಹಿಡಿಯುವ ಹಾದಿಯೇ ಇದು. ಏನೋ ಕೆಲಸಮಾಡುತ್ತೇವೆಂದು ಒಂದು ಮೋಟಾರ್ ಸೈಕಲ್, ಒಂದು ಸಣ್ಣ ವ್ಯಾನ್, ಒಂದು ದೊಡ್ಡವ್ಯಾನ್ ಇಷ್ಟನ್ನೂ ಸಮಾಜಸೇವಾ ಹೆಸರಿನಲ್ಲಿ ತೆಗೆದುಕೊಳ್ಳುವುದು. ಇವುಗಳನ್ನು ಉಪಯೋಗಿಸಿಕೊಂಡು ಸುಖವಾಗಿ ಓಡಾಡಿಕೊಂಡು ಲೋಲುಪ್ತರಾಗಿ ಹಣವನ್ನು ಖರ್ಚುಮಾಡುವುದು, ಹೀಗೆ ಈ ಸೇವಾದಳದ ಕೆಲಸ ನಡೆಯುತ್ತಿದೆ. ಆದುದರಿಂದ ಇದನ್ನು ಕೂಡಲೇ ಸರ್ಕಾರದವರು ರದ್ದುಮಾಡಬೇಕೆಂದು ಸರ್ಕಾರದವರಿಗೆ ಖಚಿತವಾಗಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಭಾರತ ಸೇವಾದಳಕ್ಕೆ

2 P.M.

ಸಹಾಯಮಾಡುವ ವಿಷಯದಲ್ಲಿ ಮಾನ್ಯಮಂತ್ರಿಗಳು ಕಳೆದ ಸಾಲಿನಲ್ಲಿ ಪ್ರಸ್ತಾಪಮಾಡಿದ್ದಾಗ ಕೊಟ್ಟ ಉತ್ತರ ಈಗ ಅನ್ವಯಿಸುವುದಿಲ್ಲ. ಅದು ನಾಲ್ಕೈದು ವರ್ಷಗಳ ಹಿಂದಿನ ಮಾತು, ಈಗ ಪರಿಸ್ಥಿತಿ ಬದಲಾವಣೆಯಾಗಿರುವುದರಿಂದ ಅದನ್ನು ತೀವ್ರವಾಗಿ ಗಮನಿಸಿ ಉತ್ತರ ದಯಪಾಲಿಸದಿದ್ದರೆ ಅದರಿಂದ ಸಮಾಧಾನವಾಗುವುದಿಲ್ಲವೆಂಬುದನ್ನು ಗಮನಿಸಬೇಕು. ಹಾಗೆಯೇ ವಯಸ್ಕರ ಶಿಕ್ಷಣ ಸಮಿತಿಯ ವಿಷಯದಲ್ಲೂ ಈ ಸರ್ಕಾರ ಒಂದೊಂದು ಸಮಯದಲ್ಲಿ ಒಂದೊಂದು ರೀತಿಯ ಅಭಿಪ್ರಾಯ ಪಡುತ್ತದೆ. ಈಗ್ಗೆ ಮೂರು ವರ್ಷಗಳ ಹಿಂದೆ 5 ಲಕ್ಷ ರೂಪಾಯಿಗಳ ಸಹಾಯ ದ್ರವ್ಯಕೊಡುತ್ತಿದ್ದರು. ಕಳೆದ ಎರಡು ವರ್ಷಗಳಲ್ಲಿ 1-1½ ಲಕ್ಷಕ್ಕೆ ಇಳಿಸಿದರು. ಈ ವರ್ಷದಲ್ಲಿ 4 ಲಕ್ಷಕ್ಕೆ ಏರಿದೆ. ರಾಜಕೀಯ ಕಾರಣಗಳಿಗಾಗಿ ಬೇಕಾದ ಕಾರ್ಯಕ್ಕೆ ಹಣ ಖೋತಾಮಾಡುವುದು ಸರಿಯಲ್ಲ. ಸರ್ಕಾರದಲ್ಲಿ ಫೇಟ್ರನೈಸ್ ಆಗಿರುವ ಸಂಸ್ಥೆ ಒಂದೇ ಸಮವಾಗಿ ಹಣ ಕೊಡುವುದು ಸರಿಯಾದ ಮಾರ್ಗ, ಹಾಗಿಲ್ಲದೆ ಈಗ ಅನುಸರಿಸುತ್ತಿರುವ ರೀತಿ ಧರ್ಮಯುತವಾದುದಲ್ಲವೆಂದು ಹೇಳ ಬಯಸುತ್ತೇನೆ.

ಸ್ಕೌಟ್ ಸಂಸ್ಥೆಗೆ ಕೇವಲ 50 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಇದಕ್ಕೇಕೆ ಇಷ್ಟು ಕಡಮೆ ಕೊಟ್ಟಿದೆಯೋ ತಿಳಿಯದು. ಈ ಸಂಸ್ಥೆಯವರು ರಾಜಕೀಯಗೊಂದಲ ಹಚ್ಚಿಕೊಳ್ಳದೆ ಕೇವಲ ಸಮಾಜಸೇವೆ ಮಾಡಿದ್ದಾರೆ. ಮಾನ್ಯ ವಿದ್ಯಾ ಮಂತ್ರಿಗಳು ಪ್ರತ್ಯಕ್ಷವಾಗಿ ಅವರು ಮಾಡತಕ್ಕ ಸೇವೆಯನ್ನು ನೋಡಿದ್ದಾರೆ. ಅಮಲ್ದಾರರಿಗೆ 300 ರೂಪಾಯಿಗಳಿಗೆ ಚೆಕ್ ಕಳುಹಿಸುವ ಮೂಲಕ ಸಮಾಜಸೇವೆ ಮಾಡುತ್ತಿಲ್ಲ. ಸಂಸ್ಥೆಯವರೇ ಖುದ್ದಾಗಿ ಹೋಗಿ ಸ್ಥಳಗಳನ್ನು ಪರೀಕ್ಷೆಮಾಡಿ ಜನಗಳಲ್ಲಿ ದೇಶಸೇವಾ ಮನೋಭಾವನೆ ಬೆಳೆಯುವಂತೆ ಕೆಲಸ ಮಾಡುತ್ತಿದ್ದರೂ ಒಂದೊಂದು ವರ್ಷ ಒಂದೊಂದು ಟೀಕೆ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಇನ್ನು ಮುಂದಾದರೂ ಇದನ್ನು ಗಮನಿಸಿ ಸ್ಕೌಟ್ ಸಂಸ್ಥೆಗೆ ಹೆಚ್ಚಿನ ದ್ರವ್ಯ ಸಹಾಯ ಸಿಕ್ಕುವಹಾಗೆ ಏರ್ಪಾಡುಮಾಡುತ್ತಾರೆಂದು ಭಾವಿಸುತ್ತೇನೆ.

ಮಾನ್ಯಮಂತ್ರಿಗಳು ಎರಡು ವರ್ಷಗಳ ಹಿಂದೆ ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿಗೆ ಬಂದಿದ್ದರು. ಅಲ್ಲಿ ಭಾಷಣ ಮಾಡಿದಾಗ ಆ ಊರಿಗೆ ಹೈಸ್ಕೂಲನ್ನು ಕೊಡುವುದಾಗಿ ಹೇಳಿದರು. ಆದರೆ ಇನ್ನೂ ಆ ಕೆಲಸವಾಗಿಲ್ಲ. ಎರಡು ವರ್ಷಗಳಿಗೆ ಹಿಂದೆ ಅವರು ಸಾರ್ವಜನಿಕ ಹಿತಸಾಧನೆಯಾಗುವಂತೆ ಕೆಲಸ ಮಾಡುತ್ತಿದ್ದರು, ಏನಾದರೂ ಕೆಲಸ ಮಾಡುವುದಾಗಿ ಹೇಳಿದರೆ ಅದನ್ನು ಈಡೇರಿಸಲು ಬಹಳ ಎಚ್ಚರಿಕೆಯಿಂದ ಪ್ರಯತ್ನ ಪಡುತ್ತಿದ್ದರು. ಕಳೆದ ಮೂರು ವರ್ಷಗಳಿಂದ ಆ ಹಾದಿಯನ್ನು ಬಿಟ್ಟಿದ್ದಾರೆ, ಕಾರಣ ಗೊತ್ತಿಲ್ಲ. ಹಿಂದೆ ಯಾವ ರೀತಿ ಹೇಳಿದ ಮಾತನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದರೋ ಈಗ ಮೂರು ವರ್ಷಗಳಿಂದ ಆರೀತಿ ಮಾಡುತ್ತಿಲ್ಲ. ಕೆಂಗೇರಿಯಲ್ಲಿ ಕಟ್ಟಡ ಒದಗಿಸಿದರೆ ಹೈಸ್ಕೂಲು ಕೊಡಬಹುದು, ವಸತಿ ಸೌಕರ್ಯಕೊಟ್ಟರೆ ಏರ್ಪಾಡು ಮಾಡುತ್ತೇವೆ ಎಂದು ಸರ್ಕಾರದವರು ಹೇಳಿದ್ದರು. ಅಲ್ಲಿ ಗುರುಕುಲಾಶ್ರಮಕ್ಕೆ ಸಂಬಂಧಪಟ್ಟ ಕಟ್ಟಡವನ್ನು ಬಿಟ್ಟುಕೊಡುವುದಾಗಿ ಮುಖ್ಯ ಮಂತ್ರಿಗಳಿಗೆ ಹೇಳಿದಮೇಲೆ ಮುಂದಿನ ಸಲ ಕೊಡುತ್ತೇವೆಂದು ಹೇಳಿದರು. ಪ್ರಶ್ನೋತ್ತರಗಳ ಕಾಲದಲ್ಲಿ ಜವಾಬು ಕೊಡುವಾಗ ಹೇಳಿದ್ದರು. ಈವರೆಗೂ ಕೆಂಗೇರಿಯಲ್ಲಿ ಹೈಸ್ಕೂಲನ್ನು ಪ್ರಾರಂಭಿಸಿಲ್ಲ. ಹೆಸರುಘಟ್ಟದಲ್ಲಿ ಒಂದು ಹೈಸ್ಕೂಲನ್ನು ಪ್ರಾರಂಭ ಮಾಡಿದರು. ಅದರ ವಿಷಯ ಹೇಳುವುದಾದರೆ ಖಾಸಗಿ ವ್ಯಕ್ತಿಯೊಬ್ಬರು ಅದನ್ನು ವಹಿಸಿಕೊಂಡು ಅವರೇ ಪ್ರಾರಂಭಿಸಿದರು. ಉಪಾಧ್ಯಾಯರ ಸಂಬಳ ಸಾರಿಗೆ ಕೊಡಲು ತಾಪತ್ರಯವಾಗಿ ಆ ಸ್ಕೂಲು ಮುಚ್ಚುವ ಸ್ಥಿತಿಯಲ್ಲಿದೆ. ಹೈಸ್ಕೂಲುಗಳನ್ನು ಕೊಡುವ ವಿಷಯದಲ್ಲಾಗಲಿ ಅಥವಾ ಮಾಧ್ಯಮಿಕ ಶಾಲೆ ಕೊಡುವ ವಿಷಯದಲ್ಲಾಗಲಿ ಅಥವಾ ಪ್ರೈಮರಿ ಸ್ಕೂಲು ಕಟ್ಟಿಸುವುದರಲ್ಲಾಗಲಿ ನಿರ್ದಿಷ್ಟವಾದ ಕಾರ್ಯಕ್ರಮ ಪಟ್ಟಿ ಹಾಕಿ ಅದರಂತೆ ಕೆಲಸಮಾಡುತ್ತಿಲ್ಲವೆಂಬುದು ಈಗ ಸರ್ಕಾರದವರು ಅನುಸರಿಸುತ್ತಿರುವ ನೀತಿಯಿಂದ ಗೊತ್ತಾಗುತ್ತದೆ. ಸರ್ಕಾರದವರು ಸ್ಕೂಲು ಕೊಡುವ ವಿಷಯದಲ್ಲಿ ಇರುವ ಹಿನ್ನೆಲೆಯನ್ನು ಪರಿಶೀಲಿಸಿದರೆ ಖಂಡಿತ ಅದು ಅಸಂಬದ್ಧ. ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಹೇಳಬೇಕಾಗಿದೆ. ಚನ್ನಪಟ್ಟಣದಲ್ಲಿ ಅಲ್ಲಾಳಸಂದ್ರದಲ್ಲಿ ಒಂದು ಹೈಸ್ಕೂಲನ್ನು ಪ್ರಾರಂಭಿಸಿದ್ದಾರೆ. ಅಲ್ಲಿ ಸಾಕಾದಷ್ಟು ವಿದ್ಯಾರ್ಥಿಗಳು ಬಾರದೆ ಇನ್ನೊಂದು ಕಡೆಗೆ ಅಲ್ಲಿನ ಸ್ಕೂಲನ್ನು ಬದಲಾಯಿಸಬೇಕೆಂದಿದ್ದಾರೆ. ಅನಿರ್ದಿಷ್ಟವಾದ ರೀತಿಯಲ್ಲಿ ಸರ್ಕಾರದವರು ಶಾಲೆ ಕೊಡುತ್ತಿದ್ದಾರೆಂಬುದಕ್ಕೆ ಇದೆಲ್ಲಾ ಉದಾಹರಣೆಗಳಾಗಿವೆ. ಹೈಸ್ಕೂಲ್ ವಿಷಯ ಇಲ್ಲಿಗೆ ಬಿಡುತ್ತೇನೆ.

ಇನ್ನು ಪ್ರೈಮರಿ ಸ್ಕೂಲು ಉಪಾಧ್ಯಾಯರ ವಿಚಾರ ಹೇಳುತ್ತೇನೆ. ಈಚೆಗೆ ಸರ್ಕಾರದವರು ಟ್ರೈನಿಂಗ್ ಆಗದಿದ್ದರೆ ಪ್ರಮೋಷನ್ ಕೊಡಕೂಡದೆಂದು ಗೊತ್ತುಮಾಡಿದ್ದಾರೆ, ಟ್ರೈನಿಂಗ್ ಒಂದರಿಂದ ಮೂರು ವರ್ಷಗಳವರೆಗೂ ಇದೆ. ಆ ಸಮಯದಲ್ಲಿ ಕೆಲವರಿಗೆ ತೊಂದರೆಯಾಗುತ್ತಿದೆ. ಟ್ರೈನಿಂಗ್ ಪೀರಿಯಡ್‌ನಲ್ಲಿ ಟ್ರೈನಿಂಗ್‌ಗೆ ಹೋಗಿರುವವರಿಗೆ ಇಂಕ್ರಿಮೆಂಟ್ಸ್ ಕೊಡುವುದಿಲ್ಲ. ಅಲ್ಲದೇ ಈ ಇಲಾಖೆಯಲ್ಲಿರುವ ಟ್ರೈನಿಂಗ್ ಆಗಿರುವವರಿಗೆ ಟ್ರೈನಿಂಗಿಗೆ ಹೋಗಿರುವವರಷ್ಟೇ ಸರ್ವಿಸ್ಸಾಗಿದ್ದರೂ ಸಹ ಟ್ರೈನಿಂಗಿಗೆ ಹೋದವರು ವಾಪಸು ಬರುವಷ್ಟರಲ್ಲೇ ಎರಡು ಮೂರು ಇಂಕ್ರಿಮೆಂಟ್ಸ್ ಬಂದಿರುತ್ತವೆ; ಟ್ರೈನಿಂಗ್ ಮುಗಿಸಿಕೊಂಡು ಉಪಾಧ್ಯಾಯರು ಶಾಲೆಗೆ ಬರುವ ಹೊತ್ತಿಗೆ ಅವರಷ್ಟೇ ಸರ್ವಿಸ್ ಆಗಿರುವವರಿಗೆ 10—15 ರೂಪಾಯಿ ಸಂಬಳ ಹೆಚ್ಚಾಗಿ ಬರುತ್ತಿರುತ್ತದೆ. ಅದೇ ಸೌಲಭ್ಯ ಟ್ರೈನಿಂಗ್ ಆಗದವರಿಗಿಲ್ಲ. ಟ್ರೈನಿಂಗಿಗೆ ಹಾಕಿದರೂ ಕೂಡ ಅಂಥ ಉಪಾಧ್ಯಾಯರು ಕೆಲಸಮಾಡುತ್ತಿದ್ದಾರೆಂದು ಗಣನೆಗೆ

ತೆಗೆದುಕೊಂಡರೆ ಈ ತೊಂದರೆ ನಿವಾರಣೆಯಾಗುತ್ತದೆ. ಇದನ್ನು ಸರ್ಕಾರದವರು ಯೋಚನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನೊಂದು ಅಂಶ ತಾಲ್ಲೂಕು ಮಟ್ಟದಲ್ಲಿರುವ ಸ್ಕೂಲು ಇನ್‌ಸ್ಪೆಕ್ಟರುಗಳು ಇನ್‌ಸ್ಪೆಕ್ಟರುಗಳಾಗಿಯೇ ಇದ್ದರೆ 55 ವರ್ಷ ವಯಸ್ಸಾದ ಕೂಡಲೆ ರಿಟೈರ್ ಆಗಬೇಕೆಂದು ಗೊತ್ತುಮಾಡಿದ್ದಾರೆ. ಅದೇ ಅವರು ಮಿಡ್ಲ್ ಸ್ಕೂಲಿನಲ್ಲಿ ಅಥವಾ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರೆ 60 ವರ್ಷಗಳವರೆಗೆ ಸರ್ವಿಸ್ ಮಾಡಬಹುದು. ಇದು ವಿಚಿತ್ರವಾಗಿದೆ. ಸಾಮಾನ್ಯವಾಗಿ ಇಲಾಖೆಯಲ್ಲಿ ಅನುಭವಸ್ಥರಾದ ಉಪಾಧ್ಯಾಯರು ಇನ್‌ಸ್ಪೆಕ್ಟರಾಗಿ ಕೆಲಸಮಾಡುತ್ತಿದ್ದಾರೆ. ಅವರು 55 ಅಥವಾ 54 ವರ್ಷ ವಯಸ್ಸಾಗುವುದರೊಳಗೇ ಇನ್‌ಸ್ಪೆಕ್ಟರ ವೃತ್ತಿ ಬೇಕಾಗಿಲ್ಲ, ಉಪಾಧ್ಯಾಯರಾಗಿ ಹಾಕಿ ಎಂದು ಕೇಳಿದ್ದರೆ ಹಾಕುತ್ತಿದ್ದರು. ಹಾಗೆ ಕೆಲವರು ಮಾಡಿಕೊಳ್ಳಬೇಕಾದ ಸಂದರ್ಭ ಬಂದಿದೆ. ಅದೇ ಇನ್‌ಸ್ಪೆಕ್ಟರಾಗಿಯೆ ಇರುವವರಿಗೆ 55 ವರ್ಷಗಳವರೆಗೂ ಇನ್‌ಸ್ಪೆಕ್ಟರಾಗಿದ್ದರೆ ಐದು ವರ್ಷ ಹೆಚ್ಚಾಗಿ ಸರ್ವಿಸ್ಸಿನಲ್ಲಿರುವುದಕ್ಕೆ ಅವಕಾಶವಿಲ್ಲ. ಇದು ನಿಜವಾಗಿಯೂ ಆಶ್ಚರ್ಯಕರವಾದ ಅಂಶ. ಇದನ್ನು ಕೂಡಲೆ ಸರಿಪಡಿಸಬೇಕು. ಇದರಿಂದ ಅನರ್ಹರು ಯಾರೋ ಅವರನ್ನು ಇನ್‌ಸ್ಪೆಕ್ಟರಾಗಿ ತೆಗೆದುಕೊಳ್ಳಬೇಕು, ಅನುಭವಸ್ಥರನ್ನು ಉಪಾಧ್ಯಾಯರಾಗಿ ವಾಪಸು ಕಳುಹಿಸಬೇಕು ಎನ್ನುವ ಪರಿಸ್ಥಿತಿ ಬರುತ್ತಿದೆ. ಐದು ವರ್ಷ ಹೆಚ್ಚಾಗಿ ಸರ್ವಿಸ್ ಸಿಕ್ಕುವುದು ಎಂಬ ಬೆನಿಫಿಟ್ ದೃಷ್ಟಿಯಿಂದ ಅನೇಕ ಹೆಚ್ಚು ಕಡಿಮೆಗಳಾಗುತ್ತವೆ. ಆದ್ದರಿಂದ ಉಪಾಧ್ಯಾಯರಾಗಿರಲಿ ಅಥವಾ ಇನ್‌ಸ್ಪೆಕ್ಟರಾಗಿರಲಿ 60 ವರ್ಷಗಳವರೆಗೆ ಸರ್ವಿಸ್‌ನಲ್ಲಿರುವುದಕ್ಕೆ ಅವಕಾಶ ಕೊಟ್ಟರೆ ಇಂಥ ಲೋಪ ನಿವಾರಣೆಯಾಗುತ್ತದೆ. ಇದನ್ನು ಸರಿಪಡಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ಪ್ರಭಾಕರ್ (ನೆಲಮಂಗಲ–ಅನುಸೂಚಿತ ಜಾತಿಗಳು).—ಸ್ವಾಮಿ, "ಸಂಸ್ಥಾನದಲ್ಲಿ ಸರ್ಕಾರದವರೇ ಉದ್ಯಮಶೀಲರಾಗಿ ಅನೇಕ ಮೂಲ ಶಿಕ್ಷಣದ ಸ್ಕೂಲುಗಳನ್ನೂ ಮತ್ತು ಸಾರ್ವಜನಿಕ ಹಾಸ್ಟೆಲುಗಳನ್ನೂ ಏರ್ಪಡಿಸುವುದರ ಅವಶ್ಯಕತೆಯನ್ನು ಚರ್ಚಿಸುವುದಕ್ಕಾಗಿ" ಎಂಬ ಖೋತಾ ನಿರ್ಣಯದ ಮೇಲೆ ಒಂದೆರಡು ಅಂಶಗಳನ್ನು ಸರ್ಕಾರಕ್ಕೆ ತಿಳಿಸಲು ಪ್ರಯತ್ನಪಡುತ್ತೇನೆ. ಇತ್ತೀಚೆಗೆ ಸರ್ಕಾರದವರು ಭೂದಾನ, ವಿದ್ಯಾದಾನ ಎಂಬ ಹೊಸ ಕಾರ್ಯಕ್ರಮವನ್ನು ವಿದ್ಯಾ ಇಲಾಖೆಯಲ್ಲಿ ಕೈಕೊಂಡಿರತಕ್ಕದ್ದು ಬಹಳ ಸಂತೋಷಕರವಾದ ವಿಚಾರ. ಈ ಭೂದಾನ-ವಿದ್ಯಾದಾನದ ಜಯ ಮತ್ತು ಅದರಿಂದ ಉಂಟಾಗತಕ್ಕ ಲಾಭವೆಷ್ಟು ಎಂಬುದನ್ನು ತಿಳಿಸುತ್ತೇನೆ. ಈಗಾಗಲೆ ಇದರ ಫಲ ಅಷ್ಟಾಗಿ ಕಂಡುಬರದಿದ್ದರೂ ಕೂಡ, ಕಾಂಗ್ರೆಸ್ ಸರ್ಕಾರದವರೂ ಮತ್ತು ಗಾಂಧೀಜಿಯವರೂ ನಮ್ಮ ದೇಶದ ವಿದ್ಯಾಭ್ಯಾಸದಲ್ಲಿ ಪ್ರಗತಿಯಾಗಬೇಕಾದರೆ ದೇಶ ಅನುಸರಿಸಬೇಕಾದ ವಿದ್ಯಾಭ್ಯಾಸ ಪದ್ಧತಿ ಮೂಲಶಿಕ್ಷಣ ವಿದ್ಯಾಭ್ಯಾಸ ಎಂದು ಹೇಳುತ್ತಿದ್ದರು. ಆ ಕ್ರಮವೇನಿದೆಯೋ ಅದಕ್ಕೂ ಇದಕ್ಕೂ ತೀರ ಹತ್ತಿರ ಸಂಬಂಧವಿದೆ ಎಂದು ಯೋಚಿಸಿ ಅದಕ್ಕೆ ಸಂಬಂಧಪಟ್ಟ ಹಾಗೆ ಸ್ವಲ್ಪ ಭೂಮಿಯನ್ನು ಸ್ಕೂಲುಗಳಿಗಾಗಿ ಒದಗಿಸಿದ್ದಾರೆ. ಅದನ್ನು ಕೃಷಿಮಾಡಿ ತರ್ಕಾರಿ ಹಾಕುವುದು, ಹತ್ತಿ ಗಿಡ ಹಾಕುವುದು ಮುಂತಾದ್ದನ್ನು ಮಾಡಿದರೆ ಬೇಸಾಯಕ್ಕೂ ಮತ್ತು ಅಕ್ಷರಾಭ್ಯಾಸಕ್ಕೂ ಇರುವ ಸಂಬಂಧವನ್ನು ಹತ್ತಿರಕ್ಕೆ ತಂದಹಾಗಾಗುತ್ತದೆ, ಅದಕ್ಕೆ ಮೂಲ ಶಿಕ್ಷಣ ವಿದ್ಯಾಭ್ಯಾಸ ಸುಲಭವಾದ ಮಾರ್ಗ ಎಂದು ಈ ಒಂದು ಕಾರಣದಿಂದ ಮೈಸೂರು ಸರ್ಕಾರದವರು ಕೈಕೊಂಡಿರುವ ಭೂದಾನ—ವಿದ್ಯಾದಾನ ಚಳವಳಿ ಕಾಲದಲ್ಲಿ ಸುಮಾರು 30—32 ಸಾವಿರ ಎಕರೆ ಜಮೀನನ್ನು ಸಾರ್ವಜನಿಕರು ನೀಡಿದ್ದಾರೆ. ಇದರಿಂದ ಗ್ರಾಮಾಂತರಗಳಲ್ಲಿರುವ ಜನರು ಸರ್ಕಾರದವರು ಕೈಕೊಂಡಿರುವ ಈ ಯೋಜನೆಗೆ ಎಷ್ಟುಮಟ್ಟಿಗೆ ಬೆಂಬಲ ನೀಡುತ್ತಿದ್ದಾರೆಂಬುದು ನಿರ್ವಿವಾದವಾದ ವಿಚಾರವೇ ಆಗಿದೆ. ಇದನ್ನು ರೂಪುಗೊಳಿಸಿ ಮೈಸೂರು ದೇಶಕ್ಕೆ ತಕ್ಕ ವ್ಯವಸ್ಥೆ ಮಾಡುವ ಅಧಿಕಾರ ಸರ್ಕಾರಕ್ಕಿದೆ. ಸರ್ಕಾರದವರು ಹೆಚ್ಚು ನಿಗಾ ಕೊಟ್ಟು ಆದಷ್ಟು ಬೇಗ ಇದರ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮ ಕೈಕೊಂಡು ಯಾರಿಗೂ ಅನುಮಾನಕ್ಕೆ ಆಸ್ಪದ ಕೊಡದಂತೆ ಕೆಲಸ ನಡೆಸಬೇಕು.

ಅಡಲ್ಟ್ ಎಜುಕೇಷನ್ ಬಾಬಿನಲ್ಲಿ ಇತ್ತೀಚೆಗೆ ಹೆಚ್ಚಿನ ಕೆಲಸ ನಡೆಯುತ್ತಿಲ್ಲ ಎಂದು ದೊಡ್ಡ ಕಾಂಟ್ರವರ್ಸಿಯಿದೆ. ಈ ಸಂದರ್ಭದಲ್ಲಿ ಪಾಠ ಹೇಳುವುದಕ್ಕೆ ಬೇರೆ ಉಪಾಧ್ಯಾಯರನ್ನು ನೇಮಿಸಿ ತರಪೇತು ಮಾಡುವುದಕ್ಕೆ ಬದಲಾಗಿ ಆಯಾ ಸ್ಥಳಗಳಲ್ಲಿರುವ ಉಪಾಧ್ಯಾಯರನ್ನೇ ಆ ಕೆಲಸವನ್ನು ಸಾಯಂಕಾಲ ಮಾಡುವಂತೆ ಗೊತ್ತುಮಾಡುವುದರಿಂದ ಆ ಉಪಾಧ್ಯಾಯರುಗಳಿಗೂ ಸಂಬಳ ಜಾಸ್ತಿ ಮಾಡಬೇಕೆಂದು ಕೇಳುವುದಕ್ಕನುಗುಣವಾಗಿ ಹತ್ತು ರೂಪಾಯಿಗಳನ್ನು ಇದಕ್ಕಾಗಿ ಕೊಟ್ಟರೆ ಅವರಿಗೆ ಹೆಚ್ಚು ಸಂಭಾವನೆ ದೊರೆತಂತಾಗುವುದಲ್ಲದೆ ಸರ್ಕಾರದ ಕೆಲಸವೂ ಸುಲಭವಾಗಿ ಆಗುತ್ತದೆ. ಈಗ ಡೈರೆಕ್ಟ್ ಸೂಪರ್‌ವಿಷನ್ ಬಹಳ ಕಷ್ಟವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಉಪಾಧ್ಯಾಯರು ರಾತ್ರಿ ವೇಳೆ ಸ್ಕೂಲು ನಡೆಸುವುದರಿಂದ ಅಚಾತುರ್ಯ, ಅಪಾಯ, ಸೂಪರ್‌ವೈಸ್ ಮಾಡುವುದಕ್ಕೆ ಇನ್‌ಸ್ಪೆಕ್ಟರುಗಳಿಗೆ ಸಾಧ್ಯವಿಲ್ಲವೆಂದು ಹೇಳಿದರೆ ಏಕೆ ಆಗುವುದಿಲ್ಲವೆಂದು ಕೇಳುತ್ತೇನೆ. ಸ್ಕೂಲು ಉಪಾಧ್ಯಾಯರೇ ಈ ಕೆಲಸ ಮಾಡುವಂತೆ ಏರ್ಪಾಡು ಮಾಡಿದರೆ ಅವರ ಸಂಬಳವೂ ಹೆಚ್ಚುತ್ತದೆ. ಹೆಚ್ಚು ಉಪಕಾರ ಮಾಡಿದ ಹಾಗೂ ಆಗುತ್ತದೆ ಎಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನು ಬೇಸಿಕ್ ಸ್ಕೂಲುಗಳಲ್ಲಿ ಮಕ್ಕಳು ಮತ್ತು ಉಪಾಧ್ಯಾಯರು ನೂಲು ತೆಗೆಯುವುದು, ಬಟ್ಟೆ ತಯಾರಿಸುವುದು ಇವೆಲ್ಲ ಅಡಕವಾಗಿದೆ. ಈ ಸಂದರ್ಭದಲ್ಲಿ **ಖಾದಿಗೆ** ಉತ್ತೇಜನ ಕೊಡುವುದು ಸರ್ಕಾರದ ನೀತಿಯಾಗಿದೆ. ಮೈಸೂರು ದೇಶದಲ್ಲಿ ಖಾದಿಗೆ ಉತ್ತೇಜನ ಬಹಳ ಕಡಮೆಯಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೇಕಾದರೆ ಮಕ್ಕಳು ತೆಗೆದ ದಾರದಿಂದ ಖಾದಿಬಟ್ಟೆ ತಯಾರಿಸಿ ಬಡಮಕ್ಕಳಿಗೂ, ಉಪಾಧ್ಯಾಯರಿಗೂ ಕೊಡಬಹುದು. ಇದರಿಂದ ಕಸಬೂ ವೃದ್ಧಿಯಾಗಿ ಬಡವರಿಗೂ ಸಹಾಯವಾಗುತ್ತದೆ. ಎಷ್ಟೋಮಂದಿಗೆ ಖಾದಿ ಪರಿಶ್ರಮವುಂಟಾಗಿ ಇನ್‌ಡೈರೆಕ್ಟಾಗಿ ಖಾದಿ ಉದ್ಯಮ ವೃದ್ಧಿಯಾಗುತ್ತದೆ. ಇದಕ್ಕಾಗಿ ತಾಲ್ಲೂಕು ಮಟ್ಟದಲ್ಲಿರುವ ಸರ್ಕಾರಿ ಸ್ಕೂಲುಗಳಲ್ಲಿ ಎಲ್ಲಿ ವೀವಿಂಗ್ ಸೆಕ್ಷನ್ ಇದೆಯೋ ಅದನ್ನು ಉಪಯೋಗಿಸಿಕೊಂಡು ಈ ಕಾರ್ಯವನ್ನು ವೃದ್ಧಿಪಡಿಸಬಹುದು.

ಸೇವಾದಳ ಮಾಡುವ ಕಾರ್ಯ ಅಷ್ಟು ಆಶಾದಾಯಕವಾಗಿಲ್ಲವೆಂದು ಶ್ರೀ ನರಸಿಂಹರೆಡ್ಡಿಯವರು ಹೇಳದೆಯಿದ್ದರೆ ಅದಕ್ಕೆ ಸಂಬಂಧಪಟ್ಟ ಒಂದು ಮಾತನ್ನು ನಾನು ಹೇಳುತ್ತಿರಲಿಲ್ಲ. ಇತ್ತೀಚೆಗೆ ಭಾರತ ಸೇವಾದಳ ಮಾಡುವ ಕಾರ್ಯ ದೇಶದಾದ್ಯಂತ ಗೊತ್ತಾಗಿದೆ. ಗಣ್ಯ ಮಹನೀಯರು ಕೊಟ್ಟ

(ಶ್ರೀ ಕೆ. ಪ್ರಭಾಕರ್).

ರುವ ಪ್ರಶಸ್ತಿಪತ್ರಗಳೂ, ವ್ಯಕ್ತಪಡಿಸಿರುವ ಒಳ್ಳೆಯ ಮಾತುಗಳೂ ಇವೆಲ್ಲವೂ ಕೂಡ ನಮ್ಮ ಕಣ್ಣಿಗೆ ಕಟ್ಟಿದ ಹಾಗಿವೆ. ಈ ದೇಶದಲ್ಲಿರುವ ಹತ್ತಾರು ಸಮಸ್ಯೆಗಳಲ್ಲಿ ಫಂಡಮೆಂಟಲ್ ಪ್ರಾಬ್ಲಂ ಅಂದರೆ, it is a problem of converting the youth of the country to a congenial atmosphere and to build them up as useful citizens of India.

ಇಂಥ ಒಂದು ನಂಬಿಕೆ ನಮ್ಮ ಮಾನ್ಯ ಜವಹರಲಾಲ್ ನೆಹ್ರೂಅವರಲ್ಲಿ ಬಹಳಮಟ್ಟಿಗಿದೆ. ಭಾರತ ಸೇವಾದಳ ಸಂಸ್ಥೆಯೆಂದರೆ ಕೋಮುವಾರು ಭಾವನೆಯಿಲ್ಲದಿರುವ ಸಂಸ್ಥೆ ಎಂಬ ಮನ್ನಣೆ ಪಡೆದಿದೆ. ಈ ಸಂಸ್ಥೆಯಲ್ಲಿ ಗ್ರಾಮಸ್ಥರು, ಬಡವರು, ಶ್ರೀಮಂತರ ಮಕ್ಕಳು ಎಲ್ಲರೂ ಸೇರಿ ಕನ್ಸ್ಟ್ರಕ್ಟಿವ್ ಪ್ರೋಗ್ರಾಂ ಹಾಕಿ ದೇಶೋದ್ಧಾರ ಮಾಡುವುದಕ್ಕೆ ಅವಕಾಶವಿದೆ. ಸಾಮುದಾಯಿಕ ಜೀವನ ನಡೆಸಲು ಇಂಥ ಒಂದು ಮಾರ್ಗವು ಇದೆಯೆಲ್ಲಾ ಎಂದು ಸಂತೋಷವಾಗುತ್ತದೆ.

ಆದುದರಿಂದ ಈಗ ಇದಕ್ಕೆ ಕೊಡಲಾಗುತ್ತಿರುವ ಸಹಾಯ ಸಾಲದು. ಇದನ್ನು ಇನ್ನೂ ಹೆಚ್ಚು ಮಾಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ತಾವೀಗ ಈ ಸಾರ್ವಜನಿಕ ಹಾಸ್ಟಲುಗಳನ್ನು ತೆರೆಯಲು ಪ್ರಾರಂಭಿಸಿರುತ್ತೀರಿ. ಈ ನೀತಿ ಬಹಳ ಸಾಧುವಾಗಿದೆ. ನಮ್ಮ ಸ್ಟೇಟ್ ಒಂದು ಸೆಕ್ಯುಲರ್ ಸ್ಟೇಟ್ ಅಗಿದೆ. ಈ ಕೋಮುವಾರು ಭಾವನೆ ಎನ್ನುವುದು ಏನಿದೆಯೋ ಅದನ್ನು ಅಳಿಸಿ ಹೋಗುವಂತೆ ಮಾಡಬೇಕಾಗಿದ್ದರೆ ಈ ನಾನಾ ಕೋಮಿನ, ನಾನಾ ಭಾಷೆಯ, ನಾನಾ ಸಂಸ್ಕೃತಿಯ, ನಾನಾ ರೀತಿಯ ಆಚಾರ—ವಿಚಾರಗಳ ಜನಗಳನ್ನೆಲ್ಲಾ ಒಂದು ಕಡೆ ಒಟ್ಟು ಕಲೆಯುವಂತೆ ಮಾಡಿರತಕ್ಕಂಥ ವ್ಯವಸ್ಥೆ ಇಲ್ಲಿಯವರೆಗೂ ಯಾವುದೂ ಇಲ್ಲ ಎಂತಲೇ ನಾನು ಹೇಳುತ್ತೇನೆ. ಇಂಥ ಕಾಲದಲ್ಲಿ ಈ ರೀತಿಯ ಒಂದು ವ್ಯವಸ್ಥೆ ಮತ್ತು ಒಂದೇ ಸ್ಟಾಂಡರ್ಡ್ ಆಫ್ ಅಡ್ಮಿನಿಸ್ಟ್ರೇಷನ್ನಿಗೆ ಒಳಪಟ್ಟು ಈ ನಾನಾ ಕೋಮುಗಳ ಬಾಲಕರು ಒಂದು ಕಡೆ ಇರುವಂತೆ ಮಾಡುವುದು ಅನೇಕ ದೃಷ್ಟಿಗಳಿಂದ ಅನುಕೂಲವೆಂದು ಕಾಣುತ್ತದೆ. ಆದರೆ ಕೆಲವರಿಗೆ ಇದು ಏಕಾಏಕಿ ಒಗ್ಗಲಾರದು. ಹಾಗೆ ಒಗ್ಗುವತನಕ ಸ್ವಲ್ಪ ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾಗಿದೆ. ಹಾಗೆ ಒಗ್ಗುವತನಕ ಈ ವೆಜಿಟೇರಿಯನ್—ನಾನ್ ವೆಜಿಟೇರಿಯನ್‌ಗಳನ್ನು ಒಂದು ಹೊಂದಾವಣಿಕೆಯಲ್ಲಿರುವಂತೆ ಮಾಡಬೇಕಾದ್ದು ಯುಕ್ತ.

*ಶ್ರೀ ಡಿ. ಆರ್. ಕರಿಗೌಡ (ಹಾಸನ).—ಸ್ವಾಮಿ, ಈ ದಿವಸ ನಮ್ಮ ಸರ್ಕಾರ ದೇಶದಲ್ಲಿರತಕ್ಕ ಜನರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೋಸ್ಕರ ದೇಶದ ಉತ್ಪತ್ತಿಯಲ್ಲಿ ಐದನೇ ಒಂದು ಭಾಗದಷ್ಟು ಹಣವನ್ನು ಎಂದರೆ—ಸುಮಾರು ಐದು ಕೋಟಿ ರೂಪಾಯಿಗಳನ್ನು ಈ ವಿದ್ಯಾಭ್ಯಾಸದ ಬಾಬಿಗಾಗಿ ಖರ್ಚು ಮಾಡುತ್ತಿದೆ. ಆದರೆ ನಮ್ಮ ಸಂವಿಧಾನದಲ್ಲಿ ದೇಶದಲ್ಲಿರತಕ್ಕಂಥ ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿ ಉಚಿತ ವಿದ್ಯಾಭ್ಯಾಸವನ್ನು ಅವರ 14ನೆಯ ವಯಸ್ಸಿನವರೆಗೂ ನೀಡಲೇಬೇಕೆಂದು ಅಡಕವಾಗಿದೆ. ಆದರೆ ಹಾಗೆ ವಿದ್ಯಾವಂತರನ್ನಾಗಿ ಮಾಡಲು ಈ ದಿವಸ ನಮ್ಮ ಸರ್ಕಾರ ಹೋಗುತ್ತಿರುವ ಧಾಟಿಯಲ್ಲೇ ಮುಂದುವರಿಯುವುದಾದರೆ ನಮ್ಮ ಮಕ್ಕಳು ಇನ್ನು ಒಂದು ನೂರು ವರ್ಷಗಳ ಮೇಲಾದರೂ ಹಾಗೆ ವಿದ್ಯಾವಂತರಾಗುತ್ತಾರೋ ಏನೋ ಎಂದು ಆಶಿಸುವುದಕ್ಕೂ ಕೂಡ ನನಗೆ ಭರವಸೆ ಕಾಣುತ್ತಿಲ್ಲ. ಈ ದಿವಸ ನೂರಕ್ಕೆ 90 ರಷ್ಟು ಜನ ವಾಸ ಮಾಡುತ್ತಿರುವಂಥಾ ಗ್ರಾಮಾಂತರ ಪ್ರದೇಶಗಳಲ್ಲೆಲ್ಲಾ ಇರತಕ್ಕ ಪಾಠಶಾಲೆಗಳನ್ನು ತೆಗೆದುಕೊಂಡರೆ ಅವುಗಳೆಲ್ಲ ಸಿಂಗಲ್ ಟೀಚರ್ಸ್ ಸ್ಕೂಲುಗಳಾಗಿರುತ್ತವೆ. ಒಂದೊಂದು ಪಾಠಶಾಲೆಯಲ್ಲೂ 4-5 ತರಗತಿಗಳಿರುತ್ತವೆ. ಆ ಎಲ್ಲ ತರಗತಿಗಳಿಗೂ ಪಾಠ ಹೇಳಲು ಒಬ್ಬ ಉಪಾಧ್ಯಾಯರು ಇರುತ್ತಾರೆ- ಎಂದಮೇಲೆ ಆ ಹಳ್ಳಿಗಳಲ್ಲಿ ಕೊಡುತ್ತಿರುವಂಥ ವಿದ್ಯಾಭ್ಯಾಸ ಯಾವ ಮಟ್ಟದ್ದು ಎಂಬುದನ್ನು ತಾವೆಲ್ಲರೂ ಆಲೋಚಿಸಬೇಕಾಗಿದೆ. ಆದರೆ ಅದೇ ವಿದ್ಯಾಭ್ಯಾಸ ಈ ನಗರಗಳಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆ ಎಂಬುದನ್ನು ತೆಗೆದುಕೊಂಡರೆ ಒಂದೊಂದು ತರಗತಿಗೂ ಒಬ್ಬೊಬ್ಬ ಉಪಾಧ್ಯಾಯರಿರುತ್ತಾರೆ. ಹೀಗೆ ಹೆಚ್ಚು ಸಂಖ್ಯೆಯಲ್ಲಿ ಉಪಾಧ್ಯಾಯರುಗಳಿರುವುದರಿಂದ ಬಾಲಕರಿಗೆ ಅವರ ಮನಸ್ಸಿಗೆ ಚೆನ್ನಾಗಿ ನಾಟುವಂತೆ ಪಾಠ ಪ್ರವಚನಗಳನ್ನು ನಡೆಸಲು ಅನುಕೂಲವಿದೆ. ಆದರೆ ಹಳ್ಳಿಯ ಪಾಠಶಾಲೆಗಳಿಗೆ ಇಂಥ ಅನುಕೂಲವಿಲ್ಲ. ಅಲ್ಲಿರತಕ್ಕ ಒಬ್ಬರೇ ಉಪಾಧ್ಯಾಯರು 4-5 ತರಗತಿಗಳಿಗೂ—ಎಂದರೆ ಚರಿತ್ರೆ, ಭೂಗೋಳ, ವ್ಯಾಕರಣ, ಗಣಿತ ಇತ್ಯಾದಿ ಎಲ್ಲ ಪಾಠಗಳನ್ನೂ ನಡೆಸಬೇಕಾಗಿದೆ. ಆದರೆ ಅಲ್ಲಿ ಈ ಸ್ಕೂಲುಗಳನ್ನು ಸರ್ಕಾರದವರು ನಾಮಕಾವಾಸ್ತೆಗೋಸ್ಕರ ಮಾಡಿರುವಂತೆ ಭಾಸವಾಗುತ್ತಿದೆ. ಬಾಲಕರಿಗೇನೂ ಪ್ರಯೋಜನವಿಲ್ಲ. ಹುಡುಗರ ಮೇಲೆ ಸರಿಯಾಗಿ ನಿಗಾ ಇಡುವುದಕ್ಕಾಗಲೀ ಅಥವಾ ಅವರಿಗೆ ಕ್ರಮವಾಗಿ ಪಾಠಗಳನ್ನು ಹೇಳುವುದಕ್ಕಾಗಲೀ ಆ ಒಬ್ಬ ಉಪಾಧ್ಯಾಯರಿಂದ ಖಂಡಿತ ಸಾಧ್ಯವಿಲ್ಲ. ಇದಕ್ಕಾಗಿ ಸರ್ಕಾರದವರು ಖರ್ಚು ಮಾಡುತ್ತಿರುವುದು ಬಹಳ ನಿರರ್ಥಕ. ಇಂಥ ಅಪ್ರಯೋಜಕ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಬದಲಾಗಿ ಆ ಸ್ಕೂಲುಗಳನ್ನು ಮುಚ್ಚಿಸುವುದೇ ಲೇಸೆಂದು ಹೇಳುತ್ತೇನೆ. ಹಾಗೆ ತಮಗೆ ಗ್ರಾಮಾಂತರ ಪ್ರದೇಶದ ಜನರ ಮಕ್ಕಳು ವಿದ್ಯಾವಂತರಾಗಲಿ, ಬುದ್ಧಿವಂತರಾಗಲಿ, ಎಂಬ ಕುತೂಹಲವಿದ್ದುದೇ ಆದರೆ ತಾವು ಕೂಡಲೇ ಈ ಸಿಂಗಲ್ ಟೀಚರ್ಸ್ ಪಾಠಶಾಲೆಗಳನ್ನೆಲ್ಲಾ ಸರಿಯಾದ ರೀತಿಯಲ್ಲಿ ಬದಲಾವಣೆ ಮಾಡಿ 2-3 ಜನರು ಉಪಾಧ್ಯಾಯರಿರುವಂತೆಯಾದರೂ ಮಾಡಲೇಬೇಕು.

ಇನ್ನು ಈ ಪ್ರಾಥಮಿಕಶಾಲಾ ಉಪಾಧ್ಯಾಯರುಗಳ ನೇಮಕದ ವಿಚಾರ ತೆಗೆದುಕೊಂಡರೆ ಅವರಲ್ಲಿ ಬಹಳ ಜನ ಉಪಾಧ್ಯಾಯರಿಗೆ ಈ ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಂಡು, ಅವರ ಮನಸ್ಸು ಯಾವ ರೀತಿಯಿರುತ್ತದೆ ಎಂಬುದನ್ನು ತಿಳಿದುಕೊಂಡು ಅದಕ್ಕೆ ತಕ್ಕ ಹಾಗೆ ಅವರ ಮನಸ್ಸಿಗೆ ಚೆನ್ನಾಗಿ ನಾಟುವ ರೀತಿಯಲ್ಲಿ ಪಾಠಗಳನ್ನು ಹೇಳತಕ್ಕ ಚೈತನ್ಯವಿರುವುದಿಲ್ಲ. ಅನೇಕರಿಗೆ ತಿಳಿವಳಿಕೆಯೇ ಸಾಲದು. ಸಿ. ಆರ್. ಬಿ.ಗೆ ಅರ್ಜಿ ಹಾಕಿಕೊಂಡಿರತಕ್ಕಂಥಾ ಹುಡುಗರನ್ನು ಏಕ್‌ದಂ ಈ ಶಾಲೆಗಳಿಗೆ ಉಪಾಧ್ಯಾಯರನ್ನಾಗಿ ನೇಮಿಸಿಬಿಡುತ್ತಿದ್ದಾರೆ. ಅವರಿಗೆ ಟ್ರೈನಿಂಗ್ ಅಗದ ವಿನಾ ಈ ವೃತ್ತಿಗೆ ಅವರನ್ನು ನೇಮಿಸಬಾರದೆಂದು ಹೇಳುತ್ತೇನೆ. ಅವರು ಜನರಲ್ ಕ್ವಾಲಿಫಿಕೇಷನ್ ಜೊತೆಗೆ ಟ್ರೈನಿಂಗನ್ನೂ ಸಹ ಅವರೇ ಮಾಡಿಕೊಂಡಿದ್ದರೆ ಅಂಥವರಿಗೇ ಈ ಹುದ್ದೆಗಳನ್ನು ಕೊಡತಕ್ಕದ್ದು ಅವಶ್ಯಕ. ಇದಕ್ಕಾಗಿ ತಾವು ಎಲ್ಲಾ ಕಡೆಗಳಲ್ಲೂ ಈ ಟ್ರೈನಿಂಗ್ ಶಾಲೆಗ

ಳನ್ನು ತೆರೆಯಬೇಕೆಂದು ಹೇಳುತ್ತೇನೆ. ಆದರೆ ಈ ದಿವಸ ಸರ್ಕಾರದವರು ನಗರಗಳಲ್ಲಿ ವಾಸಮಾಡತಕ್ಕ ಜನರ ಬಗ್ಗೆ ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಲಕ್ಷಾಂತರರೂಪಾಯಿಗಳನ್ನು ವೆಚ್ಚಮಾಡುತ್ತಿದ್ದಾಗ್ಯೂ ಹಳ್ಳಿಗಳಿಗೆ ತಮ್ಮ ಗಮನವನ್ನೇ ಕೊಡದೆ ತಿರಸ್ಕಾರ ಮಾಡಿದ್ದಾರೆ. ಹಳ್ಳಿಗಳಲ್ಲಿ ಒಂದು ಸ್ಕೂಲನ್ನು ಕಟ್ಟಿಸಿಕೊಡಿ ಎಂದು ಕೇಳಿದರೆ ಅದಕ್ಕೆ ನಾವು 500 ರೂಪಾಯಿಗಳನ್ನು ಹಾಕುತ್ತೇವೆ, ನೀವು 500 ರೂಪಾಯಿಗಳನ್ನು ಹಾಕಿ ಎಂದು ಹೇಳುತ್ತಿದ್ದಾರೆ. ಆದರೆ ಪಟ್ಟಣಗಳಲ್ಲಿ ಯಾವತ್ತೂ ಸರ್ಕಾರದವರೇ ಎಲ್ಲಾ ಖರ್ಚುಗಳನ್ನು ಹಾಕಿ ಪಾಠಶಾಲೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಆದರೆ ಹಳ್ಳಿಗಳಿಗೆ ಮಾತ್ರ 500 ರೂಪಾಯಿಗಳನ್ನು ಕೊಡಿ ಎಂದು ಕೇಳುತ್ತಾರೆ. ಅದರಲ್ಲೂ ಒಂದು ವಿಚಿತ್ರವಿದೆ. ನಾವು ನಮ್ಮ ಭಾಗದ ಹಣವನ್ನು ಹಾಕಿದರೂ ಅವರು ಅವರಭಾಗದ ಹಣವನ್ನು ಸರಿಯಾಗಿ ಕೊಡುತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಕಟ್ಟಡದ ಕೆಲಸ ಪೂರೈಸಿದ ನಂತರವೂ ಇವರ ಹಣ ಬರಬೇಕಾಗಿದ್ದರೆ ಎಷ್ಟೋ ಡಿಲೇ ಆಗುತ್ತದೆ.

ಇನ್ನು ಈ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಇತರ ಕಡೆಗಳಲ್ಲಿ ನಡೆಸಲಾಗುತ್ತಿರುವ ಮುನಿಸಿಪಲ್ ಮತ್ತು ಜಿಲ್ಲಾಬೋರ್ಡ್ ಹೈಸ್ಕೂಲುಗಳಿಗೆ ಸರ್ಕಾರದವರು ಗ್ರಾಂಟನ್ನು ಕೊಡುತ್ತಿದ್ದಾರೆ. ಹೀಗೆ ಸರ್ಕಾರದವರೇ ಮುಕ್ಕಾಲು ಭಾಗದಷ್ಟು ಹಣವನ್ನು ಕೊಡುತ್ತಿದ್ದರೂ ಆ ಶಾಲೆಗಳ ಆಡಳಿತವನ್ನು ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೋ ಅಥವಾ ಉಪಾಧ್ಯಕ್ಷರಿಗೋ ವಹಿಸಿರುತ್ತಾರೆ. ಈ ದಿವಸ ಆ ಸ್ಕೂಲುಗಳು ಸರಿಯಾಗಿ ನಡೆಯುತ್ತಿಲ್ಲ. ಅಲ್ಲಿ ಕೆಲಸ ಮಾಡುವ ಉಪಾಧ್ಯಾಯರನ್ನು ಸರ್ಕಾರಿ ಶಾಲೆಗಳಿಗೆ ವರ್ಗಾಯಿಸಲು ಅವಕಾಶವಿಲ್ಲ. ಆ ಸ್ಕೂಲುಗಳಲ್ಲಿ ಈ ದಿವಸ ಮುತವರ್ಜಿ ವಹಿಸಿ ಯಾರೂ ಪಾಠ ಹೇಳುತ್ತಿಲ್ಲ. ಅವರಿಗೆ ಸರಿಯಾಗಿ ಸಂಬಳಗಳೂ ಕೂಡ ಪಾವತಿಯಾಗುತ್ತಿಲ್ಲ, ಕುಣಿಗಲ್ ಹೈಸ್ಕೂಲಿನಲ್ಲಿ ಅಲ್ಲಿನ ಉಪಾಧ್ಯಾಯರಿಗೆ ಸಂಬಳಗಳನ್ನು ಪಾವತಿ ಮಾಡದೆ ಇರುವುದರಿಂದ ಅವರೆಲ್ಲರೂ ಈಗ ಸತ್ಯಾಗ್ರಹ ಹೂಡಬೇಕೆಂದಿದ್ದಾರೆಂಬ ಸಮಾಚಾರವನ್ನು ಕೇಳುತ್ತಿದ್ದೇನೆ. ನಮ್ಮ ಹಾಸನ ಜಿಲ್ಲೆಯಲ್ಲಿ ಇಡೀ ಸಂಸ್ಥಾನದಲ್ಲಿರತಕ್ಕ ಎಲ್ಲ ಹೈಸ್ಕೂಲುಗಳಿಗಿಂತಲೂ ಬಹಳ ದಕ್ಷತೆಯಿಂದ ಕೆಲಸ ಮಾಡಿಕೊಂಡು ಹೆಚ್ಚು ವಿದ್ಯಾರ್ಥಿಗಳನ್ನು ಪಾಸ್ ಮಾಡಿಸುತ್ತಿದ್ದಂಥ ಶಾಂತಿಗ್ರಾಮ ಹೈಸ್ಕೂಲಿನ ಉಪಾಧ್ಯಾಯರುಗಳಿಗೂ ಕೂಡ ಸಂಬಳ ಕೊಟ್ಟಿಲ್ಲವೆಂದು ನಾನು ಕೇಳುತ್ತಿದ್ದೇನೆ. ಆದರೆ ಜಿಲ್ಲಾ ಬೋರ್ಡಿನವರೇ ಸಂಬಳ ಕೊಡಲಿ ಅಥವಾ ಮುನಿಸಿಪಾಲಿಟಿಯವರೇ ಸಂಬಳ ಕೊಡಲಿ, ಅಥವಾ ಸರ್ಕಾರದವರೇ ಕೊಡಲ, ಅದನ್ನು ಕಾಲಕ್ಕೆ ಸರಿಯಾಗಿ ಕೊಡಬೇಕು. ಇದಕ್ಕೆಲ್ಲಾ ಹೆಚ್ಚು ನಿಗಾ ಇಟ್ಟು ಕೆಲಸ ಮಾಡಬೇಕು. ಅದಕ್ಕಾಗಿ ಸರ್ಕಾರದವರೇ ಈ ಶಾಲೆಗಳನ್ನೆಲ್ಲಾ ಅವರ ಆಡಳಿತಕ್ಕೆ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಹೇಳುತ್ತೇನೆ.

* ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಮೊದಲನೆಯದಾಗಿ ಯೂನಿವರ್ಸಿಟಿ ಕೌನ್ಸಿಲ್ಲಿನ ಆಡಳಿತದಲ್ಲಿರುವ ಅನೇಕ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳತಕ್ಕ ಸಂಬಂಧವಾಗಿ ಏರ್ಪಡಿಸಿರತಕ್ಕಂಥ ಅಡ್ಮಿಷನ್ ಸಮಿತಿಗಳನ್ನು ರದ್ದುಪಡಿಸುವುದಕ್ಕೆ ಸರ್ಕಾರದವರು ಒಂದು ಸೂಚನೆ ಕೊಡಬೇಕು ಎಂಬುದು ಮೊದಲನೆಯ ವಿಚಾರ. ಇಂಥ ಸಮಿತಿಗಳಿರುವುದರಿಂದ ಈ ದಿವಸ ಬಹಳ ತೊಂದರೆಗಳಾಗುತ್ತಿವೆ. ಅದಕ್ಕಾಗಿ ಈ ಅಡ್ಮಿಷನ್ ಸಮಿತಿಗಳನ್ನು ಕೂಡಲೇ ರದ್ದುಪಡಿಸಬೇಕು ಎನ್ನುವುದು ಒಂದಂಶ.

ಇನ್ನು ಎರಡನೆಯದಾಗಿ ಈ ಯೂನಿವರ್ಸಿಟಿಗಳಿಗೆ ಎರಡುಮೂರು ವರ್ಷಗಳಿಂದಲೂ ಕೆಲವು ಪ್ರೊಫೆಸರ್ಸ್ ಮತ್ತು ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನು ನೇಮಕ ಮಾಡಿಕೊಂಡಿರುವ ವಿಚಾರದಲ್ಲಿ ಬಹಳ ಟೀಕೆಗಳಾಗಿರುತ್ತವೆ. ಈ ಜನರ ಅಪಾಯಿಂಟ್‌ಮೆಂಟ್‌ಗಳೆಲ್ಲಾ ಒಂದು ಇನ್‌ಫ್ಲುಯೆನ್ಸಿಗೆ ಒಳಗಾಗಿರುತ್ತವೆ ಎಂಬ ಪುಕಾರು ಎದ್ದಿದೆ. ಅಲ್ಲಿರತಕ್ಕವರ ಸೀನಿಯಾರಿಟಿಯನ್ನು ತಳ್ಳಿಹಾಕಿದ್ದಾರೆಂದು ವರ್ತಮಾನಕೇಳುತ್ತೇನೆ. ಆದರೆ ಈ ಸೀನಿಯಾರಿಟಿ ಕೈಬಿಟ್ಟಿರುವ ವಿಚಾರವಾಗಿ ಇದೇ ಸಭೆಯ ಮುಂದೆ ಅನೇಕವೇಳೆ ಚರ್ಚೆಗಳು ನಡೆದಿವೆ. ಆದರೆ ಈ ಸಂದರ್ಭದಲ್ಲಿ ಆ ಹುದ್ದೆಗಳೆಲ್ಲಾ ಸೆಲೆಕ್ಷನ್ ಪೋಸ್ಟ್‌ಗಳಾಗಿದ್ದವು—ಪ್ರಮೋಷನ್ ಪೋಸ್ಟ್‌ಗಳಾಗಿರಲಿಲ್ಲ ಎಂಬುದಾಗಿ ಸರ್ಕಾರದವರು ಜವಾಬ್ ಕೊಟ್ಟಿದ್ದಾರೆ. ಆದರೆ ನಾನು ಈಗ ಹೇಳುತ್ತಿರುವುದು ಈ ಸೆಲೆಕ್ಷನ್ ಪದ್ಧತಿಯನ್ನು ಕೂಡಲೇ ರದ್ದುಪಡಿಸಿ ಎಂದು. ಇಂಥ ಸ್ಥಾನಗಳಿಗೆ ಅದೇ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವ ಲೆಕ್ಚರರ್‌ಗಳನ್ನು ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನಾಗಿಯೂ, ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನು ಪ್ರೊಫೆಸರ್‌ಗಳನ್ನಾಗಿಯೂ ನೇಮಕ ಮಾಡಲು ಯಾವ ಅಡ್ಡಿಯೂ ಇರಬಾರದು. ಆದರೆ ಈ ದಿವಸ ಅಲ್ಲಿ ಯಾರೋ ಒಬ್ಬರು—ಒಬ್ಬ ದೊಡ್ಡ ವಿದ್ಯಾವಂತರ ಮಕ್ಕಳು First Grade College ನಲ್ಲಿ ವಿದ್ಯಾರ್ಥಿಯಾಗಿದ್ದುಕೊಂಡು ಮಹಾರಾಣಿ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದಾರಂತೆ. ಇದೇನು ನಿಜವೋ ಅಥವಾ ಅಲ್ಲವೋ ಎನ್ನುವುದನ್ನು ಸರ್ಕಾರದವರು ಪರಿಶೀಲನೆ ಮಾಡಿ ಎಂದು ಹೇಳುತ್ತೇನೆ. ಹೀಗೆಲ್ಲಾ ಆಗಬಾರದು ಎಂದು ನನ್ನ ಅಭಿಪ್ರಾಯ.

ಇನ್ನು ಈ ಪ್ರೈಮರಿ ಸ್ಕೂಲುಗಳ ವಿಚಾರ. ಎಷ್ಟೋಕಡೆ ಸ್ಕೂಲುಗಳಿವೆ. ಆದರೆ ಅಲ್ಲಿ ಉಪಾಧ್ಯಾಯರಿರುವುದಿಲ್ಲ. ಈ ವಿಚಾರದಲ್ಲಿ ಎಜ್ಯುಕೇಷನ್ ರಿಫಾರಂಸ್ ಸಮಿತಿಯವರು ತಮ್ಮ ವರದಿಯಲ್ಲಿ ಹೀಗೆ ಹೇಳಿದ್ದಾರೆ :—

> "As things are at present, one hears that in some places, grants are drawn while no schools are in existence. If the villagers and teachers are friendly no complaints will be received."

ಇದು ಅಕ್ಷರಶಃ ನಿಜ. ಇದಕ್ಕೆ ಕಾರಣವೇನಿರಬಹುದು ? ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಈ ಸ್ಕೂಲುಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ವಿದ್ಯಾಭ್ಯಾಸದ ಒಟ್ಟು ವೆಚ್ಚದ ಪೈಕಿ ಎಂದರೆ ನಾಲ್ಕು ಕೋಟಿ ಎಂಬತ್ತೆಂಟು ಲಕ್ಷ ಚಿಲ್ಲರೆಯಲ್ಲಿ ಈ ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ ಸುಮಾರು ಅರ್ಧ ಭಾಗದಷ್ಟು ಹಣವನ್ನು ಎಂದರೆ ಎರಡು ಕೋಟಿ ಹದಿನಾಲ್ಕು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇನ್ನು ಈ ಪ್ರೈಮರಿ ಸ್ಕೂಲಿನಲ್ಲಿ ಅಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆಯನ್ನು ತೆಗೆದುಕೊಂಡರೆ 1951ನೆಯ ಸೆನ್ಸಸ್ ಲೆಕ್ಕಗಳ ಪ್ರಕಾರ ಆರು ವರ್ಷಕ್ಕೆ ಮೇಲ್ಪಟ್ಟು 12 ವರ್ಷದೊಳಗಿದ್ದಂಥ ಹುಡುಗರ ಸಂಖ್ಯೆ 14 ಲಕ್ಷದ 33 ಸಾವಿರ. ಇಷ್ಟು ಜನ ಹುಡುಗರಿಗೂ ಈ ಪ್ರಾಥಮಿಕ ಶಿಕ್ಷಣವನ್ನು

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್).

ಕೊಡುತ್ತಿದ್ದಾರೆಯೇ ಎಂದರೆ ಅದೂ ಕೂಡ ಇಲ್ಲ. ಈ ದಿವಸ ಪ್ರೈಮರಿ ವಿದ್ಯಾಭ್ಯಾಸ ಮಾಡುತ್ತಿರುವ ಹುಡುಗರ ಸಂಖ್ಯೆ ಎಂಟು ಲಕ್ಷದ ನಲವತ್ತಾರು ಸಾವಿರ. ಈ ಹುಡುಗರಿಗೇ ಇನ್ನೂ ಪ್ರೈಮರಿ ಸ್ಕೂಲುಗಳನ್ನು ಒದಗಿಸಲು ನಮ್ಮ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಈ ದಿವಸ ನಾವು ಈ ಬಾಲಕರಿಗೆ ಶೇಕಡ 59 ರಷ್ಟು ಪಾಠಶಾಲೆಗಳನ್ನೂ ಕೂಡ ಒದಗಿಸಲು ಸಾಧ್ಯವಾಗಿಲ್ಲ, ಶಕ್ತರಾಗಿಲ್ಲ. ಇಂಥ ಸನ್ನಿವೇಶದಲ್ಲಿ ನಾವು ಈಗ ಇಷ್ಟೊಂದು ಹಣವನ್ನು ಖರ್ಚುಮಾಡಿ ಇಟ್ಟಿರತಕ್ಕಂಥ ಸ್ಕೂಲುಗಳ ಸ್ಥಿತಿಯಾದರೂ ಯಾವರೀತಿಯಾಗಿದೆ ಎನ್ನುವುದನ್ನು ಸ್ವಲ್ಪ ನೋಡೋಣ. ಈ ದಿವಸ ಗ್ರಾಮಾಂತರಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳೆಲ್ಲಾ ಬಹುಮಟ್ಟಿಗೆ ತಾಲ್ಲೂಕು ಕಸಬೆಗಳಲ್ಲಿ ವಾಸಿಸುತ್ತಿದ್ದಾರೆ. ಸ್ಕೂಲಿರತಕ್ಕಂಥ ಗ್ರಾಮದಲ್ಲಿ ಯಾರೂ ವಾಸ ಮಾಡುತ್ತಿಲ್ಲ. ಕಾರಣ ಅವರಿಗೆ ಅಲ್ಲಿ ಸೌಕರ್ಯಗಳಿಲ್ಲ. ವಾಸಕ್ಕೆ ಮನೆಯೂ ಇಲ್ಲ. ಈ ಕಾರಣಗಳಿಂದ ಅವರು ಪ್ರತಿ ದಿವಸವೂ ಬೈಸಿಕಲ್ ಮೇಲೆ ಬಂದು ಹೋಗುವ ಪದ್ಧತಿ ಸರಿಯಲ್ಲ. ಇದನ್ನು ಆದಷ್ಟು ಬೇಗ ತಪ್ಪಿಸುವುದುತ್ತಮ. ಅದಕ್ಕಾಗಿ ನಾನು ಈಗ ಒಂದು ಸಲಹೆಯನ್ನು ಸರ್ಕಾರಕ್ಕೆ ನೀಡಬೇಕೆಂದಿದ್ದೇನೆ. ಈಗ ಸರ್ಕಾರದವರು ಲೋ-ಇನ್‌ಕಂ-ಗ್ರೂಪ್ ಹೌಸಿಂಗ್ ಸ್ಕೀಂ ಎಂಬುದಾಗಿ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ಈ ಯೋಜನೆಯ ಪ್ರಕಾರ ಸರ್ಕಾರದವರು ಈ ಹಳ್ಳಿ ಉಪಾಧ್ಯಾಯರುಗಳು ಆಯಾ ಸ್ಕೂಲಿರತಕ್ಕ ಹಳ್ಳಿಯಲ್ಲೇ ವಾಸಿಸಲು ಅನುಕೂಲವಾಗುವಂತೆ ಅವರುಗಳಿಗೆ ಏಕೆ ಮನೆಗಳನ್ನು ಕಟ್ಟಿಸಿ ಕೊಡಬಾರದು ? ಈ ಉಪಾಧ್ಯಾಯರುಗಳೆಲ್ಲಾ ಲೋ-ಇನ್‌ಕಂ-ಗ್ರೂಪಿನಲ್ಲಿ ಸೇರಿರುತ್ತಾರೆ. ಇವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಅವರ ಸಂಬಳದಲ್ಲಿ ಬಾಡಿಗೆರೂಪವಾಗಿ ಆ ಖರ್ಚು ವೆಚ್ಚಗಳನ್ನೆಲ್ಲಾ ಹಿಡಿದುಕೊಂಡು ಅವರಿಗೇಕೆ ಈ ರೀತಿ ಅನುಕೂಲ ಒದಗಿಸಬಾರದು ? ಈ ದಿವಸ ನಮ್ಮಲ್ಲೆಲ್ಲಾ ಬಹುಶಃ 10 ಸಾವಿರ ಪ್ರೈಮರಿ ಸ್ಕೂಲುಗಳಿರಬಹುದು. ಅದಕ್ಕಾಗಿ ತಾವು ಹತ್ತುಸಾವಿರ ಮನೆಗಳನ್ನು ಕಟ್ಟಿಸಲು ಯಾವ ಅಭ್ಯಂತರವೂ ಇಲ್ಲ. ಆ ಉಪಾಧ್ಯಾಯರುಗಳ ಸಂಬಳದಲ್ಲಿ ಪ್ರತಿ ತಿಂಗಳೂ ಅದರ ಬಾಡಿಗೆಯನ್ನು ವಸೂಲ್ಮಾಡಿಕೊಳ್ಳಬಹುದು. ಇದರಲ್ಲಿ ಯಾವ ಅಡಚಣೆಯಾಗಲೀ ಅಡ್ಡಿ-ಆತಂಕಗಳಾಗಲೀ ಇರುವುದಿಲ್ಲ. ಈ ಸ್ಕೀಮನ್ನು ಜಾರಿಗೆ ತಂದಿರುವ ಸಂಬಂಧದಲ್ಲಿ ನಮಗೆ ಕೇಂದ್ರ ಸರ್ಕಾರದಿಂದ ಸಹಾಯ ಬರುತ್ತಿದೆ. ಆ ಸಹಾಯವನ್ನು ಸಂಪೂರ್ಣವಾಗಿ ತಾವು ಉಪಯೋಗಿಸಿಕೊಂಡು ಈ ಕೆಲಸವನ್ನು ಏಕೆ ಮಾಡಬಾರದು ? ನಾನೀಗ ತಮಗೆ ಸಲಹೆಯನ್ನು ಕೊಡುತ್ತಿದ್ದೇನೆ. ತಾವು ಇದನ್ನು ವಿಮರ್ಶೆ ಮಾಡಿ. ತಾವು ಈ ಕಾರ್ಯವನ್ನು ಕೈಗೊಂಡರೆ ಉಪಾಧ್ಯಾಯರು ಆ ಹಳ್ಳಿಗಳಲ್ಲೇ ವಾಸಿಸಲು ಅನುಕೂಲವಾಗಿ ಆ ಪಾಠಶಾಲೆಗಳ ಕೆಲಸ ಕಾರ್ಯಗಳು ಉತ್ತಮಗೊಳ್ಳಲು ಅವಕಾಶವಾಗುತ್ತದೆ.

ಈ ಪ್ರೀ-ಪ್ರೈಮರಿ ಕೋರ್ಸು ಎಂದು ಜಾರೀಲಿದೆ. ಇದನ್ನು ಇನ್ನೂ ಉತ್ತಮಗೊಳಿಸಬೇಕು. ಇವು ಇನ್ನೂ ಹೆಚ್ಚಿನ ಪ್ರೋತ್ಸಾಹದಿಂದ ಕೆಲಸ ನಡೆಸುವಂತೆ ತಾವು ಶ್ರಮಿಸಬೇಕಾಗಿದೆ.

ಇನ್ನು ಮೂರನೆಯದಾಗಿ ಮಿಡಲ್ ಸ್ಕೂಲುಗಳ ವಿಚಾರ. ಈ ಸ್ಕೂಲುಗಳಿಗೋಸ್ಕರವಾಗಿ ಈ ದಿವಸ ವಿದ್ಯಾದಾನ ಭೂದಾನ ಚಳುವಳಿಯಿಂದ ಸಾವಿರಾರು ಎಕರೆ ಜಮೀನು ದೊರೆತಿದೆ. ಇದಕ್ಕಾಗಿ ಈಗ ನಮ್ಮ ಸರ್ಕಾರದವರು ತಮಗೊಂದು ಶಹಬಾಸ್‌ಗಿರಿ ಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ಈಗ ಆ ರೀತಿ ದಾನರೂಪದಲ್ಲಿ ಬಂದಿರತಕ್ಕಂಥ ಜಮೀನಿನ ಲಕ್ಷಣವೇನು ? ಅವರ ಯೋಗ್ಯತೆಯೇನೆಂಬ ವಿಚಾರಗಳಿಗೆ ಪ್ರವೇಶಿಸುವುದಿಲ್ಲ. ಆದರೆ ಇಷ್ಟುಮಾತ್ರ ಹೇಳುತ್ತೇನೆ ಪ್ರತಿಯೊಂದು ಮಿಡಲ್ ಸ್ಕೂಲಿಗೂ ಹೊಂದಿಕೊಂಡಿರುವ ಹಾಗೆ ಕನಿಷ್ಠಪಕ್ಷ ಎರಡೆರಡೇಕರೆ ಜಮೀನಿರಬೇಕು. ಈಗ ತಮಗೆ ದಾನದ ರೂಪವಾಗಿ ಎಲ್ಲೆಲ್ಲಿಯೋ ದೊರೆತಿರುವ ಜಮೀನನ್ನು ಮಾರಾಟ ಮಾಡಿ, ಇಲ್ಲವೇ ಅವುಗಳನ್ನು ಇತರರಿಗೆ ಬದಲಾಯಿಸಿ ಬಿಟ್ಟು ಆಯಾಯ ಸ್ಕೂಲಿನ ಅಕ್ಕಪಕ್ಕದಲ್ಲೇ ಜಮೀನಿರುವಂತೆ ಮಾಡಿ. ಆ ಜಮೀನುಗಳನ್ನೆಲ್ಲಾ ಮೊದಲು ರಿಜಿಷ್ಟರ್ ಮಾಡಿಸಿ.

2-30 P.M.

ಎರಡನೆಯದಾಗಿ ಈ ಭೂದಾನದಲ್ಲಿ ಹೊಂದಿರತಕ್ಕ ಜಮೀನುಗಳನ್ನು ಸಾಗುವಳಿ ಮಾಡುವುದಕ್ಕೆ 3½ ಲಕ್ಷ ರೂಪಾಯಿ ತೆಗೆದುಕೊಂಡಿದ್ದೀರಿ. ಮುಂಚೆ ಪ್ರತಿ ಮಿಡಲ್ ಸ್ಕೂಲಿಗೂ ಒಂದು ಬಾವಿ ತೋಡಿಸಿ ಆ ದುಡ್ಡನ್ನು ಖರ್ಚುಮಾಡಿ. ಪ್ರಾರಂಭದಲ್ಲಿ ಒಂದು ಬಾವಿ ಅದಕ್ಕೆ ಸಂಬಂಧ ಪಟ್ಟ ಒಂದು ಲಿಫ್ಟ್ ಇರಿಗೇಷನ್ ಪಂಪು ಇವುಗಳನ್ನೆಲ್ಲಾ ಇಟ್ಟುಕೊಂಡು ಮುಂದೆ ವ್ಯವಸಾಯ ಮಾಡುವುದರ ಕಡೆಗೆ ಗಮನ ಕೊಡಿ. ಬಿತ್ತನೆ ಬಿತ್ತು ಮಳೆ ಇಲ್ಲದೇ ಇದ್ದರೆ ಕಷ್ಟಪಟ್ಟದ್ದೆಲ್ಲಾ ಹೋಯಿತು. ಆ ರೀತಿ ಆಗದೇ ಇರಲಿ ಪ್ರತಿ ಮಿಡಲ್ ಸ್ಕೂಲಿನ ಆವರಣದಲ್ಲೂ ಸದಾ ಕಾಲ ನೀರು ಇರುವ ಒಂದು ಬಾವಿ, ಆ ಬಾವಿಯಿಂದ ನೀರು ಹಾಯಿಸುವುದಕ್ಕೆ ಒಂದು ಪಂಪಿನ ಏರ್ಪಾಡು ಇದನ್ನೆಲ್ಲಾ ಮಾಡಿದರೆ ನಿಜವಾಗಿಯೂ ಭೂಧಾನದಿಂದ ಬಂದಿರತಕ್ಕ ಜಮೀನನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ.

ಇನ್ನೊಂದು ವಿಷಯ. ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಪ್ರೈವೇಟ್ ವಿದ್ಯಾರ್ಥಿಗಳನ್ನು ಎಂದರೆ ಸ್ಕೂಲಿಗೆ ಹೋಗದೇ ಓದಿರತಕ್ಕ ಸ್ವಲ್ಪ ವಯಸ್ಸಾಗಿರತಕ್ಕ ವಿದ್ಯಾರ್ಥಿಗಳು ಒಂದು ವೇಳೆ ಅವರು ಎಸ್.ಎಸ್.ಎಲ್.ಸಿ., ಪರೀಕ್ಷೆಗೆ ಕುಳಿತುಕೊಳ್ಳುತ್ತೇವೆ ಎಂದು ಇಷ್ಟಪಟ್ಟರೆ ಪರೀಕ್ಷೆಗೆ ಕುಳಿತುಕೊಳ್ಳಲು ಅವರಿಗೆ ಅವಕಾಶ ಕೊಡಬೇಕು. ಏಕೆಂದರೆ ಎಷ್ಟೋ ಜನ ಆರ್ಥಿಕ ದುಸ್ಥಿತಿಯಿಂದ ಕೆಲಸಕ್ಕೆ ಹೋಗುತ್ತಾ ಇರುತ್ತಾರೆ. 16-17 ವಯಸ್ಸಾಗಿರುತ್ತದೆ. ಅವಕಾಶವಿದ್ದಾಗ ಓದುತ್ತೇನೆ, ಎಸ್. ಎಸ್. ಎಲ್. ಸಿ. ಆಗಿದೆ ಎಂದು ಒಂದು ಹೆಸರು ಇರಲಿ ಎಂಬ ಅಭಿಲಾಷೆ ಅವರಲ್ಲಿರುತ್ತದೆ. ಅಂಥ ಹುಡುಗರಿಗೆ, ಪ್ರೈವೇಟ್ ಆಗಿ ಪರೀಕ್ಷೆಗೆ ಕುಳಿತುಕೊಳ್ಳುತ್ತೇವೆ ಎಂದರೆ ಅವಕಾಶ ಕೊಡುವ ಹಾಗೆ ಏರ್ಪಾಡು ಮಾಡಬೇಕು. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಹೈಸ್ಕೂಲುಗಳಲ್ಲಿ ಮುನಿಸಿಪಲ್ ಹೈಸ್ಕೂಲುಗಳು, ಸರ್ಕಾರಿ ಹೈಸ್ಕೂಲುಗಳು, ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳು ಎಂದು ನಾನಾ ರೀತಿಯ ಹೈಸ್ಕೂಲುಗಳಿರುವುದು ನಮಗೆಲ್ಲರಿಗೂ ಗೊತ್ತಿದೆ. ಇವುಗಳ ಕಾರ್ಯ ಕ್ರಮ ಎಲ್ಲ ಹೈಸ್ಕೂಲುಗಳಿಗೂ ಕೂಡ ಒಂದೇ ರೀತಿಯಾಗಿರುತ್ತದೆ. ಮುನಿಸಿಪಲ್ ಹೈಸ್ಕೂಲುಗಳಲ್ಲಿ ಉಪಾಧ್ಯಾಯರಿಗೆ ಸಂಬಳ ಸಿಕ್ಕಬೇಕಾಗಿದ್ದರೆ ಖಂಡಿತವಾಗಿಯೂ ಬಹಳ ಕಷ್ಟವಾಗಿದೆ.

ಅನೇಕ ಮುನಿಸಿಪಲ್ ಹೈಸ್ಕೂಲುಗಳಲ್ಲಿ ಈಗಾ
ಗಲೇ ಸ್ಕೂಲು ಪ್ರಾರಂಭವಾಗಿ ಎರಡು ತಿಂಗಳಾದರೂ
ಕೂಡ ಉಪಾಧ್ಯಾಯರಿಗೆ ಸಂಬಳ ಸಿಕ್ಕದೇ ಇರುವ
ಅನೇಕ ಹೈಸ್ಕೂಲುಗಳು ಇವೆ. ನಾವು ಅನೇಕ
ವೇಳೆ ಮುನಿಸಿಪಲ್ ಹೈಸ್ಕೂಲು, ಡಿಸ್ಟ್ರಿಕ್ಟ್ ಬೋರ್ಡ್
ಹೈಸ್ಕೂಲುಗಳನ್ನು ಅವರು ಎಷ್ಟು ಕೋಟಾ
ಕೊಡಬೇಕೋ ಅಷ್ಟನ್ನು ತೆಗೆದುಕೊಂಡು ಸರ್ಕಾರಿ
ಹೈಸ್ಕೂಲುಗಳನ್ನಾಗಿ ಪರಿವರ್ತನೆ ಮಾಡಿ ಎಂದು
ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಂಡಿದ್ದೇವೆ.
ಆ ರೀತಿ ಪರಿವರ್ತನೆ ಮಾಡುವುದಕ್ಕೆ ಏನು ತೊಂದರೆ
ಇದೆಯೋ ಗೊತ್ತಿಲ್ಲ. ಹಾಗೆ ಮಾಡದಿದ್ದರೆ ಈ ಮುನಿ
ಸಿಪಲ್ ಹೈಸ್ಕೂಲುಗಳ ಕೆಲಸ ಕಾರ್ಯಗಳು ಹೆಚ್ಚಿನ
ಮಟ್ಟದಲ್ಲಿ ಆಗದೇ ಅಲ್ಲಿನ ಹುಡುಗರ ವಿದ್ಯಾಭ್ಯಾಸ
ಚೆನ್ನಾಗಿ ನಡೆಯುವುದಕ್ಕೆ ಬಹಳ ತೊಂದರೆಯಾಗು
ತ್ತದೆ. ಈಗಲಾದರೂ ನಮ್ಮ ಸರ್ಕಾರದವರು ಎಲ್ಲಾ
ಮುನಿಸಿಪಲ್ ಹೈಸ್ಕೂಲುಗಳನ್ನೂ ಸರ್ಕಾರಿ
ಹೈಸ್ಕೂಲುಗಳನ್ನಾಗಿ ಪರಿವರ್ತನೆ ಮಾಡಿ ಆಯಾ
ಮುನಿಸಿಪಾಲಿಟಿಯವರ ಕೋಟಾ ಎಷ್ಟು ಎಂಬುದನ್ನು
ಗೊತ್ತು ಮಾಡಿದರೆ ಖಂಡಿತವಾಗಿಯೂ ಬಹಳ ಉಪ
ಕಾರವಾಗುತ್ತದೆ ಎಂದು ಹೇಳುತ್ತೇನೆ.

ಪ್ರೈಮರಿ ಸ್ಕೂಲುಗಳ ಕಟ್ಟಡಗಳ ವಿಷಯ ಹೇಳ
ಬೇಕೆಂದರೆ ಖಂಡಿತವಾಗಿಯೂ ಬಹಳ ವಿಷಾದವಾಗು
ತ್ತದೆ. ಅನೇಕ ಗ್ರಾಮಗಳಲ್ಲಿ ಪ್ರೈಮರಿ ಸ್ಕೂಲು
ಗಳು ಹುಲ್ಲು ಜೋಪಡಿಗಳಲ್ಲೋ ಅಥವಾ ಮರಗಳ
ನೆರಳಿನಲ್ಲೋ ನಡೆಯುತ್ತಿವೆ. ಇದರಿಂದ ಹುಡು
ಗರಿಗೂ ಮತ್ತು ಉಪಾಧ್ಯಾಯರಿಗೂ ಬಹಳ
ತೊಂದರೆಯಾಗಿದೆ. ಮಳೆಗಾಲದಲ್ಲಂತೂ ಮಳೆಯ
ದೆಸೆಯಿಂದ ಪಾಠಗಳನ್ನು ಮಾಡುವುದೇ ಕಷ್ಟ.
ಸ್ಕೂಲಿನ ತುಂಬ ನೀರು ನಿಂತುಕೊಂಡಿ
ರುತ್ತದೆ. ಈ ರೀತಿ ಆದರೆ ಅಲ್ಲಿನ ವಿದ್ಯಾರ್ಥಿಗಳ
ವಿದ್ಯಾಭ್ಯಾಸಕ್ಕೆ ಎಷ್ಟು ತೊಂದರೆ ಎಂಬುದನ್ನು
ತಾವೇ ಯೋಚನೆ ಮಾಡಿ. ಪಟ್ಟಣಗಳಲ್ಲಿರತಕ್ಕ
ದೊಡ್ಡ ದೊಡ್ಡ ಹೈಸ್ಕೂಲು ಮುಂತಾದುವುಗಳಿಗೆ
ತಾವು ಬೇಕಾದಷ್ಟು ಹಣ ವ್ಯಯ ಮಾಡುತ್ತೀರಿ.
ಅದೇರೀತಿ ಗ್ರಾಮಾಂತರಗಳಲ್ಲಿರತಕ್ಕ ಪ್ರೈಮರಿ
ಸ್ಕೂಲುಗಳಿಗೂ ಹಣ ವ್ಯಯ ಮಾಡಿದರೆ ಖಂಡಿತವಾ
ಗಿಯೂ ಪ್ರಯೋಜನವಾಗುತ್ತದೆ. ನಮಗೆ ಸ್ವರಾಜ್ಯ
ಬಂದ ಮೇಲೆ ನಾವು ವಿದ್ಯಾಭ್ಯಾಸದ ವಿಷಯದಲ್ಲಿ
ಬಹಳ ಪ್ರಗತಿದಾಯಕವಾಗಿ ಕೆಲಸ ಮಾಡುತ್ತಿರುವುದು
ಖಂಡಿತವಾಗಿಯೂ ಬಹಳ ಸಂತೋಷದ ವಿಷಯ.
ಆದರೆ ಇತರ ಸಂಸ್ಥಾನಗಳಲ್ಲಿ ಶೇಕಡಾವಾರು
ವಿದ್ಯಾವಂತರ ಸಂಖ್ಯೆ ಹೆಚ್ಚಾಗಿರುವಾಗ ನಮ್ಮಲ್ಲಿ
ಇನ್ನೂ ಕಡಮೆಯಾಗಿದೆ. ಅದಕ್ಕೆ ನಮ್ಮ
ಸರ್ಕಾರದವರು ಕಂಪಲ್ಸರಿ ಎಜ್ಯುಕೇಷನನ್ನು
ಜಾರಿಗೆ ತಂದು ತನ್ಮೂಲಕ ಕೆಲವೇ ವರ್ಷಗಳಲ್ಲಿ
100ಕ್ಕೆ 50 ಜನ ವಿದ್ಯಾವಂತರಾಗುವುದಕ್ಕೆ ಅವಕಾಶ
ಕಲ್ಪಿಸಬೇಕು. ಮತ್ತು ಬಡವರಿಗೆ ಹರಿಜನರಿಗೇ
ಆಗಲೀ ಯಾವ ಜಾತಿಯವರಿಗೇ ಆಗಲೀ, ಖಾಸಗಿಯವ
ರಾಗಲೀ, ಸರ್ಕಾರಿ ನೌಕರರಾಗಲೀ ಬಡ ವಿದ್ಯಾರ್ಥಿ
ಗಳಿಗೆ ಫ್ರೀ ಎಜ್ಯುಕೇಷನ್ ಕೊಡಬೇಕು ಮತ್ತು ಅವರಿಗೆ
ಹಾಸ್ಟೆಲುಗಳನ್ನು ನಿರ್ಮಾಣ ಮಾಡಿ ಅವರ ವಿದ್ಯಾ
ಭ್ಯಾಸಕ್ಕೆ ಸಹಾಯವಾಗುವಂತೆ ಏರ್ಪಾಡು ಮಾಡಲು
ಪ್ರಯತ್ನ ಮಾಡಬೇಕು. ಇವತ್ತು ಈ ಹಾಸ್ಟೆಲುಗಳು
ಸಿಟಿಗಳಲ್ಲಿ ಹೆಚ್ಚಾಗಿ ಇವೆಯೇ ಹೊರತು ಗ್ರಾಮಾಂತರ
ಗಳಲ್ಲಿ ಯಾವುವೂ ಇಲ್ಲ. ನಮ್ಮ ನೆಲಮಂಗಲ
ತಾಲ್ಲೂಕ್ ತ್ಯಾಮಗೊಂಡ್ಲುವಿನಲ್ಲಿ ಹೈಸ್ಕೂಲು
ಇದೆ. ಐನೂರು ಜನ ವಿದ್ಯಾರ್ಥಿಗಳು ಇದ್ದಾರೆ.
ಅನೇಕರು 8—10 ಮೈಲಿ ದೂರದಿಂದ ಬರಬೇಕು.
ಎಂಟು ಹತ್ತು ಮೈಲಿ ದೂರದಿಂದ ಬಂದು ವಿದ್ಯಾ
ಭ್ಯಾಸ ಮಾಡಬೇಕೆಂದರೆ ಎಷ್ಟು ಕಷ್ಟ, ಎಷ್ಟು
ತೊಂದರೆ ಇದೆ ಎಂಬುದನ್ನು ತಾವೇ ಯೋಚನೆಮಾಡಿ.
ಆದ್ದರಿಂದ ಗ್ರಾಮಾಂತರಗಳಲ್ಲಿ ಒಂದೊಂದು ಜನರಲ್
ಹಾಸ್ಟೆಲುಗಳನ್ನು ಏರ್ಪಾಡು ಮಾಡಿ ತನ್ಮೂಲಕ
ಗ್ರಾಮಾಂತರದಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಅನುಕೂಲ
ವನ್ನೊದಗಿಸಬೇಕಾದ್ದು ನಮ್ಮ ಸರ್ಕಾರದವರ
ಮುಖ್ಯ ಕರ್ತವ್ಯ ಎಂದು ನಾನು ಹೇಳುತ್ತೇನೆ.

ಇನ್ನು ಪಾರಿಭಾಷಿಕ ವಿದ್ಯಾಭ್ಯಾಸದ ವಿಚಾರದಲ್ಲಿ
ಹೇಳುವುದಾದರೆ, ವಿದ್ಯಾರ್ಥಿಗಳಿಗೆ ಹೆಚ್ಚು ಸೀಟು
ಗಳನ್ನು ಅಲ್ಲಿ ಒದಗಿಸಬೇಕು. ಏಕೆಂದರೆ ಈಗ ಪಾರಿ
ಭಾಷಿಕ ವಿದ್ಯಾಭ್ಯಾಸಕ್ಕೆ ಬಹಳ ಪ್ರಾಮುಖ್ಯತೆ ಇದೆ.
ಅದರಲ್ಲೂ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ
ವಿದ್ಯಾರ್ಥಿಗಳಿಗೆ ಪ್ರಿಫರೆನ್ಸ್ ಕೊಟ್ಟು ಅವರಿಗೆ ಹೆಚ್ಚು
ಸೀಟುಗಳು ದೊರಕುವಂತೆ ಮಾಡಬೇಕಾದದ್ದು ನಮ್ಮ
ಸರ್ಕಾರದ ಕರ್ತವ್ಯವಾಗಿದೆ.

ಗ್ರಾಮಾಂತರಗಳಲ್ಲಿ ಈಗ ಅನೇಕ ಬೇಸಿಕ್ ಸ್ಕೂಲು
ಗಳನ್ನು ಸ್ಥಾಪನೆ ಮಾಡಿದ್ದೀರಿ. ಇದು ಬಹಳ ಸಂತೋ
ಷದ ವಿಷಯ. ಬೇಸಿಕ್ ಸ್ಕೂಲುಗಳನ್ನು ಇನ್ನೂ
ಹೆಚ್ಚು ಹೆಚ್ಚಾಗಿ ಸ್ಥಾಪನೆ ಮಾಡಬೇಕಾದದ್ದು ಸರ್ಕಾರ
ದವರ ಕರ್ತವ್ಯ ಮತ್ತು ಅವುಗಳಿಗೆ ಏನು ಸಲಕರಣೆ
ಗಳು ಬೇಕೋ ಅವುಗಳನ್ನೆಲ್ಲಾ ಆದಷ್ಟು ಜಾಗ್ರತೆ
ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—
ವಿಶ್ವವಿದ್ಯಾನಿಲಯದವರಿಗೂ ಮತ್ತು ಸರ್ಕಾರದವ
ರಿಗೂ ಕೆಲವು ವರ್ಷಗಳ ಹಿಂದಿನಿಂದಲೂ ಖಾಸಗೀ
ಕಾಲೇಜುಗಳನ್ನು ಸ್ಥಾಪನೆ ಮಾಡಿಸುವ ವಿಷಯದಲ್ಲಿ
ಉತ್ಸಾಹವಿದ್ದುದರಿಂದ ಅನೇಕ ಖಾಸಗೀ ಕಾಲೇಜು
ಗಳನ್ನು ದೇಶಾದ್ಯಂತ ಸ್ಥಾಪನೆ ಮಾಡಲಿಕ್ಕೆ ಅವಕಾಶ
ಮಾಡಿಕೊಟ್ಟರು. ಅವರು ಯಾವ ಒಂದು ರೂಲ್ಸನ್ನು
ಗೊತ್ತು ಮಾಡಿದರೋ ಆ ರೂಲ್ಸಿನ ಚೌಕಟ್ಟಿನಲ್ಲಿ ಆ
ಕಾಲೇಜುಗಳು ಆದಿಯಿಂದಲೂ ನಡೆದುಕೊಂಡು
ಬಂದಿವೆ ಎಂಬುದು ಈಗಾಗಲೇ ಸರ್ಕಾರದವರ ಗಮ
ನಕ್ಕೆ ಬಂದಿದೆ. ಮೇಂಟೆನೆನ್ಸ್ ಗ್ರಾಂಟು, ಎಕ್ವಿಪ್
ಮೆಂಟ್ ಗ್ರಾಂಟು, ಬಿಲ್ಡಿಂಗ್ ಗ್ರಾಂಟು ಎಂದು
ಹೇಳಿ ಮೂರು ವಿಧವಾದ ಗ್ರಾಂಟುಗಳನ್ನು ಯೂನಿ
ವರ್ಸಿಟಿಯವರು ಅವರಿಗೆ ಕೊಡುತ್ತಾರೆ. ಆ ರೀತಿ
ಕೊಡುವಾಗ ವಿದ್ಯಾರ್ಥಿಗಳಿಂದ ಬರತಕ್ಕ ಫೀಜು,
ಮತ್ತು ಅವರಿಗೆ ಇರತಕ್ಕ ಖರ್ಚು ಇವುಗಳನ್ನೆಲ್ಲಾ
ಯೋಚನೆ ಮಾಡಿ ಒಟ್ಟು ಖರ್ಚಿನಲ್ಲಿ ಅರ್ಧ ಭಾಗವನ್ನು
ಆಯಾ ಕಾಲೇಜಿನ ಮ್ಯಾನೇಜ್‌ಮೆಂಟಿನವರು
ವಹಿಸಿಕೊಳ್ಳಬೇಕೆಂತಲೂ ಉಳಿದ ಅರ್ಧ ಭಾಗವನ್ನು
ಯೂನಿವರ್ಸಿಟಿಯವರು ಕೊಡುವುದಾಗಿಯೂ ತಿಳಿಸಿರು
ತ್ತಾರೆ. ಆದರೆ ಹಿಂದೆ ಈ ರೀತಿ ಒಂದು ಕಾನೂನನ್ನು
ಮಾಡಿದಾಗ ಹಣದ ಉಬ್ಬರ ಏನಿತ್ತು, ಇವತ್ತು ಏನಿದೆ
ಎಂಬುದನ್ನು ಸರ್ಕಾರದವರು ಗಣನೆಗೆ ತೆಗೆದುಕೊಳ್ಳ
ಬೇಕು. ಈ ದಿವಸ ಮ್ಯಾನೇಜ್‌ಮೆಂಟಿನವರು ವಹಿಸ
ಬೇಕಾಗಿರುವ ಶೇಕಡ 50 ಭಾಗದ ಖರ್ಚನ್ನೂ
ವಹಿಸುವುದಕ್ಕೆ ಅವರಿಗೆ ಬಹಳ ಕಷ್ಟವಾಗಿದೆ.
ಆದ್ದರಿಂದ ಗ್ರಾಂಟ್ ಇನ್ ಏಡ್ ರೂಲ್ಸನ್ನು ಬದ
ಲಾವಣೆ ಮಾಡಬೇಕೆಂದು ಹೇಳುತ್ತೇನೆ. ಆ ರೀತಿ
ಮಾಡಲಿಕ್ಕೆ ಸರ್ಕಾರದವರಿಗೇ ಪೂರ್ಣ ಹಕ್ಕು ಇದೆ.
ಅದು ಶಾಸನ ಸಭೆಯ ಮುಂದೆ ಬರಬೇಕಾಗಿಲ್ಲ ಎಂದು
ನಾನು ತಿಳಿದುಕೊಂಡಿದ್ದೇನೆ.

ಗ್ರಾಂಟ್ ಇನ್ ಏಡ್ ರೂಲ್ಸ್‌ಗೆ ಸಂಬಂಧಪಟ್ಟಂತೆ
ಸರ್ಕಾರದವರು ಸರ್ಕ್ಯುಲರ್ ಕಳುಹಿಸುತ್ತಾರೆ. ಆ

(ಶ್ರೀ ಯು. ಎಂ. ಮಾದಪ್ಪ)

ಸರ್ಕ್ಯುಲರ್ ಬಂದಾಗ ಯೂನಿವರ್ಸಿಟಿ ಅಥಾರಿಟೀಸ್ ತಮಗೆ ಯಾವುದೋ ಒಂದು ಅಂಶ ಅರ್ಥವಾಗಲಿಲ್ಲ ಎನ್ನುವುದರಮೇಲೆ ಕರೆಸ್‌ಪಾಂಡೆನ್ಸ್ ನಡೆಸುತ್ತಾರೆ ಅದೇ ಬಹಳ ದಿನ ತೆಗೆದುಕೊಂಡು ಬಿಡುತ್ತದೆ. ಆದ್ದರಿಂದ ಸರ್ಕಾರದವರಿಗೆ ನಾನು ಹೇಳುವುದೇನೆಂದರೆ ಗ್ರ್ಯಾಂಟ್ ಇನ್ ಏಡ್ ರೂಲ್ಸ್ ಪ್ರಕಾರ ಕೊಡತಕ್ಕ ಮೇಂಟನೆನ್ಸ್ ಗ್ರ್ಯಾಂಟನ್ನು ಪೂರ್ತಿಯಾಗಿ ಸರ್ಕಾರದವರೇ ವಹಿಸಿಕೊಳ್ಳಬೇಕು. ಇನ್ನು ಬಿಲ್ಡಿಂಗ್ ಗ್ರ್ಯಾಂಟ್ ಮತ್ತು ಎಕ್ವಿಪ್‌ಮೆಂಟ್ ಗ್ರ್ಯಾಂಟಿನಲ್ಲಿ 1/3 ಭಾಗವನ್ನು ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಂನವರು ವಹಿಸಿಕೊಳ್ಳುವಂತೆ ಮಾಡಬೇಕು. ಹಾಸ್ಟೆಲುಗಳ ವಿಷಯದಲ್ಲಿ ಸರ್ಕಾರದ ಒಂದು ಆರ್ಡರು ಇದೆ. ಸಾರ್ವಜನಿಕ ಹಾಸ್ಟೆಲುಗಳನ್ನು ಕಟ್ಟಿಸಬೇಕಾದರೆ ಕಟ್ಟಡಕ್ಕೆ ಸೇಕಡ 75 ರಷ್ಟು ಗ್ರ್ಯಾಂಟ್ ಕೊಡಲಾಗುತ್ತದೆ ಎಂದು ಇದೆ. ಅದೇ ಆರ್ಡರು ಈ ಕಾಲೇಜುಗಳಿಗೂ ಸಹ ಅನ್ವಯಿಸುವಂತೆ ಏರ್ಪಾಡು ಮಾಡಿಕೊಡಬೇಕೆಂದು ಸರ್ಕಾರದವರ ಗಮನಕ್ಕೆ ತರುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಅದು ಅಫಿಲಿಯೇಟೆಡ್ ಕಾಲೇಜುಗಳಿಗೆ ಅನ್ವಯವಾಗುವುದಿಲ್ಲ. It will apply to constituent colleges run by Government and not by private enterprise.

ಶ್ರೀ ಯು. ಎಂ. ಮಾದಪ್ಪ.—ಅಫಿಲಿಯೇಟೆಡ್ ಕಾಲೇಜಿಗೆ apply ಆಗಬೇಕೇ, ಕಾನ್ಸಿಟ್ಯುಯಂಟ್ ಕಾಲೇಜಿಗೆ apply ಆಗಬೇಕೇ ಎನ್ನುವುದನ್ನು ಸರ್ಕಾರದವರಿಗೆ ಬಿಡುತ್ತೇನೆ. ಈಗಿನ ಹಣಕಾಸಿನ ಸ್ಥಿತಿ ಏನಿದೆ ಅದನ್ನು ನೋಡಿದರೆ, ಈ ಕಾಲೇಜುಗಳನ್ನು ಮ್ಯಾನೇಜ್ ಮಾಡುವುದಕ್ಕೆ ಸಾಧ್ಯವೇ ಇಲ್ಲದಂತಾಗಿದೆ. ಈಗಾಗಲೇ ಅನೇಕ ಏರ್ಪಾಡುಗಳನ್ನು ಮಾಡಿದ್ದರೂ ಕೂಡ ಅಫಿಲಿಯೇಟೆಡ್ ಕಾಲೇಜುಗಳಲ್ಲಿ ಸರಿಯಾದ ಎಕ್ವಿಪ್‌ಮೆಂಟ್ ಇಲ್ಲ ಎಂಬ ಭಾವನೆ ಜನಗಳಲ್ಲಿ ಬರುತ್ತಾ ಇದೆ. ಆದರೂ ಕೂಡ ಸರ್ಕಾರಿ ಕಾಲೇಜುಗಳಲ್ಲೇ ಹೆಚ್ಚಿಗೆ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಫೇಲ್ ಆಗುತ್ತಾರೆ ಅಫಿಲಿಯೇಟೆಡ್ ಕಾಲೇಜಿನಲ್ಲಿ ಅಷ್ಟು ಇಲ್ಲ ಎಂದು ಹೇಳುತ್ತಾರೆ.

ಶ್ರೀ ಎ. ಭೀಮಪ್ಪನಾಯಕ್.—ಅಂಕಿಅಂಶ ಕೊಡಿ.

ಶ್ರೀ ಯು. ಎಂ. ಮಾದಪ್ಪ.—ಅಂಕಿಅಂಶಗಳನ್ನು ತೋರಿಸುವ ಒಂದು ವರದಿ ಶ್ರೀ ಭೀಮಪ್ಪನಾಯಕರ ಹತ್ತಿರವೂ ಇದೆ ಎಂದು ತಿಳಿದುಕೊಂಡಿದ್ದೇನೆ. ಸೆನೆಟ್‌ನಲ್ಲಿ ಅವರೂ ಮಾತನಾಡಿದ್ದಾರೆ. ನಾನು ಸೆನೆಟ್ ಮೆಂಬರು, ನನಗೆ ಚೆನ್ನಾಗಿ ಗೊತ್ತು ಅವರಿಗೂ ರಿಪೋರ್ಟ್ ಬಂದಿರಬೇಕು ; ಆ ದೃಷ್ಟಿಯಿಂದ ಹೇಳುತ್ತೇನೆ. ಅಫಿಲಿಯೇಟೆಡ್ ಕಾಲೇಜುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಫೇಲ್ ಆಗುತ್ತಿಲ್ಲ ಎಂಬುದು ನಿಜವಾದ ಅಂಶ. ಸರ್ಕಾರದವರು ಮಾಡಬೇಕಾದ ಕಾರ್ಯವನ್ನು ಖಾಸಗೀ ಜನರು ಮುಂದೆ ಬಂದು ಮಾಡುತ್ತಾ ಇರುವಾಗ—ನಿಜ, ಕಾನ್ಸಿಟ್ಯೂಷನ್ ಪ್ರಕಾರ higher education ಸರ್ಕಾರದ obligatory duties ಅಲ್ಲ—ಸರ್ಕಾರದವರು ಖಾಸಗೀ ಜನರಿಗೆ ಪ್ರೋತ್ಸಾಹ ಕೊಡಬೇಕೆಂಬ ದೃಷ್ಟಿಯಿಂದ ಇದನ್ನು ಯೋಚನೆಮಾಡಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ).—ಈ ಡಿಮ್ಯಾಂಡಿನ ವಿಷಯದಲ್ಲಿ ಮಾತನಾಡುತ್ತಾ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಆದರೂ ಅಧ್ಯಕ್ಷರು ನನಗೆ ಐದು ನಿಮಿಷಗಳಿಗಿಂತ ಜಾಸ್ತಿ ಕಾಲಾವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಯೂನಿವರ್ಸಿಟಿ ಅಸಿಸ್ಟೆಂಟ್ ಪ್ರೊಫೆಸರುಗಳಿಗೆ ಬಡ್ತಿ ಕೊಡುವ ವಿಷಯದಲ್ಲಿ ಅನೇಕ ವಿಧವಾದ ಚರ್ಚೆ ಈ ಸಭೆಯಲ್ಲಿ ನಡೆದಿದೆ, ನನಗಂತೂ ಅದು ಬಹಳವಾಗಿ ಮನಸ್ಸಿಗೆ ನೋವನ್ನುಂಟುಮಾಡಿದೆ. ದೇಶದ ಮುಂದಿನ ಜನಾಂಗವನ್ನು ತರಪೇತು ಮಾಡತಕ್ಕ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ ಈ ತರಹ ಅನ್ಯಾಯವಾದರೆ ಉತ್ತಮ ರೀತಿಯಲ್ಲಿ ಕೆಲಸ ನಡೆಯುವುದು ಕಷ್ಟ. ಮುಂದಿನ ಪ್ರಜೆ, ಮುಂದಿನ ಪೀಳಿಗೆ ಬಹಳವಾಗಿ ಅವರನ್ನೇ ಅನುಸರಿಸಿ ನಿಂತಿದೆ ಎಂಬುದನ್ನು ನಾವು ನಿಜವಾಗಿಯೂ ತಿಳಿದುಕೊಳ್ಳಬೇಕು. ದಕ್ಷತೆಯಿಂದ ಕೆಲಸ ಮಾಡುವವರಿಗೆ, ನಿಸ್ವಾರ್ಥತೆಯಿಂದ ಕೆಲಸ ಮಾಡುವವರಿಗೆ ಸರ್ಕಾರದವರು ಮತ್ತು ಆಯಾ ಸಂಸ್ಥೆಗಳವರು ಬೆಂಬಲ ಕೊಡದೇ ಹೋದಪಕ್ಷದಲ್ಲಿ ಅವರು ಎಷ್ಟುಮಟ್ಟಿಗೆ ದೇಶಾಭಿಮಾನದಿಂದ ಕೆಲಸ ಮಾಡಬಲ್ಲರು ಎಂಬುದನ್ನು ನಾವು ಮೊದಲು ಪರಿಶೀಲನೆ ಮಾಡಬೇಕು. ವಿದ್ಯಾ ಸಂಸ್ಥೆಗಳಲ್ಲಿ ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ ನಾನು ಹೇಳುವುದಾದರೆ, ಜಾತಿಮತ ಭಾವನೆಯನ್ನಿಟ್ಟು ಕೊಂಡು ಅದಕ್ಕೆ ಉತ್ತೇಜನ ಕೊಡುತ್ತಾ ಹೋದರೆ ಖಂಡಿತವಾಗಿಯೂ ದೇಶದಲ್ಲಿ ಅನ್ಯಾಯವಾಗುತ್ತವೆ. ಯಾರು ಬುದ್ಧಿವಂತರೋ ಯಾರು ದಕ್ಷತೆಯಿಂದ ಕೆಲಸ ಮಾಡಬಲ್ಲರೋ ಯಾರಿಗೆ ಉತ್ತೇಜನವನ್ನು ನಿರೀಕ್ಷಿಸುವ ಹಕ್ಕು ಇದೆಯೋ ಅಂಥವರನ್ನ ಪ್ರೋತ್ಸಾಹಿಸಿ ಮುಂದಕ್ಕೆ ತರುವುದು ದೇಶದ ದೃಷ್ಟಿಯಿಂದ ಬಹಳ ಒಳ್ಳೆಯದು. ನಿಜವಾಗಿಯೂ ದಕ್ಷರಾಗಿರುವವರು, ದೇಶಾಭಿಮಾನಿಗಳಾಗಿರತಕ್ಕ ಅಧ್ಯಾಪಕವರ್ಗ ಮತ್ತು ಅಧಿಕಾರವರ್ಗದಲ್ಲಿ ಕೆಲವು ಅನ್ಯಾಯಗಳಾಗಿವೆಯೆಂದು ತಿಳಿದು ಬಂದಿದೆ. ಅವನ್ನು ಘನತರವಾದ ಈ ಸಭೆಯ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರಿಂದ ಆಗಿರತಕ್ಕ ಲೋಪದೋಷಗಳನ್ನು ಸರ್ಕಾರದವರು ತಮ್ಮ ಗಮನಕ್ಕೆ ತೆಗೆದುಕೊಂಡು ಈ ರೀತಿಯ ಲೋಪದೋಷಗಳು ಇನ್ನು ಮುಂದೆ ಆಗದ ರೀತಿಯಲ್ಲಿ ನಡೆಸಿಕೊಂಡು ಬರಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಈ ವಿಶ್ವವಿದ್ಯಾನಿಲಯದ ವಿಷಯದಲ್ಲಿ ನನ್ನ ಕಿವಿಗೆ ಅನೇಕ ವಿಧವಾದ ದೂರುಗಳು ಬಂದಿವೆ. ಯೂನಿವರ್ಸಿಟಿ ಕೌನ್ಸಿಲಿನ ಮೆಂಬರು ಅಲ್ಲದಿರುವುದರಿಂದ ಅಲ್ಲಿ ಇದನ್ನು ಚರ್ಚಿಸುವುದಕ್ಕೆ ಅವಕಾಶವಿಲ್ಲ. ಆದರೂ ನಾನು ಅದಕ್ಕೆ ಸಂಬಂಧಪಟ್ಟಂಥ ಸದಸ್ಯರಿಗೆ, ಮತ್ತು ಸರ್ಕಾರದ ವಿದ್ಯಾಭ್ಯಾಸದ ಇಲಾಖಾ ಮಂತ್ರಿಗಳ ಗಮನಕ್ಕೆ ಈ ಅನ್ಯಾಯವನ್ನು ತಂದೆ. ಆದರೆ ಅವರು ಇದನ್ನು ತೀರ್ಮಾನಿಸತಕ್ಕ ಜವಾಬ್ದಾರಿಯನ್ನು ತೆಗೆದುಕೊಳ್ಳಲಿಲ್ಲವೆಂದು ವ್ಯಸನಪಡುತ್ತಿದ್ದೇನೆ. ಆದುದರಿಂದ ಇದನ್ನು ಸರ್ಕಾರದವರು ಸರಿಪಡಿಸಬೇಕು. ನಿಜವಾಗಿಯೂ ದಕ್ಷರಾಗಿರುವಂಥವರಿಗೆ ಹೆಚ್ಚಿನ ಬೆಂಬಲ ಕೊಡಬೇಕು ಎಂದು ಸರ್ಕಾರದವರಲ್ಲಿ ಪ್ರಾರ್ಥನೆಮಾಡುತ್ತೇನೆ.

ಇನ್ನೂ ಒಂದು ವಿಷಯ. ಯಾರ್ಯಾರು ಜೊತೆಯಲ್ಲಿ ಹಿಂದುಗಡೆ ತಿರುಗಾಡುತ್ತಾರೋ, ಅಂಥವರಿಗೆ ಪ್ರೊಫೆಸರುಗಳು, ಅಸಿಸ್ಟೆಂಟ್ ಪ್ರೊಫೆಸರುಗಳು ಈ ಸ್ಥಾನಗಳಿಗೆ ಪ್ರಮೋಷನ್ ದೊರೆಯುತ್ತದೆ. ದಕ್ಷರಾಗಿ ಇರತಕ್ಕವರು, ಯೋಗ್ಯತೆ ಇರುವವರು ಸಾಮಾನ್ಯವಾಗಿ ಯಾರ ಜೊತೆಯಲ್ಲಿಯೂ ಸೇರುವುದಿಲ್ಲ. ಇಂಥವರು ಯೋಗ್ಯತೆಗೆ ಬೆಲೆ ಕೊಟ್ಟರೆ ಕೊಡಲಿ, ಇಲ್ಲದೆ ಇದ್ದರೆ ಬಿಡಲಿ ಎಂಬ ಮನೋಧರ್ಮವನ್ನು ಹೊಂದಿರುತ್ತಾರೆ.

ನಾನು ಸರ್ಕಾರದ ಮುಂದೆ ಮತ್ತು ಸಭೆಯ ಮುಂದೆ
ಈ ವಿಷಯವನ್ನು ಇಡುತ್ತಾ ಇದ್ದೇನೆ. ಸ್ವತಂತ್ರ
ಭಾರತಕ್ಕೆ ನಾವು ನಿಜವಾದ ಒಂದು ಒಳ್ಳೆಯ ಮಾರ್ಗ
ವನ್ನು ಹಾಕತಕ್ಕ ನಿಯಮಗಳನ್ನು ಸರ್ಕಾರದವರು
ಅನುಸರಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ
ಮಾಡುತ್ತೇನೆ.

ಪಠ್ಯ ಪುಸ್ತಕಗಳ ವಿಷಯ. ಇವುಗಳನ್ನು ನಾಲ್ಕು
ವರ್ಷಗಳ ಕಾಲವಾದರೂ ಬದಲಾವಣೆ ಮಾಡ
ಕೂಡದು. ಯಾರಾದರೂ ಪುಸ್ತಕವನ್ನು ಬರೆಯು
ವವರು, ಹಣ ಸಂಪಾದನೆ ಮಾಡುವುದರಲ್ಲಿ ಆಸಕ್ತ
ರಾಗಿರುವವರು ತಮ್ಮ ಪಠ್ಯ ಪುಸ್ತಕಗಳನ್ನು ಇಡ
ಬೇಕೆಂದು ಪ್ರಯತ್ನ ಮಾಡುತ್ತಾರೆ. ಹೀಗಾಗಿ
ವರ್ಷ ವರ್ಷಕ್ಕೆ ಪುಸ್ತಕಗಳನ್ನು ಬದಲಾಯಿಸಿದರೆ
ಬಡವರ ಮತ್ತು ರೈತರ ಪಾಡು ಹೇಗೆ, ಒಬ್ಬನಿಗೆ
ಐದಾರು ಜನ ಮಕ್ಕಳು ಇದ್ದು ಅವನು ಪ್ರತಿವರ್ಷವೂ
ಬೇರೆ ಬೇರೆ ಪುಸ್ತಕಗಳನ್ನು ಕೊಂಡುಕೊಳ್ಳಬೇಕು
ಎಂದರೆ ಅದು ಎಷ್ಟು ಕಷ್ಟ ಸಾಧ್ಯವಾದ ಕೆಲಸ
ವೆಂಬುದನ್ನು ಯೋಚನೆ ಮಾಡಬೇಕು. ಒಂದೇ ಪಠ್ಯ
ಪುಸ್ತಕವನ್ನು ಕೆಲವಾರು ವರ್ಷಗಳ ಕಾಲವಾದರೂ
ಮುಂದುವರಿಸಿದರೆ ಒಬ್ಬ ಹುಡುಗನು ಓದಿದ ಪುಸ್ತಕ
ವನ್ನು, ಅದನ್ನು ಅಚ್ಚುಕಟ್ಟಾಗಿ ಇಟ್ಟುಕೊಂಡ ಪಕ್ಷ
ದಲ್ಲಿ ಇತರರೂ ಸಹ ಅದೇ ಪುಸ್ತಕಗಳನ್ನು ಉಪ
ಯೋಗಿಸಬಹುದು. ಇದರಿಂದ ತಂದೆತಾಯಿಗಳಿಗೆ
ಎಷ್ಟೋ ಸಹಾಯ ಮಾಡಿದಹಾಗಾಗುತ್ತದೆ. ಅವ
ರಿಗೆ ಹಣಕಾಸಿನ ಉಳಿತಾಯ ಎಷ್ಟಾಗುತ್ತದೆ ಎಂಬು
ದನ್ನು ತಿಳಿದುಕೊಳ್ಳಬೇಕು. ಅಲ್ಲದೆ ಸರ್ಕಾರದವರು
ತಜ್ಞರಿಂದಲೂ ಮತ್ತು ವಿದ್ಯಾಭ್ಯಾಸದ ಉತ್ತಮ
ರಾದ ನಿಪುಣರಿಂದಲೂ ಪಠ್ಯ ಪುಸ್ತಕಗಳನ್ನು ಮಾಡಿಸಿ,
ಸರ್ಕಾರದವರೇ ಆ ಪುಸ್ತಕಗಳನ್ನು ಒದಗಿಸುವ
ವ್ಯವಸ್ಥೆ ಮಾಡಬೇಕು. ಇಷ್ಟೇ ಅಲ್ಲ. ನಮ್ಮ ಚಿಕ್ಕ
ಮಗಳೂರಿನಲ್ಲಿ ಅಲ್ಲಿಗೆ ಬೇಕಾದ ಪುಸ್ತಕಗಳಿರುವುದಿಲ್ಲ.
ಬೆಂಗಳೂರಿಗೆ ಬಂದು ನೋಡಿದರ ಇಲ್ಲಿ ದೊರೆಯು
ತ್ತವೆ. ಈ ವರ್ಷ ಸ್ಕೂಲು ಪ್ರಾರಂಭವಾಗಿ ಎರಡು
ತಿಂಗಳಾದರೂ ಸಹ ಕೆಲವು ಕಡೆ ಇನ್ನೂ ಪಠ್ಯ ಪುಸ್ತಕ
ಗಳು ಸಪ್ಲೈ ಆಗಿಲ್ಲ. ಇದರಿಂದ ಹುಡುಗರಿಗೆ ಬಹಳ
ತೊಂದರೆಯುಂಟಾಗಿದೆ. ಆದುದರಿಂದ ಸರ್ಕಾರ
ದವರು ಈ ವಿಷಯದಲ್ಲಿ ಹೆಚ್ಚಿನ ನಿಗಾ ತೆಗೆದುಕೊಳ್ಳ
ಬೇಕೆಂದು ಸರ್ಕಾರದವರನ್ನು ಪ್ರಾರ್ಥನೆ ಮಾಡಿ
ಕೊಳ್ಳುತ್ತೇನೆ.

ಔದ್ಯೋಗಿಕ ಶಾಲೆಗಳ ವಿಷಯದಲ್ಲಿ ಹೇಳುವುದಾದರೆ
ಚಿಕ್ಕಮಗಳೂರಿನಲ್ಲಿ ಒಂದು ಸಂಸ್ಥೆಯೂ ಇಲ್ಲ.
ಚಿಕ್ಕಮಗಳೂರು ಮಲೆನಾಡಿಗೆ ಸೇರಿದ ಒಂದು ಜಿಲ್ಲೆ.
ಇದು ಹಿಂದೆಬಿದ್ದ ಜಿಲ್ಲೆಯಾಗಿದೆ. ವಿದ್ಯಾ ಮಂತ್ರಿಗಳು
ಪ್ರಶ್ನೆಯೊಂದಕ್ಕೆ ಉತ್ತರ ಕೊಡುವ ಪ್ರಸಂಗ
ಬಂದಾಗ, ತುಮಕೂರು ಮತ್ತು ಚಿಕ್ಕಮಗಳೂರು
ಜಿಲ್ಲೆಗಳಿಗೆ ಔದ್ಯೋಗಿಕ ಶಾಲೆಗಳನ್ನು, ಅಲ್ಲಿಯ ಜನರು
ಮುಂದೆ ಬಂದು ಧನ ಸಹಾಯಮಾಡಿದರೆ, ಕೊಡುವು
ದಾಗಿಯೂ ತಿಳಿಸಿದರು.

ಈ ಶಾಲೆಗಳಲ್ಲಿ ಓದಬಹುದಾದ ವಿದ್ಯಾರ್ಥಿಗಳಿಗೆ
ಸಹಾಯ ಮಾಡಲು ಚಿಕ್ಕಮಗಳೂರಿನಲ್ಲಿ ಕೂಡಲೇ
ಒಂದು ಔದ್ಯೋಗಿಕ ಶಾಲೆಯನ್ನು ತೆರೆಯಬೇಕು.
ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯವರ ಪರವಾಗಿ,
ಅದಕ್ಕೆ ಬೇಕಾದ ಎಲ್ಲ ಸಹಾಯಗಳನ್ನೂ ಮಾಡು
ವುದಕ್ಕೆ ಸಿದ್ಧರಾಗಿದ್ದೇವೆಂದು ತಿಳಿಸುತ್ತೇನೆ.

ಚಿಕ್ಕಮಗಳೂರಿನಲ್ಲಿ ಒಂದು Intermediate
College ಇದೆ. ನನ್ನ ಪ್ರಶ್ನೆಗೆ ಉತ್ತರ ಹೇಳಿದ
ಕಾಲದಲ್ಲಿ ಕಾಲೇಜಿಗೆ ಸರಿಯಾದ ಸ್ಥಳವಿಲ್ಲದೆ ಐದಾರು
ಕಡೆ ತರಗತಿಗಳನ್ನು ನಡೆಸುತ್ತಿರುವುದಾಗಿ ತಿಳಿಸಿದರು.
ಇಲ್ಲಿ ಸುಮಾರು 200-250 ಜನ ವಿದ್ಯಾಭ್ಯಾಸ
ಮಾಡುತ್ತಿದ್ದಾರೆ. ದೊಡ್ಡವರೂ ಭಾಗ್ಯವಂತರೂ
ಆದವರು ತಮ್ಮ ಮಕ್ಕಳನ್ನು ಬೆಂಗಳೂರಿನಲ್ಲಿ
ಸೆಂಟ್ರಲ್ ಕಾಲೇಜ್, ಮೌಂಟ್ ಕಾರ್ಮೆಲ್
ಕಾಲೇಜ್, ಇತ್ಯಾದಿಗಳಿಗೆ ವ್ಯಾಸಂಗಕ್ಕೆ ಕಳುಹಿಸು
ತ್ತಿದ್ದಾರೆ. ಕಾರಣವೇನೆಂದರೆ, ಚಿಕ್ಕಮಗಳೂರಿನಲ್ಲಿ
ಓದಲು ಇರತಕ್ಕ ಅನಾನುಕೂಲ ಮತ್ತು ಐದಾರು
ಕಡೆಗಳಿಗೆ ಓಡಾಡುತ್ತ ಇರಬೇಕು. ಬಡವರು ಮತ್ತು
ಬೇರೆ ಕಡೆ ಹೋಗಿ ಓದಲು ಶಕ್ತಿ ಇಲ್ಲದವರು ಈ
ಕಾಲೇಜಿನಲ್ಲಿ ಓದುತ್ತಿದ್ದಾರೆ. ಆದುದರಿಂದ ಚಿಕ್ಕ
ಮಗಳೂರು ಕಾಲೇಜಿಗೆ ಒಂದು ಕಟ್ಟಡವನ್ನು ಕೊಡಲು
ವಿಶಾಲ ಮನೋಭಾವದಿಂದ ಪರಿಶೀಲಿಸುತ್ತಾರೆಂದು
ನಂಬಿದ್ದೇನೆ. ಜಾಗ್ರತೆ ಒಂದು ಕಟ್ಟಡವನ್ನು
ಕೊಡುವ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸು
ತ್ತೇನೆ.

ಸರ್ಕಾರದವರು ಈಗ ಸಾರ್ವಜನಿಕ ಹಾಸ್ಟೆಲು
ಗಳನ್ನು ಮಾಡಬೇಕೆಂಬ ಒಂದು ದೊಡ್ಡ ಉದ್ಯಮ
ವನ್ನು ಕೈಗೊಂಡಿದ್ದಾರೆ. ಇದು ಬಹಳ ಯಶಸ್ವಿಯಾದ
ವಿಷಯ. ದೇಶದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗ
ಬೇಕಾದರ ಜಾತಿ ಹಾಸ್ಟಲುಗಳ ವ್ಯವಸ್ಥೆ ಹೋಗ
ಬೇಕು. ಇದೇ ದೇಶದ ಉನ್ನತಿಗೆ ಕಾರಣ. ಜಾತಿ
ಹಾಸ್ಟಲುಗಳಿಗೆ ಕೊಡತಕ್ಕ ಪ್ರೋತ್ಸಾಹ ಕಡಿಮೆ
ಯಾಗಿ ಸಾರ್ವಜನಿಕ ಹಾಸ್ಟಲುಗಳು ಜರೂರಾಗಿ
ಸ್ಥಾಪನೆಯಾಗಬೇಕು.

ಇನ್ನೊಂದು ವಿಚಾರ. ಸಾರ್ವಜನಿಕ ಹಾಸ್ಟಲು
ಗಳನ್ನು ತೆರೆಯುವಾಗ ಗಂಡುಹುಡುಗರಿಗೆ ಮಾತ್ರ
ತೆರೆಯುತ್ತಿದ್ದೀರಿ. ಹೆಣ್ಣು ಮಕ್ಕಳು ಕಾಲೇಜು ಮತ್ತು
ಔದ್ಯೋಗಿಕ ಶಾಲೆಗಳಿಗೆ ವ್ಯಾಸಂಗ ಮಾಡಲು ಬರ
ಬೇಕಾಗಿರುವುದರಿಂದ ಅವರಿಗೆ ಹಾಸ್ಟಲು ಇಲ್ಲದೆ
ಬಹಳ ತೊಂದರೆಯಾಗಿದೆ. ಐಶ್ವರ್ಯವಂತರ ಮಕ್ಕಳ
ವಿಷಯದಲ್ಲಿ ಹೆಚ್ಚುಹೇಳಬೇಕಾಗಿಲ್ಲ. ಬಡವರಿಗೆ
ಬಹಳ ಕಷ್ಟವಾದುದರಿಂದ ಕಡಿಮೆ ಖರ್ಚಿನಲ್ಲಿ ಹೆಣ್ಣು
ಮಕ್ಕಳಿಗೆ ಹಾಸ್ಟಲುಗಳನ್ನು ಎಲ್ಲಾ ಕಡೆಗಳಲ್ಲಿಯೂ
ಒದಗಿಸುವ ವ್ಯವಸ್ಥೆಯನ್ನು ಸರ್ಕಾರದವರು ಮಾಡ
ಬೇಕು. ದೇಶದ ಪ್ರಜಾಸಂಖ್ಯೆಯಲ್ಲಿ ಅರ್ಧಭಾಗ
ವಿರತಕ್ಕ ಹೆಣ್ಣುಮಕ್ಕಳ ಹಾಸ್ಟಲು ವಿಚಾರದಲ್ಲಿ
ಸರ್ಕಾರದವರು ವಿಶಾಲ ದೃಷ್ಟಿಯಿಂದ ನೋಡಬೇಕು
ಎಂದು ಹೇಳುತ್ತೇನೆ. ನಮ್ಮ ಸರ್ಕಾರದವರು ದಯ
ಮಾಡಿ ಹೆಣ್ಣು ಮಕ್ಕಳ ಹಾಸ್ಟಲುಗಳನ್ನು ಕೆಲವು ಕಡೆ
ಗಳಲ್ಲಾದರೂ ಪ್ರಾರಂಭ ಮಾಡಬೇಕೆಂದು ಪ್ರಾರ್ಥನೆ
ಮಾಡುತ್ತೇನೆ.

ವಿದೇಶಗಳಿಗೆ ಡಾಕ್ಟರುಗಳನ್ನು ಕಳುಹಿಸಿ ಕೊಡ
ತಕ್ಕ ವಿಚಾರದಲ್ಲಿ ಒಂದೆರಡು ಮಾತು. ನಮ್ಮ ದೇಶ
ದಲ್ಲಿ ತಜ್ಞರಾದ ಅನೇಕ ಜನ ಡಾಕ್ಟರುಗಳಿದ್ದಾರೆ.
ಅವರಿಗೆಲ್ಲ ವಯಸ್ಸಾಗುತ್ತಿದೆ. ಇನ್ನು ಅವರ ನಂತರ
ನಮಗೆ ಸರಿಯಾದ ಡಾಕ್ಟರುಗಳು ಸಿಗದೆ ತೊಂದರೆ
ಬರಬಹುದು. ಈಗ ಬೆಂಗಳೂರು ಮತ್ತು ಮೈಸೂರು
ನಗರಗಳಲ್ಲಿ ದೊಡ್ಡ ದೊಡ್ಡ ಡಾಕ್ಟರುಗಳಿದ್ದಾರೆ.
ಹಳ್ಳಿಗಳ ಕಡೆ ಒಳ್ಳೆಯ ಡಾಕ್ಟರುಗಳು ಅತಿವಿರಳ.
ಚಿಕ್ಕಮಗಳೂರಿನಲ್ಲಿ ಒಂದು ಆಪರೇಷನ್ ಆಗಬೇಕಾ
ದರೆ, ಅದಕ್ಕಾಗಿ ಬೆಂಗಳೂರಿಗೆ ಡಾಕ್ಟರ್ ಆದಿಕೇಶ
ವಲುರವರಲ್ಲಿಗೆ ಬರಬೇಕು. ಡಿಸ್ಟ್ರಿಕ್ಟ್ ಹೆಡ್‌ಕ್ವಾ
ರ್ಟರುಗಳಲ್ಲಿ ಒಳ್ಳೊಳ್ಳೆಯ ಸರ್ಜನ್ಸ್ ಮತ್ತು ಫಿಸಿಷಿ
ಯನ್ಸ್ ಹಾಕಿದರೆ ಬಹಳ ಅನುಕೂಲವಾಗು
ತ್ತದೆ. ಮತ್ತು ಬಡವರು, ಇತರರು ಬೆಂಗಳೂರಿಗೆ
ಬಂದು ಖರ್ಚು ಮಾಡಬೇಕಾದದ್ದು ಉಳಿತಾಯವಾಗು

(ಶ್ರೀಮತಿ ಬಿ. ಎಲ್. ಸುಬ್ಬಮ್ಮ).

ತ್ತದೆ. ಆದುದರಿಂದ ವಿದೇಶಗಳಿಗೆ ಡಾಕ್ಟರುಗಳನ್ನು ಸರ್ಜರಿ ಮೆಡಿಸಿನ್ ಮತ್ತು ಇತರ ವಿಭಾಗಗಳಲ್ಲಿ ಉಚ್ಚ ಶಿಕ್ಷಣವನ್ನು ಪಡೆಯಲು ಜಾಗ್ರತೆ ಕಳುಹಿಸಿ ಕೊಡುವ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ.

ಪಟ್ಟಣಗಳಲ್ಲಿ ಎರಡು ಮೂರು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಸ್ಕೂಲು ಕಟ್ಟಡಗಳನ್ನು ಕಟ್ಟಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಹಳ್ಳಿಗಳಲ್ಲಿ ಕಟ್ಟಡವಿಲ್ಲದೆ ಎಷ್ಟು ಕಷ್ಟಪಡುತ್ತಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಹಳ್ಳಿಗಳಲ್ಲ ಒಂದು ಸ್ಕೂಲು ಕಟ್ಟಡ ಕಟ್ಟುತ್ತೇವೆಂದರೆ 500 ರೂಪಾಯಿ ಕೊಡುತ್ತಾರೆ. ಆದರೆ ಅದನ್ನು ಪ್ಲಾನ್ ಪ್ರಕಾರವೇನಾದರೂ ಕಟ್ಟಿದರೆ ಈ ಹಣ ಸಾಲುವುದಿಲ್ಲ ಮತ್ತು ಹಳ್ಳಿಯವರು ಉಳಿದ ಹಣವನ್ನು ಹಾಕಿ ಕಟ್ಟಿಸಲು ಮುಂದೆ ಬರುವುದಿಲ್ಲ. ಆದುದರಿಂದ ಹಳ್ಳಿಯವರು ಬಿದಿರು, ಬೊಂಬು, ವಗೈರೆ ಹಾಕಿ ಹೇಗಾದರೂ ಕಟ್ಟಿಕೊಳ್ಳಲಿ ಎಂದು ಸರ್ಕಾರದವರು ಕೊಡತಕ್ಕ lumpsum grant ಕೊಟ್ಟು ಹಳ್ಳಿಯವರ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಬೇಕು. ಕಟ್ಟಡವಿಲ್ಲದೆ ಬಹಳ ಕಷ್ಟವಾಗಿದೆ ಮತ್ತು ಹಳ್ಳಿಗಳ ವಿಷಯದಲ್ಲಿ ತುಂಬ ತೊಂದರೆಯಾಗಿದೆ. ಆದುದರಿಂದ ಮೈಸೂರು ದೇಶಾದ್ಯಂತ ಶಾಲಾ ಕಟ್ಟಡಗಳ ವಿಷಯದಲ್ಲ ಉದಾರವಾಗಿ ಸಹಾಯ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು). - ಸ್ವಾಮಿ, ಸರ್ಕಾರದವರ ವಿದ್ಯಾಭ್ಯಾಸದ ಕಾನೂನನ್ನು ಸರಿಯಾದ ರೀತಿಯಲ್ಲಿ ಸುವ್ಯವಸ್ಥೆಗೊಳಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿ 1913ನೆ ಇಸವಿಯಲ್ಲಿ ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಜಾರಿಗೆ ತಂದಾಗ ಬಹಳ ಅನುಕೂಲವಾಗಿತ್ತು. ನಮ್ಮ ಹರಿಜನರು ಆಗ ಬಹಳ ಹಿಂದುಳಿದಿದ್ದರು. ಬಲಾತ್ಕಾರದ ವಿದ್ಯಾಭ್ಯಾಸದ ಕಾನೂನು ಜಾರಿಗೆ ಕೊಟ್ಟನಂತರ ನಮ್ಮ ಜನರ ಪ್ರಗತಿಗೆ ಅನುಕೂಲವಾಯಿತು. ಆ ಕಾನೂನನ್ನು ಪುನಃ ಜಾರಿಗೆ ಕೊಡಬೇಕು. ಅದಕ್ಕೆ ಎಷ್ಟು ದುಡ್ಡು ಖರ್ಚಾದರೂ ಸರಿಯೇ, ಬಲಾತ್ಕಾರ ವಿದ್ಯಾಭ್ಯಾಸ ಪದ್ಧತಿಯನ್ನು ಪುನಃ ಜಾರಿಗೆ ಕೊಟ್ಟಪಕ್ಷದಲ್ಲಿ, ಎಲ್ಲ ಜನಗಳಿಗೂ ಕೊಡುವುದಕ್ಕೆ ಸಾಧ್ಯವಿಲ್ಲದಪಕ್ಷದಲ್ಲಿ, ಹರಿಜನರಿಗಾದರೂ ಇದನ್ನು ಅನ್ವಯಿಸಲು ಒಂದು ಕಾನೂನನ್ನು ಜಾರಿಗೆ ಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಕೆಲವು ಕಡೆ ದೇವಸ್ಥಾನಗಳಲ್ಲಿ ಪಾಠಶಾಲೆಗಳನ್ನು ನಡೆಸುತ್ತಿದ್ದಾರೆ. ಅಲ್ಲಿ ಹರಿಜನ ಹುಡುಗರನ್ನು ಬಿಡುವುದಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ 10-12 ಸ್ಕೂಲುಗಳು ದೇವಸ್ಥಾನಗಳಲ್ಲಿ ನಡೆಯುತ್ತಿವೆ. ಅಲ್ಲೆಲ್ಲ ಹರಿಜನರನ್ನು ದೇವಸ್ಥಾನದೊಳಕ್ಕೆ ಬಿಡುವುದಿಲ್ಲ. ಉದಾಹರಣೆಗೆ ಎಷ್ಟು ಬೇಕಾದರೂ ಹೇಳುತ್ತೇನೆ. ತುಮಕೂರು ಜಿಲ್ಲೆ ಸಿರಾ ತಾಲ್ಲೂಕು ದ್ವಾರನಕುಂಟೆ ಗ್ರಾಮದಲ್ಲಿ ಹರಿಜನರ ಹುಡುಗರನ್ನು ಸೇರಿಸುವುದಿಲ್ಲ. ಆದುದರಿಂದ ಇಂಥ ಕಡೆಗಳಲ್ಲೆಲ್ಲ ಹರಿಜನ ಹುಡುಗರನ್ನು ಪಾಠಶಾಲೆಗಳಿಗೆ ಸೇರಿಸಬೇಕು ಎಂದು ಹೇಳುತ್ತೇನೆ. ಕೆಲವು ಕಡೆ ದೇವಸ್ಥಾನಗಳಲ್ಲಿ ಪಾಠಶಾಲೆಗಳು ನಡೆಯುವುದನ್ನು ತಪ್ಪಿಸಿ ಎಲ್ಲ ಜನಾಂಗಗಳಿಗೂ ಅನುಕೂಲವಾಗುವಂತೆ ಒಂದು ಗುಡಿಸಲು ಕಟ್ಟಿಸಿ ಅಲ್ಲಿ ನಡೆಸಿ ಅಥವಾ ಒಂದು ಮರದ ಕೆಳಗೆ ಬೇಕಾದರೂ ನಡೆಸಿ. ಅದಕ್ಕೆ ಬೇಡವೆನ್ನುವುದಿಲ್ಲ. ಹೀಗೆ ನಮ್ಮಲ್ಲಿ ದೇವಸ್ಥಾನಗಳಲ್ಲಿ ಶಾಲೆಗಳನ್ನು ನಡೆಸುವುದರಿಂದ ಇರುವ ತೊಂದರೆಗಳು, ಮತ್ತು ಇನ್ನೂ ಕೆಲವು ಕಡೆ ಇರುವ ಅಡ್ಡಿ ಆತಂಕಗಳು, ಇವುಗಳನ್ನೆಲ್ಲ ತಪ್ಪಿಸಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಸಿ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಪಾವಗಡ ತಾಲ್ಲೂಕು, ವೈ. ಎನ್. ಹೊಸಕೋಟೆಯಲ್ಲಿ ಮುನಿಸಿಪಾಲಿಟಿಯವರು ಒಂದು ಹೈಸ್ಕೂಲನ್ನು ತೆರೆದಿದ್ದಾರೆ. ಅದಕ್ಕೆ ಸರ್ಕಾರದವರು ಯಾವ ವಿಧವಾದ ಸಹಾಯವನ್ನೂ ಕೊಟ್ಟಿಲ್ಲ. ಒಂದು ಸಾವಿರ ರೂಪಾಯಿಗಳು ಮಾತ್ರ ಕೊಟ್ಟಿದ್ದಾರೆ. ಅಷ್ಟು ಮಾತ್ರ ಏನೇನೂ ಸಾಲದು. ಈ ಹೈಸ್ಕೂಲನ್ನು ಸರ್ಕಾರದವರೇ ವಹಿಸಿಕೊಂಡು ನಡೆಸಬೇಕೆಂದು ಅನೇಕಸಾರಿ ಮನವಿ ಮಾಡಿಕೊಂಡೆ. ಇದುವರೆಗೂ ಮಾಡಿಲ್ಲ. ಈ ಸಲವಾದರೂ ಸಹಾಯ ಮಾಡಬೇಕು. ಆ ಸ್ಥಳಕ್ಕೆ 20 ಮೈಲಿ ಫಾಸಲೆಯಲ್ಲಿ ಎಲ್ಲಿಯೂ ಹೈಸ್ಕೂಲು ಇಲ್ಲ. ಇಲ್ಲಿರುವ ಸ್ಕೂಲು ಬಹಳ ಉಪಯುಕ್ತವಾಗಿದೆ. ಇದು ಒಂದು ಮೂಲೆಯಲ್ಲಿದೆ. ಅಂಥ ಕಡೆ ಒಂದು ಸರ್ಕಾರಿ ಹೈಸ್ಕೂಲು ಇದ್ದರೆ ಎಲ್ಲ ಜನಗಳಿಗೂ ಬಹಳ ಅನುಕೂಲವಾಗುತ್ತದೆಂದು ಸಲಹೆ ಮಾಡುತ್ತೇನೆ.

ಪಾವಗಡ ತಾಲ್ಲೂಕಿನಲ್ಲಿ ಅರಸೀಕೆರೆ ಮತ್ತು ಗುಂಡಲಹಳ್ಳಿ ಗ್ರಾಮಗಳಿಗೆ ಎರಡು ಮಿಡಲ್ ಸ್ಕೂಲುಗಳು ಬೇಕು. ಗ್ರಾಮಸ್ಥರು ಸ್ಕೂಲಿಗೆ ಕಟ್ಟಡ ಮತ್ತು ಉಪಾಧ್ಯಾಯರ ವಾಸಕ್ಕೆ ಮನೆಗಳನ್ನೂ ಕೊಡುವುದಕ್ಕೆ ತಯಾರಾಗಿದ್ದಾರೆ. ಇಷ್ಟೆಲ್ಲ ಕೊಡುತ್ತೇವೆಂದರೂ ಕೂಡ ಸರ್ಕಾರದವರು ಇಲ್ಲಿ ಮಾಧ್ಯಮಿಕ ಶಾಲೆಗಳನ್ನು ಕೊಟ್ಟಿಲ್ಲ. ಅವರಿಗೆ ಏನು ಕಷ್ಟವಿದೆಯೋ ನನಗೆ ಅರ್ಥವಾಗುತ್ತಿಲ್ಲ. ಈ ಗ್ರಾಮಗಳಿಗೆ ಮಾಧ್ಯಮಿಕ ಶಾಲೆಗಳನ್ನು ಮಂಜೂರು ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಹರಿಜನ ವಿದ್ಯಾರ್ಥಿಗಳಿಗೆ ಹಿಂದೆ ಕೊಡುತ್ತಿದ್ದ ಹಾಗೆ ಪಠ್ಯ ಪುಸ್ತಕಗಳನ್ನು ಮುಫತ್ತಾಗಿ ಕೊಡುವ ಹಾಗೆ ಮಾಡಬೇಕು. ಹಿಂದೆ ನಾವು ಓದುತ್ತಿದ್ದಾಗ 1918ನೆ ಇಸವಿಯಲ್ಲ 7ರಿಂದ 12 ವರ್ಷ ವಯಸ್ಸಿನ ಹುಡುಗರೆಲ್ಲ ಶಾಲೆಗೆ ಹೋಗಬೇಕಾಗಿತ್ತು. ಆಗ ವಿದ್ಯಾರ್ಥಿಗಳಿಗೆ ಪುಸ್ತಕ, ಸ್ಲೇಟು, ಬಟ್ಟೆ ಮತ್ತು ಹೆಣ್ಣು ಹುಡುಗಿಯರಿಗೆ ಸೀರೆ ಕೊಡುತ್ತಿದ್ದರು. ಆ ಸೌಕರ್ಯವನ್ನು ಪುನಃ ಸರ್ಕಾರದವರು ಒದಗಿಸಿ ಕೊಡಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಸಂಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ಉಪಾಧ್ಯಾಯರುಗಳಿಗೆ ಮನೆಗಳಿಲ್ಲ. ಅನೇಕರನ್ನು ಊರಿಂದೂರಿಗೆ ವರ್ಗಮಾಡುತ್ತಾರೆ. ಹಾಗೆ ವರ್ಗಮಾಡಿದರೆ ಅವರಿಗೆ ಕೆಲವು ಕಡೆ ಮನೆಯನ್ನು ಕೊಡುತ್ತಿಲ್ಲ. ಭಾವಿಯಿಂದ ನೀರು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ. ಉಪಾಧ್ಯಾಯರುಗಳು ಇಂಥ ಕಷ್ಟಕ್ಕೆ ಒಳಗಾಗದಂತೆ ಮಾಡಬೇಕು. ಇದಕ್ಕಾಗಿ ಮಂತ್ರಿಗಳು ದೊಡ್ಡ ಮನಸ್ಸುಮಾಡಿ ಹಳ್ಳಿಗಳಲ್ಲಿ ಉಪಾಧ್ಯಾಯರುಗಳಿಗೆ ಮನೆಗಳು ಸಿಕ್ಕುವಂತೆ ಒಂದು ವ್ಯವಸ್ಥೆಯನ್ನು ಮಾಡಿ ನಮ್ಮ ದೇಶದ ಹದಿನೇಳು ಸಾವಿರ ಹಳ್ಳಿಗಳಲ್ಲಿರುವ ರೈತರ ಮಕ್ಕಳನ್ನೂ ಉದ್ಧಾರ ಮಾಡಬೇಕೆಂದು ಹೇಳುತ್ತೇನೆ. ಇದನ್ನು ಮಾಡದೆ ಇದ್ದರೆ ಯಾವ ರಾಜ್ಯಕ್ಕೂ ಒಳ್ಳೆಯದಲ್ಲ. ಪ್ರಜಾರಾಜ್ಯ, ಪ್ರಜಾಸತ್ತಾತ್ಮಕ ರಾಜ್ಯವೆಂದು ಬಾಯಲ್ಲಿ ಹೇಳಿದರೆ ಮಾತ್ರ ಸಾಲದು. ಅದನ್ನು ಕಾರ್ಯರೂಪಕ್ಕೆ ತರಬೇಕು. ಹಿಂದಿನ ಸರ್ಕಾರದವರು ಅಲ್ಪ ದುಡ್ಡನ್ನು ವಿದ್ಯಾಭ್ಯಾಸಕ್ಕೆ ಖರ್ಚು

ಮಾಡುತ್ತಿದ್ದರು. ಈಗ ಹೆಚ್ಚಾಗಿ ಖರ್ಚು ಮಾಡುತ್ತಿದ್ದಾರೆ. ಅದಕ್ಕೆ ಈಗಿನ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಸರ್ಕಾರದವರು ತಾವು ಮಾಡಿದ ಆರ್ಡರ್ ಮೇಲೆ ಕೆಲಸ ಸರಿಯಾಗಿ ನಡೆಯುತ್ತದೆಯೇ ಇಲ್ಲವೇ ಎಂಬುದನ್ನು guage ಮಾಡಬೇಕು. ಮತ್ತು ಸರಿಯಾಗಿ ಕಾರ್ಯಕ್ರಮ ತೆಗೆದುಕೊಳ್ಳುವಂತೆ ಮಾಡಬೇಕು ಎಂದು ಹೇಳಿ ಅಷ್ಟಕ್ಕೆ ನಿಲ್ಲಿಸುತ್ತೇನೆ.

The House adjourned for Lunch at Three of the Clock and reassembled at Thirty Minutes past Three of the Clock.

[MR. DEPUTY SPEAKER in the Chair]

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ ವಿದ್ಯಾಭ್ಯಾಸದ ಈ ಡಿಮ್ಯಾಂಡನ್ನು ವಿರೋಧಿಸಿ ಸರ್ಕಾರದ ಆಡಳಿತ ನೀತಿಯನ್ನು ಪ್ರಸ್ತಾಪಿಸಲು ನಾನು ಇಷ್ಟಪಡುತ್ತೇನೆ. ವಿದ್ಯಾಭ್ಯಾಸದ ಅವಶ್ಯಕತೆ ದೇಶದಲ್ಲಿ ಸರ್ವರಿಗೂ ಇದೆ. ಇದನ್ನು ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಗೂ ಒದಗಿಸಬೇಕೆಂದು ಇಪ್ಪತ್ತು ವರ್ಷಗಳಿಂದಲೂ ಈ ಸಭೆಯಲ್ಲಿ ಒತ್ತಾಯ ಮಾಡುತ್ತಿದ್ದೇವೆ. ಇದನ್ನು ಹಿಂದಿನ ಸರ್ಕಾರದವರು ಮನಗೊಂಡು ಸ್ವಲ್ಪಮಟ್ಟಿಗೆ ಕಾರ್ಯರೂಪಕ್ಕೆ ತಂದರು. ಕಂಪಲ್ಸರಿ ವಿದ್ಯಾಭ್ಯಾಸವನ್ನು ಸುಮಾರು 36 ತಾಲ್ಲೂಕುಗಳಲ್ಲಿ ವರ್ಷಕ್ಕೆ ಒಂಭತ್ತು ತಾಲ್ಲೂಕುಗಳಂತೆ ಜಾರಿಗೆ ಕೊಟ್ಟರು. ವರ್ಷ ವರ್ಷಕ್ಕೆ ನೂರು ಸ್ಕೂಲುಗಳಂತೆ ನಾನೂರು ಪ್ರೈಮರಿ ಸ್ಕೂಲುಗಳನ್ನು ಕೊಡುತ್ತಾ ಬಂದರು. ಆದರೆ ಈಗ ಪ್ರಜಾಪ್ರಭುತ್ವ ಬಂದಿದೆ. ಅದು ಬಂದಮೇಲೆ ಜನರಿಗೆ ವಯಸ್ಕರ ಮತದಾನದ ಹಕ್ಕು ಬಂತು. ಸ್ವಾತಂತ್ರ್ಯವನ್ನು ನಾವು ಅನುಭವಿಸಬೇಕಾದರೆ ಮತ್ತು ದೇಶದ ಇಲಾಖೆಯಲ್ಲಿ ಪ್ರತಿಯೊಬ್ಬರಿಗೂ ಕೂಡ ಆಡಳಿತ ನಡೆಸತಕ್ಕಂಥ ಒಂದು ಶಕ್ತಿ ಸರಿಯಾಗಿ ಬರಬೇಕಾದರೆ ಅಕ್ಷರಾಭ್ಯಾಸ, ಅದರ ಜ್ಞಾನ ಬಹಳಮಟ್ಟಿಗೆ ಅವಶ್ಯಕವಾದುದು. ಇದನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ನಮ್ಮ ರಾಜ್ಯಾಂಗದಲ್ಲೂ ಕೂಡ ವಿಧಾಯಕವಾಗಿದೆ; 14 ವರ್ಷಗಳವರೆಗೆ ಪ್ರತಿಯೊಬ್ಬ ಪ್ರಜೆಗೂ ಕೂಡ ವಿದ್ಯಾಭ್ಯಾಸ ಮಾಡಿಸಬೇಕೆಂದು ಹೇಳಿದೆ. ಆದರೆ ಇದಕ್ಕೆ ಇಲ್ಲಿಯವರೆಗೂ ಸಾಕಾದಷ್ಟು ಪ್ರೋತ್ಸಾಹವಿಲ್ಲ. ವರ್ಷೇ ವರ್ಷೇ ಸಂಖ್ಯೆ ಕಡಮೆಯಾಗುತ್ತಾ ಇದೆ. ಈ ವರ್ಷ ಐದು ಕೋಟಿ ರೂಪಾಯಿಗಳವರೆಗೆ ಇಷ್ಟೊಂದು ಹಣ ಒದಗಿಸಿದ್ದರೂ ಪ್ರಜೆಗಳಿಗೆ ಉಪಯೋಗವಾಗುವುದು ಬಹಳ ಕಡಮೆ. ಯಾರಿಗೆ ವಿದ್ಯಾಭ್ಯಾಸ ಒದಗುತ್ತಿದೆಯೋ ಅವರಿಗೇ ಹೆಚ್ಚು ಅವಕಾಶವಾಗುತ್ತಿದೆಯೇ ವಿನಾ ಉಳಿದವರಿಗಿಲ್ಲ. ನಮ್ಮ ದೇಶದಲ್ಲಿ ಸ್ಕೂಲುಗಳಿಗೆ ಹೋಗುವ ಜನ 14 ಲಕ್ಷ 33 ಸಾವಿರ ಇದ್ದರೂ ಎಂಟು ಲಕ್ಷ ಜನರು ಮಾತ್ರ ಹೋಗುತ್ತಿದ್ದಾರೆ; 16,634 ಗ್ರಾಮಗಳಲ್ಲಿ ಆರೂವರೆ ಸಾವಿರ ಗ್ರಾಮಗಳಿಗೆ ಮಾತ್ರ ಸ್ಕೂಲುಗಳಿವೆ, ಇನ್ನು ಹತ್ತು ಸಾವಿರ ಗ್ರಾಮಗಳಿಗೆ ಸ್ಕೂಲೇ ಇಲ್ಲ. ಇನ್ನೂರು ಪ್ರಜೆಗಳಿಗಿಂತ ಕಡಮೆಯಿರುವ ಗ್ರಾಮಗಳನ್ನು ಬಿಟ್ಟು ಅದಕ್ಕೆ ಮೇಲ್ಪಟ್ಟು ಜನಸಂಖ್ಯೆಯಿರುವ ಮೂರು ಸಾವಿರ ಗ್ರಾಮಗಳಿಗಾದರೂ ಸ್ಕೂಲು ಕೊಡಿ, ಒಂದೇಸಾರಿ ನೀವು ಖರ್ಚುಮಾಡುವ ಹಣದಲ್ಲಿ 15 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಈ ಮೂರು ಸಾವಿರ ಗ್ರಾಮಗಳಿಗೆ ಈ ವರ್ಷ ಮಂಜೂರು ಮಾಡಬಹುದು. ಐದು ಕೋಟಿ ರೂಪಾಯಿಗಳಲ್ಲಿ ಹದಿನೈದು ಲಕ್ಷ ಕೊಟ್ಟರೆ ಈ ಮೂರು ಸಾವಿರ ಗ್ರಾಮಗಳಿಗೆ ಸ್ಕೂಲು ಕೊಡಬಹುದು. ಹಾಗೆ ಕೊಟ್ಟರೆ ಕಡ್ಡಾಯವಾಗಿ ಪ್ರತಿಯೊಬ್ಬ ಪ್ರಜೆಯೂ ಸ್ಕೂಲಿಗೆ ಹೋಗುವುದಕ್ಕೆ ಅವಕಾಶವಾಗುತ್ತದೆ. ಪ್ರೈಮರಿ ಸ್ಕೂಲುಗಳನ್ನು ಮೂರು ಸಾವಿರ ಹೆಚ್ಚಿಸಿದರೆ ಮುಂದೆ ಪ್ರಜೆಗಳಿಗೆ ಒಂದೆರಡು ಮೈಲಿಗಳಲ್ಲೇ ಸ್ಕೂಲಿನ ಅನುಕೂಲ ದೊರೆಯುತ್ತದೆ. ಇಷ್ಟು ಮಾತ್ರ ಮಾಡಿ ಎಂದು ಕಡ್ಡಾಯವಾಗಿ ಕೇಳುತ್ತೇನೆ. ಇಷ್ಟು ಮಾಡಬೇಕಾದರೆ 15-20 ಲಕ್ಷ ರೂಪಾಯಿಗಳು ಸಾಕು. ಅನೇಕ ಗ್ರಾಮಗಳಲ್ಲಿ ಸ್ಕೂಲು ಕಟ್ಟಡ ಕಟ್ಟಿಕೊಟ್ಟಿದ್ದಾರೆ. ಉಪಾಧ್ಯಾಯರಿಗೆ ವಾಸದ ಮನೆ ಕಟ್ಟಿದ್ದಾರೆ; ಆದರೂ ಅಲ್ಲಿಗೆ ಸ್ಕೂಲೇ ಕೊಟ್ಟಿಲ್ಲ. ಬೊಮ್ಮೇನಹಳ್ಳಿ ಗ್ರಾಮದಲ್ಲಿ ಸುಮಾರು ಎಂಟು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಸ್ಕೂಲನ್ನೂ ಮತ್ತು ಸುಮಾರು ಆರು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಉಪಾಧ್ಯಾಯರಿಗೆ ವಾಸದ ಮನೆಯನ್ನೂ ಕಟ್ಟಿಕೊಟ್ಟಿದ್ದರೂ ಸಹ ಅಲ್ಲಿಗೆ ಸ್ಕೂಲೇ ಕೊಟ್ಟಿಲ್ಲ. ಸರ್ಕಾರದವರೇ ಸ್ಕೂಲುಗಳನ್ನು ಕೊಟ್ಟು ಪ್ರತಿಯೊಬ್ಬರಿಗೂ ಕಡ್ಡಾಯವಾಗಿ ವಿದ್ಯಾಭ್ಯಾಸ ನೀಡಬೇಕಾದ ಕರ್ತವ್ಯದ ಜವಾಬ್ದಾರಿಯನ್ನು ಹೊತ್ತಿದ್ದರೂ, ಪ್ರಜಾ ಪ್ರಭುತ್ವದ ನೀತಿಯು ಅದೇ ಆಗಿದ್ದರೂ ಆ ರೀತಿ ಮಾಡುವುದೇ ಕಷ್ಟವಾಗಿದೆ. ಆದ್ದರಿಂದ ಎಷ್ಟೇ ಕಷ್ಟವಾದರೂ ಸರಿ. ನಾನು ಹೇಳಿದಂತೆ ಮೂರು ಸಾವಿರ ಗ್ರಾಮಗಳಿಗೆ ಸ್ಕೂಲನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಉಪಾಧ್ಯಾಯರಿಗೆ ಟ್ರೈನಿಂಗ್ ಆಗಿಲ್ಲವೆಂದು ಹೇಳುತ್ತಾರೆ. ಇಪ್ಪತ್ತಾರು ಸಾವಿರ ಜನರಿಗಿಂತ ಹೆಚ್ಚು ಉಪಾಧ್ಯಾಯರಿದ್ದಾರೆ, ಅದರಲ್ಲಿ ಹತ್ತು ಸಾವಿರಕ್ಕೆ ಮೇಲ್ಪಟ್ಟ ಮಂದಿಗೆ ಟ್ರೈನಿಂಗ್ ಆಗಿದೆ, ಉಳಿದವರಿಗಿಲ್ಲ. ಇನ್ನೊಂದು ವಿಷಯ. ಕ್ವಾಲಿಟಿ ಮುಖ್ಯ, ಕ್ವಾಂಟಿಟಿ ಮುಖ್ಯವಲ್ಲ ಎಂದು ಈ ಸರ್ಕಾರ ಹೇಳುತ್ತಾರೆ. ಪ್ರಾಥಮಿಕಶಾಲೆ ಹಂತದವರೆಗೆ ಕ್ವಾಲಿಟಿ ಮುಖ್ಯವಲ್ಲ, ವಿದ್ಯದ ಗಂಧವೇ ಇಲ್ಲದಿರುವವರಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಬೇಕು, ಬಿ.ಎ. ಆದವನ ಕೈಲೇ ವಿದ್ಯಾಭ್ಯಾಸ ಮಾಡಿಸಬೇಕೆಂದು ಹೇಳಿದರೆ ಹೇಗೆ? ಮೊದಲು ಓನಾಮ ಕಲಿಸಿ, ಅವನ ಹಕ್ಕನ್ನು ಅವನಿಗೆ ತೋರಿಸಿ. ದೇಶದಲ್ಲಿರುವ ಪ್ರತಿಯೊಬ್ಬ ಪ್ರಜೆಯೂ ಕೂಡ ಸಾಕಾದಷ್ಟು ತಿಳುವಳಿಕೆಯುಳ್ಳವನಾಗಬೇಕು. ಪ್ರಜಾ ಪ್ರಭುತ್ವದ ಆಳ್ವಿಕೆಯಲ್ಲಿ ತನ್ನ ದೇಶದಲ್ಲಿ ಪ್ರತಿಯೊಬ್ಬನೂ ತನ್ನ ಹಕ್ಕನ್ನು ತಿಳಿದುಕೊಂಡು ಅವನ್ನು ಚಲಾಯಿಸಿ ದೇಶೋದ್ಧಾರ ಮಾಡಲು ಅವಕಾಶ ಕೊಡಬೇಕು.

ನಮ್ಮ ತುರುವೇಕೆರೆ ತಾಲ್ಲೂಕಿನಲ್ಲಿ ರೇಂಜ್ ಆಫೀಸಿಲ್ಲ. 120 ಮೈಲಿ ಪ್ರದೇಶವಿರುವ ಅಲ್ಲಿಗೆ ಅದು ಅವಶ್ಯಕ ಎಂದು ಹೇಳಿದಮೇಲೆ ಇದೇ ಸಭೆಯಲ್ಲಿ ಈ ವರ್ಷ ಮಂಜೂರು ಮಾಡುತ್ತೇವೆಂದು ವಾಗ್ದಾನ ಮಾಡಿದ್ದರು. ಆದರೂ ಆ ತಾಲ್ಲೂಕಿಗೆ ಇಲ್ಲಿಯವರೆಗೂ ಒಂದು ಸ್ಕೂಲ್ ರೇಂಜ್ ಆಗಿಲ್ಲ. ಕೆಲವು ತಾಲ್ಲೂಕುಗಳಿಗೆ ಎರಡು ರೇಂಜುಗಳನ್ನು ಕೊಟ್ಟಿದ್ದರೂ ಈ ತಾಲ್ಲೂಕಿಗೆ ಒಂದು ರೇಂಜೂ ಕೊಟ್ಟಿಲ್ಲ. ಇದರಿಂದ ತಾಲ್ಲೂಕಿನವರಿಗೆ ತೊಂದರೆಯಾಗಿದೆ. ಇದನ್ನು ಜಾಗ್ರತ ಮಂಜೂರು ಮಾಡಬೇಕು.

ಇನ್ನೊಂದು, ಆರು ವರ್ಷಗಳಾದಮೇಲೆ ಮಕ್ಕಳಿಗೆ ಸಾಮಾನ್ಯವಾಗಿ ಎಲ್ಲಾ ಕಡೆಯೂ ವಿದ್ಯಾಭ್ಯಾಸ ಮಾಡಲು ಅವಕಾಶವಿದೆ. ಅದಕ್ಕೆ ಮುಂಚೆ ಗ್ರಾಮ

(ಶ್ರೀ ಬಿ. ಹುಚ್ಚೇಗೌಡ.)

ಗಳಲ್ಲಿ ಅವಕಾಶವಿಲ್ಲ. ಪಟ್ಟಣಗಳಲ್ಲಾದರೆ ಬೇಕಾದಷ್ಟು ಅನುಕೂಲವಿದೆ. ಗ್ರಾಮಗಳು ಹಿಂದುಳಿದಿವೆ. ಮುಂದಿನ ಭಾವಿ ಜನಾಂಗ ಉತ್ತಮವಾಗಬೇಕಾದರೆ ಅವರಿಗೆ ಸರಿಯಾದ ವ್ಯವಸ್ಥೆಯಾಗಿ ಅವರ ಆರೋಗ್ಯ ಹೆಚ್ಚಬೇಕಾದದ್ದೂ ಅವಶ್ಯಕ. ಆದ್ದರಿಂದ ಮೂರರಿಂದ ಆರು ವರ್ಷಗಳಲ್ಲಿರುವ ಮಕ್ಕಳಿಗೆ ಎಲ್ಲ ಊರುಗಳಲ್ಲೂ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಬೇಕು. ಸ್ಥಳದವರಿಂದಲೇ ಸಹಾಯ ಪಡೆದುಕೊಂಡಾದರೂ ವಿದ್ಯಾಭ್ಯಾಸ ನೀಡಬೇಕಾದದ್ದು ಅಗತ್ಯ. ಮೇಲ್ಮಟ್ಟದ ವಿದ್ಯಾಭ್ಯಾಸಕ್ಕಿಂತ ಚಿಕ್ಕಮಕ್ಕಳ ವಿದ್ಯಾಭ್ಯಾಸಕ್ಕೆ ಸಾಮಾನ್ಯವಾಗಿ ಬಡವರು, ಹರಿಜನರು, ಇಂಥವರ ಮಕ್ಕಳ ವಿದ್ಯಾಭ್ಯಾಸಕ್ಕೆ ಗಮನಕೊಟ್ಟು ಚಿಕ್ಕ ವಯಸ್ಸಿನಲ್ಲೇ ಅವರಿಗೆ ಸಾಕಾದಷ್ಟು ವಿದ್ಯೆ ಸರಿಯಾಗಿ ಬರುವಂತೆ ಮಾಡಲು ತಕ್ಕ ಪ್ರಯತ್ನ ಮಾಡಬೇಕು.

ಶ್ರೀ ಬಿ. ಸಿ. ನಂಜುಂಡಯ್ಯ (ಕೋರ).—ಸ್ವಾಮಿ, ಗ್ರಾಮಾಂತರ ವಿದ್ಯಾಭ್ಯಾಸದ ವಿಚಾರದಲ್ಲಿ ಕೆಲವು ಮಾತನ್ನು ಹೇಳುತ್ತೇನೆ. ನಿನ್ನೆ ತಾನೆ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟನ್ನು ತುಮಕೂರು ಟೌನಿನಲ್ಲಿ ಹೊಸದಾಗಿ ಏರ್ಪಾಡು ಮಾಡುತ್ತೇವೆಂದು ಮಾನ್ಯ ವಿದ್ಯಾ ಮಂತ್ರಿಗಳು ಹೇಳಿದರು. ಈ ವರ್ಷವೇ ಅದನ್ನು ಸ್ಥಾಪಿಸಲು ತುಮಕೂರಿನಲ್ಲಿ ಅನುಕೂಲವಿದೆ. ಡಿಸ್ಟ್ರಿಕ್ಟ್ ಬೋರ್ಡ್ ಆಫೀಸು ಕಾಂಪೌಂಡಿನಲ್ಲಿ ಫಸ್ಟ್‌ಗ್ರೇಡ್ ಕಾಲೇಜಿರುವುದು ಅದಕ್ಕೆ ಖಾಯಮ್ಮಾದ ಕಟ್ಟಡವಾದಾಗ ಅಲ್ಲಿಗೆ ಹೋಗಲಿರುವುದರಿಂದ ಈಗ ಆ ಕಾಲೇಜಿರುವ ಕಟ್ಟಡ ರಿಲೀಸ್ ಆಗುತ್ತದೆ. ಅಲ್ಲಿ ಬೇಕಾದರೂ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟನ್ನು ನಡೆಸಬಹುದು. ಅಥವಾ ಫಾರೆಸ್ಟ್ ಇಲಾಖೆ ವುಡ್ ಫ್ಯಾಕ್ಟರಿಯನ್ನು ತೆರೆದಿದೆ. ಅಲ್ಲಿ ನಾಲ್ಕೈದು ಷೆಡ್ ಇವೆ, ಆದರೆ ಆ ಫ್ಯಾಕ್ಟರಿಯಲ್ಲಿ ಮರದ ಸರಬರಾಯಿ ಸಾಕಷ್ಟಾಗದೆ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಏಕೆಂದರೆ ಅಲ್ಲಿಗೆ ಶಿವಮೊಗ್ಗ, ಮೈಸೂರು ಕಡೆಗಳಿಂದ ಮರ ಬರಬೇಕು, ಮರ ಕಟ್ ಸೈಜಿಗೆ ಬರುವುದು ಸಾಲದೆ ಕೆಲಸ ಸಾಕಷ್ಟಿಲ್ಲವಾಗಿದೆ. ಆ ದೃಷ್ಟಿಯಿಂದ ಫಾರೆಸ್ಟ್ ಇಲಾಖೆಯವರು ಈ ವುಡ್ ಫ್ಯಾಕ್ಟರಿಯನ್ನು ಶಿವಮೊಗ್ಗಾಕ್ಕೆ ಬದಲಾಯಿಸಬೇಕೆಂದಿರುವುದಾಗಿ ತಿಳಿದುಬಂದಿದೆ. ಇದಕ್ಕಾಗಿ ಸುಮಾರು ಹನ್ನೆರಡು ಎಕರೆ ಭೂಮಿ ಅಕ್ವೈರಾಗಿದೆ. ಅಲ್ಲಿ ಬೇಕಾದರೂ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್ ಸ್ಥಾಪಿಸಬಹುದು ; ಹಾಗೆ ಮಾಡುವುದಕ್ಕಾಗದಿದ್ದರೆ ಲೇಬರ್ ಮಿನಿಸ್ಟ್ರಿ ಇಂಡಿಯಾ ಸರ್ಕಾರದ ಪರವಾಗಿ ನಡೆಸುತ್ತಿರುವ ಮೆಕನೈಸೇಷನ್ ಸ್ಕೂಲು ರೇಸ್‌ಕೋರ್ಸ್ ಹತ್ತಿರ ಇರುವುದನ್ನು ಆದರೂ ಅಲ್ಲಿಂದ ಬದಲಾಯಿಸಿ ತುಮಕೂರಿನಲ್ಲಿ ಸ್ಥಾಪಿಸಿದರೆ ಆದರಿಂದ ಸಾಕಷ್ಟು ಉಪಯೋಗವಾಗುತ್ತದೆ. ಇದಕ್ಕೆ ಸರ್ಕಾರ ಗಮನ ಕೊಡಬೇಕು.

ಇನ್ನೊಂದು ವಿಷಯ, ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಕಟ್ಟಡಗಳ ರಿಪೇರಿ ಸಕಾಲದಲ್ಲಿ ಆಗುತ್ತಿಲ್ಲ. ಉದಾಹರಣೆಗೆ ತುಮಕೂರಿನಲ್ಲಿ ಮಾರ್ಕೆಟ್ ಹತ್ತಿರ ಗರ್ಲ್ಸ್ ಮಿಡ್ಲ್‌ಸ್ಕೂಲಿತ್ತು. ಅಲ್ಲಿ ಏನೋ ಹೆದರಿಕೆಯಿದೆಯೆಂದು ಅದನ್ನು ಅಲ್ಲಿಂದ ತೆಗೆದು ಬೇರೆ ಕಡೆಗೆ ಸಾಗಿಸಿ ಗಂಡು ಹುಡುಗರ ಮಿಡ್ಲ್‌ಸ್ಕೂಲು ಕಟ್ಟಡದಲ್ಲಿ ನಡೆಸುತ್ತಿದ್ದಾರೆ. ಆ ಕಟ್ಟಡದಲ್ಲಿ ಹೆಣ್ಣುಮಕ್ಕಳಿಗೆ ಬೆಳಿಗ್ಗೆ ಏಳೂವರೆ ಗಂಟೆಯಿಂದ ಹನ್ನೆರಡು ಗಂಟೆಯವರಿಗೆ ಸ್ಕೂಲು ಮಾಡಿ ಆಮೇಲೆ ಗಂಡು ಹುಡುಗರಿಗೆ ಪಾಠ ಹೇಳುತ್ತಾರೆ. ಆದರೆ ಅಲ್ಲೇನೂ ಭಯಕ್ಕೆ ಆಸ್ಪದವಿಲ್ಲ, ಕೆಲವು ಮೀಟಿಂಗುಗಳು ನಡೆದಿವೆ. ಮೊನ್ನೆ ತೆಪ್ಪೋತ್ಸವವಾದಾಗ ಅದೇ ಮಾರ್ಕೆಟ್ ಹತ್ತಿರವಿರುವ ಕಟ್ಟಡದಲ್ಲಿ ಅನ್ನಶಾಂತಿ ಬೇರೆ ನಡೆಯಿತು. ಇಷ್ಟೆಲ್ಲಾ ಆದರೂ ಆ ಕಟ್ಟಡವನ್ನೇಕೆ ಉಪಯೋಗಿಸದೆ ಬಿಟ್ಟಿರೋ ತಿಳಿಯದು. ಅಲ್ಲದೆ ಆ ಕಟ್ಟಡದ ಪಕ್ಕದಲ್ಲೇ ಉರ್ದು ಸ್ಕೂಲಿದೆ. ಅಲ್ಲಿ ಕುಸ್ತಿ ಮಾಡಲು ಜಾಗ ಸಹ ಕೊಟ್ಟಿದ್ದಾರೆ, ಐವತ್ತು ರೂಪಾಯಿಗಳ ಬಾಡಿಗೆ ಬರುತ್ತಿದೆ. ಘೋಷಾ ಗರ್ಲ್ಸ್‌ಸ್ಕೂಲು ಪಕ್ಕದಲ್ಲೇ ಇದೆ, ಆ ಗರ್ಲ್ಸ್‌ಸ್ಕೂಲು ಪಕ್ಕದಲ್ಲೇ ಕುಸ್ತಿ ನಡೆಯುವುದಕ್ಕೆ ಅವಕಾಶ ಮಾಡಿರುವುದರಿಂದ ಅಲ್ಲಿರುವ ಗರ್ಲ್ಸ್ ಸ್ಕೂಲನ್ನು ಬೇರೆ ಕಡೆಗೆ ಬದಲಾಯಿಸಬೇಕು.

ಇನ್ನು ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಪಾರ್ಟ್‌ಟೈಂ ಹಿಂದಿ ಉಪಾಧ್ಯಾಯರ ವಿಷಯದಲ್ಲಿ ಒಂದೆರಡು ವಿಚಾರ ಗಮನಕ್ಕೆ ತರುತ್ತೇನೆ. ಅವರಿಗೆ ಹದಿನೈದು ರೂಪಾಯಿಗಳ ಅಲೋಯನ್ಸ್ ಇದೆ. ಅನೇಕರು ಎರಡು ಮೂರು ವರ್ಷದಿಂದ ಹಂಗಾಮಿಯಾಗಿ ಈ ಕೆಲಸ ಮಾಡುತ್ತಿದ್ದಾರೆ. ಅವರು ಎಸ್.ಎಸ್.ಎಲ್.ಸಿ. ಪಾಸು ಮಾಡಿದ್ದಾರೆ. ಅವರಿಗೆ ಹಿಂದಿ ಪಾಠವಲ್ಲದೆ ಬೇರೆ ಪಾಠ ಹೇಳುವುದಕ್ಕೂ ಶಕ್ತಿಯಿದೆ. ಅಂಥವರಿಗೆ ಖಾಯಂ ಕೆಲಸವನ್ನೇಕೆ ಕೊಡಬಾರದು ? ಅದಕ್ಕೆ ಕಷ್ಟವೇನೋ ಅರ್ಥವಾಗುವುದಿಲ್ಲ. ಹಿಂದಿಭಾಷೆ ರಾಷ್ಟ್ರಭಾಷೆಯಾಗಬೇಕು, ಅದಕ್ಕೆ ಉತ್ತೇಜನ ಕೊಡುತ್ತೇವೆ ಎಂದು ಹೇಳುವಾಗ ಆ ಸಂದರ್ಭದಲ್ಲಿ ಕೆಲಸ ಮಾಡುವವರಿಗೆ ಸಾಕಷ್ಟು ಗ್ಯಾರಂಟಿಯಿಲ್ಲದಿದ್ದರೆ ಹೇಗೆ ? ಹಿಂದೆ ಸರ್ಕಾರೀ ಆರ್ಡರು ಮಾಡಿ ಮೂರು ವರ್ಷ ಕೆಲಸ ಮಾಡಿದವರನ್ನು ಕನ್‌ಫರ್ಮ್ ಮಾಡುತ್ತಿದ್ದರು. ಅದನ್ನು ಈಗಲೂ ಮುಂದುವರೆಸುವುದಕ್ಕೇನೂ ತೊಂದರೆಯಿಲ್ಲ. ಅದನ್ನು ಮುಂದುವರೆಸಿ ಮೂರು ವರ್ಷ ಕೆಲಸ ಮಾಡುವ ಹಿಂದಿ ಉಪಾಧ್ಯಾಯರಿಗೆ ಬೇರೆ ಪಾಠ ಹೇಳಲು ಅವಕಾಶಕೊಟ್ಟು ಅವರಿಗೆ ಕೆಲಸ ಖಾಯಂ ಮಾಡಬೇಕು.

ಇನ್ನೊಂದು ವಿಚಾರ. ಯೂತ್ ಆರ್ಗನೈಜೇಷನ್ನಿಗೆ ಗ್ರಾಂಟನ್ನು ಕೊಡುವಾಗ ಅಡ್ವೈಸ್ ಮಾಡುವುದಕ್ಕೆ ಕೋ-ಆರ್ಡಿನೇಷನ್ ಕಮಿಟಿ ಎಂಬ ಒಂದು ಸಮಿತಿಯಿದೆ. ಅದರ ಶಿಫಾರ್ಸಿನ ಪ್ರಕಾರ ಗ್ರಾಂಟನ್ನು ಕೊಡಬೇಕು. ಆದರೆ ಕೆಲವು ಸಂಸ್ಥೆಗಳಿಗೆ ಹೆಚ್ಚು ಗ್ರಾಂಟನ್ನೂ ಇನ್ನು ಕೆಲವಕ್ಕೆ ಕಡಮೆ ಗ್ರಾಂಟನ್ನೂ ಕೊಡುತ್ತಾರೆ, ಕೆಲವು ಸಂಸ್ಥೆಗಳಿಗೆ ಕೊಡುವುದೇ ಇಲ್ಲ. ಇದು ಸರಿಯಲ್ಲ. ಕೋ-ಆರ್ಡಿನೇಷನ್ ಕಮಿಟಿ ಶಿಫಾರ್ಸು ಮಾಡಿರುವ ರೀತಿಯಲ್ಲಿ ಕೊಡಬೇಕಾದ್ದು ಆವಶ್ಯಕ. ಆ ದೃಷ್ಟಿಯಿಂದ ಯಾವುದಾದರೂ ಸಂಸ್ಥೆ ದೇಶದ ಹಿತದೃಷ್ಟಿಯಿಂದ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಗೊತ್ತಾದರೆ ಸರ್ಕಾರ ಅದಕ್ಕೆ ಗ್ರಾಂಟನ್ನು ಕಡಮೆ ಮಾಡಬಹುದು, ಕೆಲಸ ಮಾಡದಿರುವುದನ್ನು ತೆಗೆದುಹಾಕಬಹುದು. ಅದನ್ನು ಬಿಟ್ಟು ಸರಿಯಾಗಿ ಕೆಲಸ ಮಾಡಿಕೊಂಡು ಹೋಗುವ ಸಂಸ್ಥೆಗಳಿಗೆ ಹೆಚ್ಚು ಕಡಮೆ ಮಾಡಬಾರದು. ಈಗ ಆ ರೀತಿ ಮಾಡುತ್ತಿರುವುದು ಸರಿಯಲ್ಲ. ಈಗಿನ ನೀತಿಯಿಂದ ಯಾರು ಅಧಿಕಾರದಲ್ಲಿರುತ್ತಾರೋ ಅವರಿಗೆ ಬೇಕಾದವರಿಗೆ ಹೆಚ್ಚು ಸಹಾಯ ದೊರೆಯುತ್ತದೆ, ಬೇರೆಯವರಿಗೆ ದೊರೆಯುವುದಿಲ್ಲ ಎಂದು ಹೇಳುವುದಕ್ಕೆ ಸರ್ಕಾರದವರು ಅವಕಾಶ ಕೊಡಬಾರದು. ಪ್ರತಿಯೊಂದು ಸಂಸ್ಥೆಯನ್ನೂ ಸಮಾನಾದ ದೃಷ್ಟಿಯಿಂದ ನೋಡಿ ಕೆಲಸಕಾರ್ಯ ಮಾಡುವುದರ ದೃಷ್ಟಿಯಿಂದ, ಕಾರ್ಯಕ್ರಮದ ದೃಷ್ಟಿಯಿಂದ ಈ ಗ್ರಾಂಟನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಸಾಧಾರಣವಾಗಿ ವಿದ್ಯಾ

ಭ್ಯಾಸದ ವಿಷಯದಲ್ಲಿ ಎಲ್ಲರೂ ಮಾತನಾಡಿದ್ದಾರೆ. ನಮ್ಮ ಮೈಸೂರು ದೇಶದಲ್ಲಿ ಸುಮಾರು ಐದು ಕೋಟಿ ರೂಪಾಯಿಗಳು ಇದಕ್ಕಾಗಿ ಖರ್ಚಾಗುತ್ತಿದೆ. ಆದರೆ ಈ ಹಣ ಪಟ್ಟಣ ವಾಸಗಳಲ್ಲಿರುವ ಜನರಿಗೇ ಹೆಚ್ಚಾಗಿ ವಿನಿಯೋಗವಾಗುತ್ತಿದೆ, ಕಡಮೆ ಜನಸಂಖ್ಯೆಯಿರುವ ಸ್ಥಳಗಳಲ್ಲೇ ಖರ್ಚಾಗುತ್ತಿದೆ, ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಖರ್ಚಾಗುತ್ತಿಲ್ಲ. ಬಡ ಸ್ಕೂಲು ಉಪಾಧ್ಯಾಯರಿಗೆ ಸರಿಯಾದ ವ್ಯವಸ್ಥೆಯಿಲ್ಲ. ಈ ದಿವಸ ಸಾಧಾರಣವಾಗಿ ಕಾಲೇಜು, ಹೈಸ್ಕೂಲು, ಮಿಡ್ಲ್ ಸ್ಕೂಲ ಮತ್ತು ಪ್ರೈಮರಿ ಸ್ಕೂಲುಗಳಿಗೆ ಒಂದು ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳಕ್ಕಾಗಿ ಖರ್ಚಾಗುವುದರಲ್ಲಿ ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳಿಗೆ 15-20 ಲಕ್ಷ ರೂಪಾಯಿಗಳು ಮಾತ್ರ ಸಂಬಳಕ್ಕಾಗಿ ಖರ್ಚು ಮಾಡುತ್ತಿದ್ದರೆ ಈ ಬಡ ಉಪಾಧ್ಯಾಯರುಗಳು ಯಾವ ರೀತಿ ಜೀವನ ಮಾಡಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ನಮ್ಮ ದೇಶದಲ್ಲಿ ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ಎಷ್ಟಿದೆಯೆಂದು ತಿಳಿದಿದ್ದರೂ ಕೂಡ ಉಪಾಧ್ಯಾಯರಿಗೆ ಅದರಲ್ಲೂ ಕೂಡ ಪ್ರೈಮರಿ ಸ್ಕೂಲು ಉಪಾಧ್ಯಾಯರಿಗೆ ಹೆಚ್ಚು ಸಂಬಳ ಕೊಡುವುದು ಅಗತ್ಯವೆಂದು ಭಾವಿಸಿ ಅದರಂತೆ ಕೊಡುತ್ತಿಲ್ಲ, ಹಾಗೆ ಕೊಡಬೇಕಾದ್ದು ಅಗತ್ಯ ಎಂದು ಸರ್ಕಾರದಲ್ಲಿ ನಾನು ಮನವಿಮಾಡಿಕೊಳ್ಳುತ್ತೇನೆ. ಏಕೆಂದರೆ ಅನೇಕ ಗ್ರಾಮಗಳಲ್ಲಿ ಈ ದಿವಸ ಸ್ಕೂಲು ಮಾಸ್ಟರುಗಳಿಗೆ ವಾಸಕ್ಕೆ ಮನೆಗಳಿರುವುದಿಲ್ಲ. ಅವರಿಗೆ ಬರತಕ್ಕ ಸಂಬಳವಾದರೋ ತೀರಾ ಕಡಮೆ. ಅವರು ಬಹಳ ಕಷ್ಟತರದಿಂದ ಜೀವನ ನಡೆಸಬೇಕಾಗಿದೆ. ಸರ್ಕಾರದವರು ಮುಖ್ಯವಾಗಿ ಇಂಥ ಕಡಮೆ ಸಂಬಳ ಬರತಕ್ಕವರಿಗೆ ನ್ಯಾಯವಾಗಿ ಮೊದಲು ಪ್ರೋತ್ಸಾಹ ನೀಡಬೇಕು. ಈ ರೀತಿ ಮಾಡತಕ್ಕದ್ದು ತೀರಾ ಅತ್ಯಗತ್ಯ. ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಜೀವನದ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕೆಂಬ ಆಸೆ ಇದ್ದೇ ಇರುತ್ತದೆ. ಆದರೆ ಆ ರೀತಿ ತಮ್ಮ ಜೀವನ ಮಟ್ಟವನ್ನು ಹೆಚ್ಚು ಮಾಡಿಕೊಳ್ಳಲು ಈ ದಿವಸ ಈ ಉಪಾಧ್ಯಾಯರುಗಳಿಗೆ ಸಾಕಷ್ಟು ಸಂಬಳ ದೊರೆಯುತ್ತಿಲ್ಲ. ನಮ್ಮ ದಿನವಹಿ ವ್ಯವಹಾರ ತೆಗೆದುಕೊಂಡರೆ ನೂರು ರೂಪಾಯಿಗಳ ಸಂಬಳದಾರನು ಹೋಟಲಿಗೆ ಬಂದು ಕಾಫಿ ಕುಡಿದರೆ ಆತನು ಎರಡು ಆಣೆ ಕೊಡಬೇಕು, 15 ರೂಪಾಯಿ ಸಂಬಳ ಬರತಕ್ಕ ಮನುಷ್ಯನೂ ಎರಡು ಆಣೆ ಕೊಟ್ಟು ಕಾಫಿ ಕುಡಿಯಬೇಕು. ಹೀಗೆ ಎಲ್ಲ ಜನರ ಜೀವನದ ಮಟ್ಟ ದಿನಚರಿಯಲ್ಲಿ ನಡೆದುಕೊಂಡು ಹೋಗುತ್ತಿದೆ. ಆದುದರಿಂದ ತಾವು ಎಲ್ಲರಿಗೂ ಅವರವರ ಜೀವನಕ್ಕಾದರೂ ಸಾಕಷ್ಟು ಸಂಬಳ ಸಾರಿಗೆಗಳನ್ನು ಕೊಡಬೇಕಾದದ್ದು ಅತ್ಯಗತ್ಯ. ತಾವು ಇದನ್ನು ಆದಷ್ಟು ಜಾಗ್ರತೆ ಮಾಡಲೇಬೇಕು. ಆದರೆ ಈ ದಿವಸ ದೇಶದಲ್ಲಿ ಪ್ರಜಾಪ್ರಭುತ್ವಾಡಳಿತ ನೆಲಸಿದೆ. ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಯ ತತ್ವಗಳಿಗನುಸಾರವಾಗಿ ಕಾರ್ಯಗಳು ಮುಂದುವರಿಯಬೇಕೆಂದು ಹೇಳುತ್ತಿದ್ದಾರೆ. ಇಂಥ ವೇಳೆಯಲ್ಲಿ ಒಬ್ಬರಿಗೆ ತೀರ ಹೆಚ್ಚಾಗಿ ಸಂಬಳ ಕೊಟ್ಟು—ಮತ್ತೊಬ್ಬರಿಗೆ ತೀರಾ ಕಡಮೆ ಸಂಬಳ ಕೊಡತಕ್ಕ ನೀತಿ ಈ ಪ್ರಜಾಪ್ರಭುತ್ವ ತತ್ವಕ್ಕೇ ವಿರುದ್ಧವಾಗಿದೆ. ಈ ವ್ಯತ್ಯಾಸವನ್ನು ಸರ್ಕಾರದವರು ಕೂಡಲೆ ಸರಿಪಡಿಸಬೇಕೆಂದು ಅವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಸರ್ಕಾರದವರು ಈ ಗ್ರಾಮಾಂತರ ಪ್ರದೇಶಗಳಿಗೆ ಸ್ಕೂಲುಗಳನ್ನು ಕೊಡುವುದರ ಸಂಬಂಧದಲ್ಲಿ ಇವರು ಒಂದು ಸರಿಯಾದ ನೀತಿಯನ್ನು ಇಟ್ಟುಕೊಳ್ಳಬೇಕಾದುದು ಅಗತ್ಯವೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಗರಗಳಲ್ಲಿ ಪಾಠಶಾಲೆಗಳು ಆಗಬೇಕೆಂದರೆ ಸರ್ಕಾರದವರೇ ಬೀದಿ ಬೀದಿಗಳಲ್ಲೂ ಸರ್ಕಾರದ ಖರ್ಚಿನಿಂದಲೇ ಕಟ್ಟಡಗಳನ್ನು ಕಟ್ಟಿಸಿ—ಅವರಿಗೆ ಬೇಕಾದ ಆಟ ಪಾಠಗಳ ಸೌಕರ್ಯಗಳನ್ನೆಲ್ಲಾ ಒದಗಿಸುತ್ತಿದ್ದಾರೆ. ಆದರೆ ಈ ದಿವಸ ಸರ್ಕಾರದ ಖಜಾನೆಗೆ ಹಣವನ್ನು ಭರ್ತಿಮಾಡುತ್ತಿರುವಂಥ ಆ ಹಳ್ಳೀ ಜನರ ಮಕ್ಕಳಿಗೆ ಪಾಠಶಾಲೆಗಳನ್ನು ಕೊಡಬೇಕೆಂದರೆ ಸರ್ಕಾರದವರಿಗೆ ಬಹಳ ಕಷ್ಟವಾಗಿದೆ. ನಗರಗಳಲ್ಲಿ ಈ ಸ್ಕೂಲು ಕಟ್ಟಡಗಳಿಗೆ ತಗಲುವ ವಿಶಿಷ್ಟ ವೆಚ್ಚವನ್ನು ಮತ್ತು ಪಾಠಶಾಲೆಗಳಿಗೆ ಬೇಕಾದಂಥ ಸಲಕರಣೆಗಳು, ಕುರ್ಚಿ, ಮೇಜು, ಬೆಂಚ್ ಇತ್ಯಾದಿಗಳನ್ನೆಲ್ಲಾ, ಸರ್ಕಾರದವರೇ ಒದಗಿಸುತ್ತಿದ್ದಾರೆ. ಹಳ್ಳಿಗಳಿಗೆ ಕೇಳಿದರೆ "ನೀವು ಅರ್ಧ ಖರ್ಚುಕೊಡಿ, ನಾವರ್ಧ ಹಾಕುತ್ತೇವೆ" ಎಂದು ಹೇಳುತ್ತಾರೆ. ಇದು ಯಾವ ನೀತಿಯೋ ನಾನಂತೂ ಕಾಣೆ! ಈ ದಿವಸ ಎಲ್ಲಾ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ಗಳಲ್ಲಿರತಕ್ಕಂಥ ಕಾಲೇಜುಗಳನ್ನೂ ಮತ್ತು ಆಸ್ಪತ್ರೆಗಳನ್ನೂ ಸರ್ಕಾರದವರೇ ಹಣ ಹಾಕಿ ಕಟ್ಟಿಸಿರುತ್ತಾರೆ. ಆದರೆ ಅದೇಕೋ ಈ ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಬೇಕಾದ ಶಾಲಾ ಕಾಲೇಜುಗಳಿಗೆ ಸರಿಯಾಗಿ ಸರ್ಕಾರದವರು ಗ್ರಾಂಟನ್ನೂ ಕೂಡ ಕೊಡುತ್ತಿಲ್ಲ. ಉದಾಹರಣೆಯಾಗಿ ತಿಳಿಸುವುದಾದರೆ—ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿರತಕ್ಕಂಥ ಕಾಲೇಜನ್ನು ಸಾರ್ವಜನಿಕರ ಧನ ಸಹಾಯದಿಂದ ಕಟ್ಟಿಸಲಾಗಿದೆ. ಅದೇ ರೀತಿಯಾಗಿ ಅಲ್ಲಿರತಕ್ಕಂಥ ಆಸ್ಪತ್ರೆಯನ್ನೂ ಕಟ್ಟಿಸಿರುತ್ತೆ. ಆದರೆ ಅದೇ ನಮ್ಮ ಜಿಲ್ಲೆಯ ಪಕ್ಕದ ಜಿಲ್ಲೆಗಳ ವಿಚಾರ ತೆಗೆದುಕೊಂಡರೆ ಪ್ರತಿಯೊಂದು ಕಾಲೇಜು—ಆಸ್ಪತ್ರೆಗಳನ್ನೆಲ್ಲಾ ಸರ್ಕಾರದವರೇ ಹಣ ಹಾಕಿ ಕಟ್ಟಿಸಿಕೊಟ್ಟಿದ್ದಾರೆ. ಹೀಗೆ ಮಾಡತಕ್ಕದ್ದು ಸರಿಯೇ—ನ್ಯಾಯವೇ ಎಂಬುದನ್ನು ಈ ಮಾನ್ಯ ಸಭೆಯೇ ತೀರ್ಮಾನಮಾಡಲಿ. ಇನ್ನಾದರೂ ಸರ್ಕಾರದವರು ಇಂಥ ಒಂದು ಪಕ್ಷಪಾತ ಮನೋಭಾವವನ್ನು ತಾಳದೆ ಇರತಕ್ಕ ಹಣವನ್ನು ಎಲ್ಲಾ ಜಿಲ್ಲೆಗಳಿಗೂ ಒಂದು ಸರಿ ಸಮನಾದ ರೀತಿಯಲ್ಲಿ ಹಂಚಿಕೆ ಮಾಡುವಂತೆ ಒಂದು ನೀತಿಯನ್ನು ಹಾಕಿಕೊಳ್ಳಬೇಕೆಂದು ನಾನು ಸೂಚಿಸಲಿಚ್ಛಿಸುತ್ತೇನೆ.. ಅದೇ ರೀತಿ ಗ್ರಾಮಾಂತರ ಪ್ರದೇಶಗಳಿಗೂ ಸಹ ಹಣವನ್ನು ಹಂಚಬೇಕಾದದ್ದು ನ್ಯಾಯ. ಆದರೆ ಈ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯಲಾಗಿರತಕ್ಕ ಅನೇಕ ಹೈಸ್ಕೂಲುಗಳಲ್ಲಿ ಸರಿಯಾದ ಲ್ಯಾಬೊರೇಟರಿಗಳಿಲ್ಲ. ಪಾಠಪ್ರವಚನಗಳನ್ನು ನಡೆಸಲು ಸಾಕಾದಷ್ಟು ಉಪಾಧ್ಯಾಯರುಗಳಿರುವುದಿಲ್ಲ. ಅವುಗಳ ಆಡಳಿತದ ವಿಚಕ್ಷಣೆ ತುಂಬಾ ಶೋಚನೀಯವಾಗಿದೆ. ಆದರೆ ಈ ದಿವಸ ಈ ಬೆಂಗಳೂರು ನಗರದಲ್ಲಿರುವ ಫೋರ್ಟ್ ಹೈಸ್ಕೂಲನ್ನು ನಾವು ತೆಗೆದುಕೊಳ್ಳೋಣ. ಅದಕ್ಕೇಕೆ ಇವರು ಇಂಥ ಲ್ಯಾಬೋರೇಟರಿ ಮತ್ತು ಇತರೇ ಎಲ್ಲಾ ಸಲಕರಣೆಗಳನ್ನು ಹೇಗೆ ಒದಗಿಸುತ್ತಾರೆ? ಇದೇ ರೀತಿ ಗ್ರಾಮಾಂತರ ಪ್ರದೇಶಗಳ ಹೈಸ್ಕೂಲುಗಳಿಗೂ ಏಕೆ ಒದಗಿಸಬಾರದು? ಹಾಗೆ ಒಂದನ್ನೂ ಅಲ್ಲಿಗೆ ಒದಗಿಸದೆ ಇರುವುದರಿಂದ ಈ ದಿವಸ ಆ ಪಾಠಶಾಲೆಗಳಲ್ಲಿ ಅಭ್ಯಾಸಮಾಡುತ್ತಿರುವ ಹುಡುಗರಿಗೆ ಕೆಮಿಸ್ಟ್ರಿ ಎಂದರೇನು! ಫಿಜಿಕ್ಸ್ ಎಂದರೇನು! ಬಯಾಲಜಿ ಎಂದರೇನು ಎಂಬುದೊಂದೂ ಗೊತ್ತಿರುವುದಿಲ್ಲ. ಆದುದರಿಂದ ಸರ್ಕಾರದವರು ಈ ಸ್ಕೂಲುಗಳನ್ನು ಕೊಡತಕ್ಕ ವಿಚಾರದಲ್ಲಿ ಯಾವುದಾದರೂ ಒಂದು ಮುಖ್ಯವಾದ ನೀತಿಯನ್ನಿಟ್ಟುಕೊಂಡು, ಆ ನೀತಿ ತತ್ವಗಳ

(ಶ್ರೀ ಟಿ. ಹನುಮಯ್ಯ.)

ಗನುಸಾರವಾಗಿ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಸಲಹೆ ಮಾಡುತ್ತೇನೆ. ಈ ದಿವಸ ನಮ್ಮ ಮೈಸೂರು ಸಂಸ್ಥಾನದ ಪ್ರಜಾ ಸಂಖ್ಯೆಯಲ್ಲಿ ಶೇಕಡಾ 75 ರಷ್ಟು ಪ್ರಜಾ ಸಂಖ್ಯೆ ಗ್ರಾಮಾಂತರ ಪ್ರದೇಶದಲ್ಲಿದೆ. ಆ ಜನರಿಗೆ ಸರ್ಕಾರದವರು ಹೆಚ್ಚು ಅನುಕೂಲತೆಗಳನ್ನು ಕಲ್ಪಿಸಬೇಕಾದ್ದು ಧರ್ಮ. ಆದರೆ ಈ ದಿವಸ ಹಾಗೆ ಆಗುತ್ತಿಲ್ಲ.--ಹಿಂದಿದ್ದ ಸರ್ಕಾರ ಏನೊಂದು ನೀತಿಯನ್ನು ಅನುಸರಿಸುತ್ತಿದ್ದಿತೋ ಅದೇ ನೀತಿಯನ್ನೇ ಅನುಸರಿಸುತ್ತಿದೆ. ಇದನ್ನು ಆದಷ್ಟು ಬೇಗ ಬದಲಾವಣೆ ಮಾಡಬೇಕು.

ಇನ್ನು ಹರಿಜನ ವಿದ್ಯಾಭ್ಯಾಸದ ಬಗ್ಗೆ ಅವರಿಗೆ ನೀಡಿರತಕ್ಕ ಸೌಲಭ್ಯಗಳನ್ನು ತೆಗೆದುಕೊಂಡರೆ ಇಂದಿನ ಸರ್ಕಾರ ಅವರಿಗೆ ತುಂಬ ಸಹಾಯಗಳನ್ನು ನೀಡಿದ್ದಾರೆ. ಇವರ ಪ್ರಗತಿ ಸಾಧನೆಗಾಗಿ ಹೆಚ್ಚು ಸಹಾಯ ಮಾಡಿದ್ದಾರೆ. ಆದರೆ ಅಲ್ಲಲ್ಲೇ ಇನ್ನೂ ಕೆಲವು ಕಡೆ ಸ್ಕೂಲುಗಳಿಗೆ ಹರಿಜನ ಬಾಲಕರನ್ನು ಸೇರಿಸಲು ಅಡ್ಡಿ ಆತಂಕಗಳಿರುತ್ತವೆಂದು ತಿಳಿದುಬರುತ್ತದೆ. ಎಜ್ಯುಕೇಷನ್ ಮ್ಯಾನ್ಯುಯಲ್‌ನಲ್ಲಿ ಸೂಕ್ತ ಬದಲಾವಣೆ ಮಾಡಿ ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಇನ್ನು ಕೆಲವು ಕಡೆ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿರತಕ್ಕಂಥ ಹರಿಜನ ವಿದ್ಯಾರ್ಥಿಗಳಿಗೆ ಗ್ರಾಂಟ್ ಕೊಡತಕ್ಕ ಬಗ್ಗೆ ಬಹಳ ತೊಂದರೆಯನ್ನುಂಟುಮಾಡುತ್ತಿದ್ದಾರೆ. ಆದರೆ ಹರಿಜನರ ವಿಚಾರದಲ್ಲಿ ಈ ಸಂಬಂಧವಾದ ಎಲ್ಲಾ ರೂಲ್ಸುಗಳನ್ನೂ ಇವರ ಅಭಿವೃದ್ಧಿ ದೃಷ್ಟಿಯಿಂದ ಸಡಿಲ ಮಾಡಬೇಕಾದ್ದು ನ್ಯಾಯವಾದ್ದು. ಎಲ್ಲ ಜನಾಂಗದವರಂತೆ ಈ ಜನಾಂಗವೂ ಕೂಡ ಭುಜಕ್ಕೆ ಭುಜ ಕೊಟ್ಟು ದೇಶದ ಸ್ವಾತಂತ್ರ್ಯಕ್ಕೆ ಹೆಚ್ಚಾಗಿ ದುಡಿದಿದ್ದಾರೆ. ಆದಕಾರಣ ಸರ್ಕಾರದವರು ಹರಿಜನರಿಗಿರತಕ್ಕ ನಾನಾ ತೊಂದರೆಗಳನ್ನು ನಿವಾರಣೆ ಮಾಡಿ ಅವರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವುದು ತುಂಬಾ ಅಗತ್ಯವೆಂದು ಸರ್ಕಾರದವರಲ್ಲಿ ಮನವಿಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ

Sri SYDNEY A. THOMAS (Nominated).—It was not my intention to take part in this discussion to-day, but I was provoked into doing so on reading certain cut motions tabled by Hon'ble Sri Palaniyappan, namely, Nos. 22 and 23 and I felt that it was my duty in fairness to the schools concerned to explain the position as it exists to-day. On reading these cut motions, and anticipating Sri Palaniyappan, I paid a visit to some of the important schools—European Schools—I prefer to call them Anglo-Indian Schools—and I interviewed the heads in order to find out whether there was any truth as alleged in these cut motions and I regret to say that neither of them was based on fact. Cut Motion No. 22 reads as follows :—

"To discuss the immediate need of implementing 'Samskrithi Prachar' in European High Schools in Civil Station, Bangalore."

On interviewing the heads of these Schools, I was given to understand that not only are they implementing the Samskrithi Prachar scheme . . . .

Sri A. G. RAMACHANDRA RAO (Minister for Law and Education).—I believe that Cut motion refers to the reputation of the institution mentioned by my Hon'ble friend. I made enquiries. Just now Sri Palaniyappan who has tabled that cut motion, told me that he did not refer to that School and by mistake it has come up and he mentioned some other institution. I asked him to further verify before giving currency to such an information. Therefore, on that point the Hon'ble Member need not pursue. I am very glad he has brought it to the notice of the House.

Sri SYDNEY A. THOMAS.—I want to disabuse the minds of members of any wrong impression which may gain currency as a result of the cut motion. It is likely to do harm to the school concerned.

Sri A. G. RAMACHANDRA RAO.—We have not heard any allegation against that School. Therefore, that mistake will have to be corrected and I believe Hon'ble Member Sri Palaniyappan will also do so. He informed me about half an hour back and I wanted to bring it your notice.

Sri SYDNEY A. THOMAS.—It was I who drew the attention of Hon'ble Member Sri Palaniyappan. I wish he had acted with some sense of responsibility before tabling cut motions. For Sri Palaniyappan's information I will describe the incident which took place. As the Hon'ble Minister for Education has said, it was not in Baldwin Boys' High School.

Sri A. G. RAMACHANDRA RAO.—Let him verify it and give it. Why do you mention ?

Sri SYDNEY A. THOMAS.—I hope he will gracefully withdraw this cut motion.

Mr. DEPUTY SPEAKER.—He has not moved his cut motion. It is only a general discussion.

Sri SYDNEY A. THOMAS.—In view of what the Hon'ble Minister said, I will leave the matter at that.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ಮಿಡಲ್ ಸ್ಕೂಲು ವಿದ್ಯಾಭ್ಯಾಸದ ಪದ್ಧತಿಯಲ್ಲಿರತಕ್ಕಂಥ ಲೋಯರ್ ಸೆಕೆಂಡರಿ ಪರೀಕ್ಷೆ ಎಂಬುದನ್ನು ಈಗ ವಜಾಮಾಡಲಾಗಿದೆ. ಹೀಗೆ ಆ ಪರೀಕ್ಷೆಯನ್ನು ತೆಗೆದುಹಾಕಿದ್ದು ಬಹಳ ಅನಾನುಕೂಲವಾಗಿದೆ ಎಂಬುದಾಗಿ ಇತ್ತೀಚೆಗೆ ತಿಳಿದುಬರುತ್ತಿದೆ. ಈ ಹಿಂದೆ ಇಂಥ ಚಿಕ್ಕ ಚಿಕ್ಕ ಮಕ್ಕಳಿಗೆ ಇಷ್ಟು ಎಳೆಯ ವಯಸ್ಸಿನಲ್ಲೇ ಹೀಗೆ ಒಂದು ಪರೀಕ್ಷೆಯನ್ನಿಡತಕ್ಕದ್ದು ಸರಿಯಾದದ್ದಲ್ಲ, ಹೀಗೆ ಮಾಡಿದರೆ ಆ ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬ ಅಡಚಣೆಯುಂಟಾಗುತ್ತದೆಂಬಭಾವನೆಯಿಂದ, ಅದು ಸರಿಯಾದದ್ದಲ್ಲವೆಂದು ತೀರ್ಮಾನ ಮಾಡಿ ಅದನ್ನು ವಜಾ ಮಾಡಲಾಯಿತು. ಆದರೆ ಆ ದಿವಸ ಹಾಗೆ ಮಾಡಿದ್ದು ಅಷ್ಟು ಸೂಕ್ತವಾದ್ದಲ್ಲ ಎಂಬುದಾಗಿ ಈಗ ಕಂಡುಬರುತ್ತಿದೆ. ನನ್ನ ಅಭಿಪ್ರಾಯದಲ್ಲಿ ಮತ್ತು ಈ ಬಾಲಕರ ಪೋಷಕರಾದಂಥ ತಂದೆ ತಾಯಿಗಳ ಅಭಿಪ್ರಾಯದಲ್ಲಿ ಹಾಗೂ ಉಪಾಧ್ಯಾಯರುಗಳ ಅಭಿಪ್ರಾಯದಲ್ಲಿ ಎಲ್. ಎಸ್. ಪರೀಕ್ಷೆಯನ್ನು ಮತ್ತೆ ಜಾರಿಗೆ ತರತಕ್ಕದ್ದು ಉತ್ತಮವೆಂದು ಕಂಡುಬರುತ್ತಿದೆ. ಈಗ ನಡೆಯುತ್ತಿರುವಂಥ ರೀತಿಯಲ್ಲೇ ಇಂದಿನ ವಿದ್ಯಾಭ್ಯಾಸ ಪದ್ಧತಿಯನ್ನು ನಾವು ಮುಂದುವರಿಸಿಕೊಂಡು ಹೋದ ಪಕ್ಷದಲ್ಲಿ ಇದರಿಂದ ನಮ್ಮ ವಿದ್ಯಾಭ್ಯಾಸ ಪರಿಣಾಮಕಾರಿಯಾಗಿ ಆಗುವುದಿಲ್ಲವೆಂಬುದಾಗಿ ಕಂಡುಬರುತ್ತದೆ. ಈ ದಿವಸ ಕ್ಲಾಸ್ ಪರೀಕ್ಷೆಗಳು ಎಂಬುದಾಗಿ ನಡೆಯುತ್ತಿವೆ. ಅನೇಕ ಹುಡುಗರು ಮುಂದಿನ ಕ್ಲಾಸಿಗೆ ವರ್ಷೆ ವರ್ಷೇ ಬರುತ್ತಲೇ ಇದ್ದಾರೆ. ಆದರೆ ಆ ಪೈಕಿ ಯಾವ ಯಾವ ವಿದ್ಯಾರ್ಥಿಯ ಯೋಗ್ಯತೆ ಎಷ್ಟೆಷ್ಟರಮಟ್ಟಿಗಿದೆ ಎಂಬುದನ್ನು ಮಾತ್ರ ಹೇಳುವುದಕ್ಕಾಗುವುದಿಲ್ಲ. ಅಂತೂ ಒಟ್ಟಿಗೆ ಎಲ್ಲರಿಗೂ ಪ್ರಮೋಷನ್ ದೊರೆಯುತ್ತಿದೆ. ಆದರೆ ಹಾಗೆ ಕ್ರಮವಾಗಿ ಪ್ರಮೋಷನ್ ಹೊಂದತಕ್ಕ ಹುಡುಗರ ಪೈಕಿ ಅನೇಕರು ಸರಿಯಾಗಿ ಪಾಠಶಾಲೆಗೇ ಅಟೆಂಡ್ ಆಗುತ್ತಿಲ್ಲ. ಅವರ ತಂದೆ ತಾಯಿಗಳು ಹೋಗಿ ಉಪಾಧ್ಯಾಯರನ್ನು ಹೆದರಿಸಿ ಬೆದರಿಸಿ ಅವರ ಹುಡುಗರನ್ನು ಮುಂದಿನ ತರಗತಿಗಳಿಗೆ ಹಾಕಿಸಿಕೊಂಡಿರತಕ್ಕಂಥ ನಿದರ್ಶನಗಳೂ ಕೂಡ ಅನೇಕ ಇರುತ್ತವೆ. ಹೀಗೆ ಅನೇಕ ಅನಾನುಕೂಲಗಳಿವೆ. ಇದೂ ಅಲ್ಲದೆ ವಿದ್ಯಾಭ್ಯಾಸ ಪ್ರಾರಂಭವಾದ ತಾರೀಖಿನಲಾಗಾಯಿತು 12 ವರ್ಷಗಳತನಕ ಅತನಿಗೆ ಯಾವ ಒಂದು ಪರೀಕ್ಷೆಯನ್ನೂ ಮಧ್ಯದಲ್ಲಿ ಇಡದೆ ಇರುವುದರಿಂದ ಹುಡುಗರು ಆಸಕ್ತಿವಹಿಸಿ ಸರಿಯಾದ ಕ್ರಮದಲ್ಲಿ ವಿದ್ಯಾಭ್ಯಾಸ ಮಾಡಲು ಅವಕಾಶವಿಲ್ಲ. ಅವರು ಬಹಳ ಸೋಮಾರಿಗಳಾಗುತ್ತಿದ್ದಾರೆ. ಆದಕಾರಣ ಈಗಿನ ವಿದ್ಯಾಭ್ಯಾಸ ಕ್ರಮ ಅಷ್ಟೇನೂ ಅನುಕೂಲವಾದದ್ದಲ್ಲ. ಇದೇ ಅಭಿಪ್ರಾಯವನ್ನು ನಾನು ಅನೇಕ ಕಡೆಗಳಲ್ಲಿ ಕೇಳುತ್ತಿದ್ದೇನೆ. ಆದುದರಿಂದ ಈಗ ಮತ್ತೆ ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ಪ್ರಾರಂಭಿಸುವುದು ಬಹಳ ಸಾಧುವಾಗಿದೆ. ಹೀಗೆ ಮಾಡಿದರೆ ಬಾಲಕರ ಮುಂದಿನ ವಿದ್ಯಾಭ್ಯಾಸಕ್ಕೆ ಹೆಚ್ಚು ಸಹಾಯ ಮಾಡಿದಂತಾಗುತ್ತದೆಂಬುದು ನನ್ನ ಖಚಿತವಾದ ಅಭಿಪ್ರಾಯ. ಈ ದಿವಸ ಹೀಗೆ ಒಂದು ಬಿಗಿಯಾದ ಪರೀಕ್ಷೆಯಿಲ್ಲದೆ ಕೇವಲ ಕ್ಲಾಸ್ ಪರೀಕ್ಷೆ ನಡೆಸುತ್ತಿರುವುದರಿಂದ ಎಲ್ಲಾ ಹುಡುಗರನ್ನೂ ಅವರು ಮುಂದಕ್ಕೆ ತಳ್ಳುತ್ತಿದ್ದಾರೆ. ಇದರಿಂದ ಈ ದಿವಸ ಹುಡುಗರಿಗೆಲ್ಲಾ ಹೈಸ್ಕೂಲುಗಳಲ್ಲಿ ಸೀಟನ್ನು ಒದಗಿಸುವುದಕ್ಕೆ ತುಂಬ ಕಷ್ಟವಾಗಿದೆ. ಅವರಿಗೆ ಕುಳಿತುಕೊಳ್ಳುವುದಕ್ಕೂ ಕೂಡ ಸ್ಥಳ ಸಿಕ್ಕುವುದಿಲ್ಲ. ಈ ನಾನಾ ಕಾರಣಗಳಿಂದ ಈ ದಿವಸ ಪುನಃ ಎಲ್. ಎಸ್. ಪರೀಕ್ಷೆಯನ್ನು ಪ್ರಾರಂಭಿಸುವುದು ಅತ್ಯವಶ್ಯಕವೆಂದು ನಾನು ಅಭಿಪ್ರಾಯಪಟ್ಟಿದ್ದೇನೆ. ಈ ಒಂದು ಪರೀಕ್ಷೆಯನ್ನು ತೆಗೆದುಹಾಕಿದ್ದರಿಂದ ಈ ದಿವಸ ಹೈಸ್ಕೂಲ್ ಸ್ಟ್ಯಾಂಡರ್ಡ್ ಕೂಡ ಬಹಳ ಕಡಮೆಯಾಗುತ್ತಿದೆ. ಆದಕಾರಣ ಇಂದಿನ ರೀತಿಯಲ್ಲೇ ನಮ್ಮ ವಿದ್ಯಾಭ್ಯಾಸ ಕ್ರಮವನ್ನು ಮುಂದುವರಿಸಿದಪಕ್ಷದಲ್ಲಿ ಇದರ ಮುಂದಿನ ಪರಿಣಾಮ ಅಷ್ಟು ಒಳ್ಳೆಯದಾಗಿರುವುದಿಲ್ಲವೆಂದು ನಾನು ಖಚಿತವಾಗಿ ತಿಳಿಸಬಲ್ಲೆ.

ಇನ್ನು ಸ್ಕಾಲರ್‌ಷಿಪ್‌ಗಳ ವಿಚಾರ. ಈ ದಿವಸ ಬ್ಯಾಕ್‌ವರ್ಡ್ ಮತ್ತು ಡಿಪ್ರೆಸ್ಡ್ ಕ್ಲಾಸ್ ಸ್ಕಾಲರ್‌ಷಿಪ್ಸ್ ಎಂದು ಹೇಳಿ ಕೊಡುತ್ತಿದ್ದಾರೆ. ಆದರೆ ಇಲ್ಲಿಗೆ 15—20 ವರ್ಷಗಳ ಹಿಂದೆ ಇದು ಯಾವ ರೀತಿಯಾಗಿ ನಡೆದುಕೊಂಡು ಬರುತ್ತಿತ್ತೋ ಇಂದೂ ಅದೇ ರೀತಿ ನಡೆದುಕೊಂಡು ಹೋಗುತ್ತಿದೆ. ಓದತಕ್ಕ ಹುಡುಗರ ಸಂಖ್ಯೆ ಹೆಚ್ಚಾಗಿರಲಿ—ಕಡಮೆಯಾಗಿರಲಿ ಇದು ಮಾತ್ರ ಹೆಚ್ಚು ಕಡಮೆ ಆಗುತ್ತಿಲ್ಲ. ಓದತಕ್ಕ ಹುಡುಗರ ಸಂಖ್ಯೆ ಈ ದಿವಸ ವಿಪರೀತ ಹೆಚ್ಚಾಗಿದೆ. ಆದರೆ 20 ವರ್ಷಗಳ ಕೆಳಗೆ ಈ ಬಾಬಿಗೆ ಎಷ್ಟು ಹಣವನ್ನು ಕೊಡುತ್ತಿದ್ದರೋ ಈಗಲೂ ಅಷ್ಟೇ ಹಣವನ್ನು ಕೊಡುತ್ತಿದ್ದಾರೆ. ನಾನು ಸ್ಕಾಲರ್‌ಷಿಪ್ ಸಮಿತಿಯಲ್ಲಿ ಸದಸ್ಯನಾಗಿದ್ದು ಕೆಲಸ ಮಾಡಿದ್ದೇನೆ. ಈ ದಿವಸ ಒಂದು ನೂರು ಬಡ ಹುಡುಗರಿದ್ದರೆ ಆ ಪೈಕಿ ಒಂದೊಂದು ಕೋಮಿಗೆ ಸ್ಕಾಲರ್‌ಷಿಪ್ ದೊರೆಯುವುದು ಕೇವಲ ಒಬ್ಬನಿಗೋ ಅಥವಾ ಇಬ್ಬರಿಗೋ. ಹೀಗಾಗಿ ಈ ಒಂದು ವ್ಯವಸ್ಥೆಯನ್ನು ಸರ್ಕಾರದವರು ಏರ್ಪಾಡು ಮಾಡಿದ್ದರೂ ನಿಜಾಂಶದಲ್ಲಿ ಇದರಿಂದ ಉಪಕಾರ ಶೇಕಡ 95 ಜನರಿಗೆ ಆಗುತ್ತಿಲ್ಲ. ಉಪಕಾರ ಮಾಡಬೇಕೆಂದಿದ್ದರೆ ಸರಿಯಾದ ರೀತಿಯಲ್ಲಿ ಮಾಡಿ; ಇಲ್ಲದಿದ್ದರೆ ಇದನ್ನು ತೆಗೆದು ಹಾಕಿಬಿಡಿ.

4 P.M.

ಕೊನೆಯದಾಗಿ, ಸ್ಕೂಲು ಕಟ್ಟಡಗಳ ವಿಷಯ. ಸುಮಾರು 10—15 ವರ್ಷಗಳ ಹಿಂದೆಯೇ ಗ್ರಾಮಸ್ಥರು ಕಟ್ಟಡಕ್ಕೆ ಹಣವನ್ನು ಡಿಪಾಜಿಟ್ ಮಾಡಿದ್ದರೂ ಕೂಡ ತಹಲ್‌ವರೆಗೂ ಆ ಕಟ್ಟಡಗಳನ್ನು ಕಟ್ಟಿಸಿಲ್ಲ. ಇಂಥಾ ಅನೇಕ ನಿದರ್ಶನಗಳನ್ನು ಮಾನ್ಯ ವಿದ್ಯಾ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಎಂದರೆ, ಅರಕಲಗೂಡು ತಾಲ್ಲೂಕಿನ ಗಂಗೂರು ಗ್ರಾಮದಲ್ಲಿ 10—12 ವರ್ಷದ ಹಿಂದೆಯೇ ಹಣ ಡಿಪಾಜಿಟ್ ಮಾಡಿದ್ದಾರೆ. ಪ್ಲಾನು ಮತ್ತು ಎಸ್ಟಿಮೇಟ್ ತಯಾರಾಗಿ ಡಿ. ಪಿ. ಐ. ಅವರ ಆಫೀಸಿಗೆ ಬಂದಿದ್ದುದನ್ನು ನಾನು ಎರಡು ವರ್ಷಗಳ ಹಿಂದೆ ನೋಡಿದ್ದೆ. ಆ ಪ್ಲಾನು ಎಸ್ಟಿಮೇಟು ಏನಾಯಿತೋ ಏನೋ ಅದು ಇಲ್ಲವೇ ಇಲ್ಲ. ಮತ್ತೊಂದು ಪ್ಲಾನು ಮಾಡಿ ಎಂದರೆ ತಹಲ್‌ವರೆಗೂ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರಾಗಿಲ್ಲ, ಇಂಥ ನಿದರ್ಶನ ಬೇಕಾದಷ್ಟಿದೆ. ಈಗ ಹೊಸದಾಗಿ 500 ರೂಪಾಯಿ ಕಟ್ಟಡಕ್ಕೆ ಕೊಡುತ್ತೇವೆ ಎಂದು ಹೇಳಿ ರೂಲ್ಸ್ ಮಾಡಿದ್ದೀರಿ. 10—15 ವರ್ಷಗಳಿಗೆ ಹಿಂದೆಯೇ ಯಾವ ಗ್ರಾಮಸ್ಥರು ಕಟ್ಟಡಕ್ಕಾಗಿ ಹಣವನ್ನು ಡಿಪಾಜಿಟ್ ಮಾಡಿದ್ದಾರೋ ಅದಕ್ಕೆ ಹೊಸ ರೂಲ್ಸನ್ನು ಅನ್ವಯಿಸದೆ ಹಿಂದಿನ ರೂಲ್ಸ್ ಪ್ರಕಾರವೇ ಹಣವನ್ನು ಕೊಟ್ಟು ಆ ಗ್ರಾಮಗಳಿಗೆ ಕಟ್ಟಡಗಳನ್ನು ಕಟ್ಟಿಸಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಸಂಸ್ಥಾನದಲ್ಲಿ ಸರ್ಕಾರದ ಭರವಸೆಯಮೇಲೆ ಮಾನ್ಯ ಸದಸ್ಯರು ಹೇಳಿದಂತೆ ಸಾರ್ವಜನಿಕರು ಕಟ್ಟಡಕ್ಕಾಗಿ ಬೇಕಾದಷ್ಟು ಹಣವನ್ನು ಡಿಪಾಜಿಟ್ ಮಾಡಿಕೊಂಡು ಬಂದಿರುತ್ತಾರೆ. ಸರ್ಕಾರದವರು ಇಲ್ಲಿಯವರೆಗೂ ಹಣ ಡಿಪಾಜಿಟ್ ಮಾಡಿ ಏಳು—ಎಂಟು ವರ್ಷಗಳಾಗಿದ್ದರೂ ಕೂಡ ಅನೇಕ ಗ್ರಾಮಗಳಲ್ಲಿ ಕಟ್ಟಡಗಳನ್ನು ಕಟ್ಟಿಸಿಕೊಟ್ಟಿಲ್ಲ. ಈ ರೀತಿಯಾದರೆ ಸರ್ಕಾರದವರಲ್ಲಿ ಸಾರ್ವಜನಿಕರಿಗಿರತಕ್ಕ ಒಂದು ನಂಬಿಕೆ ಹೋಗಲಿಕ್ಕೆ ಅವಕಾಶವಾಗುತ್ತದೆ. ಈಗ ಮಾನ್ಯ ಸದಸ್ಯರು ಹೇಳಿದಂತೆ ಆ ಕಟ್ಟಡಗಳನ್ನು ತುರ್ತಾಗಿ ಕಟ್ಟಿಸಬೇಕಾದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಅನೇಕ ಕಡೆ ಕಟ್ಟಡಗಳು ಇಲ್ಲದೆ ವಿದ್ಯಾರ್ಥಿಗಳು ಷೆಡ್ಡುಗಳು ಮತ್ತು ದೇವಾಲಯಗಳಲ್ಲಿ ವ್ಯಾಸಂಗ ಮಾಡುತ್ತಾಯಿರುತ್ತಾರೆ. ನಮ್ಮ ತಿಪಟೂರು ತಾಲ್ಲೂಕು ನೊಣವಿನಕೆರೆಯಲ್ಲಿ ಸಾರ್ವಜನಿಕರು ಹೈಸ್ಕೂಲು ಕಟ್ಟಡಕ್ಕಾಗಿ 28 ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಿ ಐದು ವರ್ಷಗಳಾಗುತ್ತಾ ಬಂದಿದೆ. ಸರ್ಕಾರದವರು ಇಲ್ಲಿಯವರೆಗೂ ಕಟ್ಟಡವನ್ನು ಕಟ್ಟಿಸಿಲ್ಲ. ಹೀಗಾದರೆ ಆ ವಿದ್ಯಾರ್ಥಿಗಳು ಎಲ್ಲಿ ವ್ಯಾಸಂಗ ಮಾಡಬೇಕು ಅವರಿಗೆ ಎಷ್ಟು ಕಷ್ಟವಿದೆ ಎಂಬುದನ್ನು ಸರ್ಕಾರದವರು ನಿಜವಾಗಿಯೂ ಪರಿಶೀಲನೆ ಮಾಡಬೇಕು. ಅನೇಕ ಕಡೆ ದೇವಾಲಯದಲ್ಲಿ, ಛತ್ರಗಳಲ್ಲಿ ಮತ್ತು ಪಂಚಾಯಿತಿ ಹಾಲ್‌ನಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಾಯಿದ್ದಾರೆ, ಆದ್ದರಿಂದ ಸರ್ಕಾರದವರು ಕೂಡಲೇ ಪರಿಶೀಲನೆ ಮಾಡಿ ಕಟ್ಟಡಗಳನ್ನು ತುರ್ತಾಗಿ ಕಟ್ಟಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಅದೇ ಹೋಬಳಿ ಆಲಬೂರಿನಲ್ಲಿ ಒಂದು ಸ್ಕೂಲು ಮಂಜೂರಾಗಿ ಅದಕ್ಕೆ ಕಟ್ಟಡಕ್ಕಾಗಿ ಒಂದು ಎಸ್ಟಿಮೇಟ್ ತಯಾರಾಗಿತ್ತು. ಅದು ಒಂದು ವರ್ಷಕ್ಕೆ ಮೇಲ್ಪಟ್ಟಾಗಿದೆ. ಅಲ್ಲಿ ವ್ಯಾಸಂಗಮಾಡುತ್ತಾಯಿರತಕ್ಕ ವಿದ್ಯಾರ್ಥಿಗಳು ಷೆಡ್‌ನಲ್ಲಿ ವ್ಯಾಸಂಗ ಮಾಡುತ್ತಾಯಿದ್ದಾರೆ, ಒಂದು ಸಾರಿ ಅದರ ಹತ್ತಿರ ಇದ್ದ ಮರ ಬಿದ್ದು ಅದು ಜಖಂ ಆಗಿದೆ. ಈ ರೀತಿ ಎಲ್ಲಾ ಇರುವುದರಿಂದ ಸರ್ಕಾರದವರು ಸ್ಕೂಲುಗಳನ್ನು ಮಂಜೂರುಮಾಡಿದ ಕೂಡಲೇ ಕಟ್ಟಡವನ್ನು ಸಹ ಕಟ್ಟಿಸಲಿಕ್ಕೆ ಖಂಡಿತವಾಗಿಯೂ ಪ್ರಯತ್ನ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ನಾನು ಈ ಡಿಮ್ಯಾಂಡಿಗೆ ಸಂಬಂಧಪಟ್ಟಂತೆ ತಿಪಟೂರಿನಲ್ಲಿ ಒಂದು ಇಂಟರ್‌ಮೀಡಿಯೆಟ್ ಕಾಲೇಜನ್ನು ಸ್ಥಾಪನೆ ಮಾಡಬೇಕೆಂದು ಖೋತಾ ನಿರ್ಣಯವನ್ನು ಕಳುಹಿಸಿದ್ದೇನೆ. ತಿಪಟೂರು ಟೌನ್ 18 ಸಾವಿರ ಪ್ರಜಾಸಂಖ್ಯೆವುಳ್ಳದ್ದಾಗಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಸುಮಾರು 700ರವರೆಗೂ ರೇಪಲೂರು ಹೈಸ್ಕೂಲನಲ್ಲಿ ವ್ಯಾಸಂಗ ಮಾಡುತ್ತಾಯಿದ್ದಾರೆ. ತಿಪಟೂರು ಒಂದು ಸಬ್‌ಡಿವಿಜನ್ ಆಗಿ ತಿಪಟೂರು ಸಬ್‌ಡಿವಿಜನ ಮೂರು ತಾಲ್ಲೂಕುಗಳಿಂದ ಏಳು—ಎಂಟು ಹೈಸ್ಕೂಲುಗಳಿದ್ದು 3,000 ವಿದ್ಯಾರ್ಥಿಗಳವರೆಗೂ ವ್ಯಾಸಂಗ ಮಾಡತಕ್ಕ ಸ್ಥಳವಾಗಿದೆ. ತಿಪಟೂರು ಟೌನ್ ವ್ಯಾಪಾರ ಕೇಂದ್ರವಾಗಿದೆ. ಅಲ್ಲಿ ವ್ಯಾಸಂಗಮಾಡತಕ್ಕ 3,000 ಜನ ವಿದ್ಯಾರ್ಥಿಗಳು ಎಸ್ ಎಸ್.ಎಲ್.ಸಿ. ಪರೀಕ್ಷೆ ಆದಕೂಡಲೇ ಮುಂದಿನ ವ್ಯಾಸಂಗಕ್ಕೆ ಬೆಂಗಳೂರಿಗೆ ಬರಬೇಕಾಗಿದೆ. ಬೆಂಗಳೂರಿಗೆ ಬರಬೇಕೆಂದರೆ ಅನೇಕ ತೊಂದರೆಗಳುಂಟಾಗಿ ಆ ಬಡವಿದ್ಯಾರ್ಥಿಗಳು ಅಲ್ಲಿಗೇ ತಮ್ಮ ವ್ಯಾಸಂಗವನ್ನು ನಿಲ್ಲಿಸಬೇಕಾಗುತ್ತದೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ ತಿಪಟೂರು ಒಂದು ಕೇಂದ್ರ ಸ್ಥಳವಾಗಿದ್ದು, ತುಮಕೂರು, ಹಾಸನ, ಅರಸೀಕೆರೆ ಈ ಪ್ರಾಂತ್ಯಗಳಿಗೆ ಮಧ್ಯದಲ್ಲಿದೆ. ಮಧ್ಯದಲ್ಲಿರುವುದರಿಂದ ತಿಪಟೂರಿಗೆ ಒಂದು ಇಂಟರ್‌ಮೀಡಿಯೆಟ್ ಕಾಲೇಜನ್ನು ಕೊಡಿಸಿಕೊಡಬೇಕು. ಅಲ್ಲದೇ ಇದಕ್ಕೆ ಬೇಕಾದ ಎಲ್ಲ ಸೌಲಭ್ಯಗಳೂ ಅಲ್ಲಿ ಇದೆ. ಒಂದು ಸೈಟನ್ನು ಕೂಡ ಮುನಿಸಿಪಾಲಿಟಿಯವರು ಕೊಟ್ಟಿದ್ದಾರೆ. ಬೇಕಾದಷ್ಟು ಜಾಗ ಇದೆ. ನೀರಿನ ವಸತಿ ಇದೆ. ವಾಯುಗುಣ ಚೆನ್ನಾಗಿದೆ. ಈ ಎಲ್ಲಾ ವಿಷಯಗಳನ್ನು ಯೋಚನೆ ಮಾಡಿ ತಿಪಟೂರು ಟೌನಿಗೆ ಒಂದು ಇಂಟರ್‌ಮೀಡಿಯೆಟ್ ಕಾಲೇಜನ್ನು ತುರ್ತಾಗಿ ಕೊಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈ ಡಿಮ್ಯಾಂಡನ್ನು ಸರ್ವಾನುಮತದಿಂದ ಎಲ್ಲರೂ ಕೂಡ ಅನುಮೋದಿಸಬೇಕು. ಆ ರೀತಿ ಅನುಮೋದಿಸುವವರ ಪೈಕಿ ನಾನೂ ಒಬ್ಬ. ನಮ್ಮ ಮೈಸೂರು ಸರ್ಕಾರದವರು ಒಂದು ಹೆಮ್ಮೆ ಪಡತಕ್ಕ ವಿಚಾರ ಎಂದರೆ ಇಂಡಿಯಾ ದೇಶದಲ್ಲಿ ಯಾವ ಪ್ರಾಂತ್ಯದಲ್ಲೂ ಕೂಡ ಖರ್ಚುಮಾಡದೇ ಇರುವಷ್ಟು ಹಣವನ್ನು ಈ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುತ್ತಾ ಇದ್ದಾರೆ, ಸುಮಾರು 4 ಕೋಟಿ 87 ಲಕ್ಷ 50 ಸಾವಿರ ರೂಪಾಯಿಗಳು ಖರ್ಚಾಗುತ್ತಾ ಇವೆ. ಮೈಸೂರು ದೇಶದ ಉತ್ಪತ್ತಿಯಲ್ಲಿ ಸುಮಾರು ಕಾಲ ಭಾಗದಷ್ಟು ಹಣವನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿದರೂ ಕೂಡ ಇದರ ವ್ಯವಸ್ಥೆ ಸ್ವಲ್ಪಮಟ್ಟಿಗೆ ಸರಿಯಾಗಿಲ್ಲವೇನೋ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ನಮ್ಮ ಸ್ನೇಹಿತರು ಹೇಳಿದಂತೆ ಅನೇಕಕಡೆ ಸ್ಕೂಲುಗಳನ್ನು ಚಾವಡಿಯೊಳಗೆ, ದೇವಸ್ಥಾನದಲ್ಲಿ ನಡೆಸತಕ್ಕ ಪರಿಸ್ಥಿತಿ ಈಗಲೂ ಕೂಡ ನಮ್ಮ ಕಡೆ ಇದೆ. ಸಾಮಾನ್ಯವಾಗಿ ಹರಿಜನರ ಪ್ರವೇಶಕ್ಕೆ ಅವಕಾಶವಿಲ್ಲ ಎಂದು ಹೇಳತಕ್ಕ ಕಾಲ ಹೋಗಿ ಸವರ್ಣ ಹಿಂದೂಗಳು ಮತ್ತು ಹರಿಜನರು ಎಲ್ಲರೂ ಕಲೆತು ವಿದ್ಯಾಭ್ಯಾಸ ಪಡೆಯುತ್ತಾಯಿರತಕ್ಕ ಈ ಕಾಲದಲ್ಲಿ ಎಲ್ಲಾ ಗ್ರಾಮದಲ್ಲೂ ಕೂಡ ಶಾಲಾ ಕಟ್ಟಡಗಳನ್ನು ಕಟ್ಟಿಸುವುದು ಬಹಳ ಸಾಧುವಾದದ್ದು. ಮೈಸೂರು ದೇಶದಲ್ಲಿರತಕ್ಕ ಎಲ್ಲಾ ಹಳ್ಳಿಗಳಲ್ಲೂ ಕೂಡ ಪ್ರತಿಯೊಬ್ಬ ರೈತರೂ ಎಜ್ಯುಕೇಷನ್ ಸೆಸ್ ಕೊಡುತ್ತಾ ಇರುವುದು ಎಲ್ಲರ ಗಮನದಲ್ಲೂ ಇದೆ. ತಾವು ಪಟ್ಟಣಗಳಲ್ಲೇ ಹೆಚ್ಚು ಹೆಚ್ಚು ಸ್ಕೂಲುಗಳನ್ನು ಮತ್ತು ಕಾಲೇಜುಗಳನ್ನು ತೆಗೆದು ಹಣ ಖರ್ಚುಮಾಡುತ್ತಾ ಇರುವುದನ್ನು ನೋಡಿದರೆ ಹಳ್ಳಿಯಲ್ಲಿರತಕ್ಕ ರೈತರು ವಿದ್ಯಾಭ್ಯಾಸಕ್ಕೆ ಕೊಡತಕ್ಕ ಕಂದಾಯ ಸರ್ಕಾರದವರ ಗಮನದಲ್ಲಿ ಇದೆಯೋ ಇಲ್ಲವೋ ಎಂದು ಅನುಮಾನವಾಗುತ್ತಾ ಇದೆ.

ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಮೊನ್ನೆ ತಾನೆ ಡೈರೆಕ್ಟರ್ ಸಾಹೇಬರವರು ಒಂದು ಆರ್ಡರನ್ನು ಹೊರಡಿಸಿದ್ದಾರೆ. ಒಂದು ಪ್ರೈಮರಿ ಶಾಲಾ ಕಟ್ಟಡ ಕಟ್ಟಬೇಕಾಗಿದ್ದರೆ ಸರ್ಕಾರದವರು 500 ರೂಪಾಯಿ ಕೊಡುತ್ತಾರೆ ಗ್ರಾಮಸ್ಥರು ಇನ್ನು ಉಳಿದ 500 ರೂಪಾಯಿ ಕೊಡಬೇಕೆಂದು ಆ ಆಜ್ಞೆಯಲ್ಲಿ ತಿಳಿಸಲಾಗಿದೆ. ಇದೇನೋ ಅನುಕೂಲವಾದದ್ದು. ಡೈರೆಕ್ಟರ್ ಸಾಹೇಬರವರು ನಮ್ಮಲ್ಲಿಗೆ ಬಂದಿದ್ದಾಗ ನಾನೂ ಕೂಡ ಅವರೊಡನೆ ಮಾತನಾಡಿದೆ. ಈ ಕಟ್ಟಡಗಳಿಗೆ ಮೇಲ್‌ಛಾವಣಿ ಹಾಕುವುದು ಯಾವುದೆಂದರೆ ಆಸ್‌ಬೆಸ್ಟಾಸ್‌ಷೀಟುಗಳು. ಸ್ವಾಮಿ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಈ ಸ್ಕೂಲುಗಳಿರುವುದು ಊರಿನ ಹೊರಗಡೆ, ಅಲ್ಲಿ ವಿಷ

ರೀತಿ ಗಾಳಿ ಬೀಸುತ್ತದೆ. ಜೋರಾಗಿ ಗಾಳಿ ಬೀಸಿತು ಎಂದರೆ ಆ ಷೀಟುಗಳೆಲ್ಲಾ ಹಾರಿಹೋಗುತ್ತವೆ, ಯಾವ ತಂದೆತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೋ ಆ ಮಕ್ಕಳು ವಾಪಸ್ಸು ಹೋಗುವುದೇ ಕಷ್ಟ. ಆದ್ದರಿಂದ ಸರ್ಕಾರದವರು ಯೋಚನೆ ಮಾಡಿ ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು ಮತ್ತು ಈ ಕಟ್ಟಡಗಳ ಮ್ಯಾನೇಜ್‌ಮೆಂಟನ್ನು ಇಂಜನಿಯರಿಂಗ್ ಇಲಾಖೆಗೆ ವಹಿಸದೇ ಇದಕ್ಕೇ ಬೇರೆ ಒಬ್ಬ ಅಧಿಕಾರಿಗಳನ್ನು ಇಟ್ಟು ಅವರ ವಶಕ್ಕೆ ವಹಿಸುವುದು ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಮಲೆನಾಡಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ, ಅದರಲ್ಲೂ ಹರಿಜನರ ಮಕ್ಕಳಲ್ಲಿ ವಿದ್ಯಾಭ್ಯಾಸ ಮಾಡುವವರ ಸಂಖ್ಯೆ ಬಹಳ ಕಡಿಮೆಯಾಗಿದೆ, ಏಕೆಂದರೆ ಮಲೆನಾಡಿನಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಬಡವರಿಗೆ ಅನುಕೂಲವಿಲ್ಲ. ಮಲೆನಾಡಿನಲ್ಲಿ ಕಾಫಿ, ಏಲಕ್ಕಿ ಬೆಳೆಯುತಕ್ಕ ಪ್ಲಾಂಟರುಗಳೇ ಜಾಸ್ತಿ. ಅವರೆಲ್ಲರೂ ಶ್ರೀಮಂತರು, ಅವರಿಗೆ ಏನು ಅನುಕೂಲಬೇಕಾದರೂ ಸಿಕ್ಕುತ್ತದೆ. ಆದೇ ಬಡವರಿಗೆ ಯಾವ ಅನುಕೂಲವೂ ಸಿಕ್ಕದೇ ಅವರು ಜೀವನ ಮಾಡುವುದೇ ಬಹಳ ಕಷ್ಟವಾಗಿದೆ. ಆದ್ದರಿಂದ ಅವರ ಮಕ್ಕಳ ವಿದ್ಯಾಭ್ಯಾಸಕ್ಕೂ ಕೂಡ ಬಹಳ ಕಷ್ಟ. ಮೈಸೂರು ದೇಶದ ಮಲೆನಾಡಿನಲ್ಲಿ ನಮ್ಮ ವಿದ್ಯಾ ಇಲಾಖೆಯವರು ಒಂದು ಕಡೆಯಿಂದ ಸರ್ವೇ ಮಾಡಿ ನೋಡಿದರೆ ಈ ಮಕ್ಕಳ ವಿದ್ಯಾಭ್ಯಾಸ ಯಾವ ಮಟ್ಟದಲ್ಲಿ ಜರುಗುತ್ತಾಯಿದೆ ಎಂಬುದು ಅವರಿಗೇ ಗೊತ್ತಾಗುತ್ತದೆ. ನಮ್ಮ ಘನ ಸರ್ಕಾರದವರು ಈ ಮಕ್ಕಳ ವಿದ್ಯಾಭಿವೃದ್ಧಿಗಾಗಿ ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾಯಿರುವುದು ನಮಗೆಲ್ಲರಿಗೂ ಗೊತ್ತಿದೆ. ಬೇಕಾದಷ್ಟು ಹಣ ಖರ್ಚು ಮಾಡುತ್ತಾ ಇದ್ದಾರೆ. ಬೇಕಾದಷ್ಟು ಸಹಾಯವನ್ನು ನೀಡುತ್ತಾಯಿದ್ದಾರೆ. ಆದರೆ ಈ ಸಹಾಯ ಎಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲವಿಲ್ಲವೋ ಅಂಥ ಕಡೆಗೆ ಸಿಕ್ಕದೆ ಜನರು ಬಹಳವಾಗಿ ಒದ್ದಾಡುತ್ತಾಯಿದ್ದಾರೆ ಎಂದು ನಾನು ಹೇಳುತ್ತೇನೆ. ಮಿಡ್ಲ್‌ಸ್ಕೂಲು, ಹೈಸ್ಕೂಲು, ಪ್ರೈಮರೀ ಸ್ಕೂಲುಗಳನ್ನು ಕೊಡುವಾಗ ಮೈಸೂರು ದೇಶದ ಮಲೆನಾಡಿನ ಭಾಗವನ್ನು ಬಿಟ್ಟು ಇತರ ಭಾಗಗಳಿಗೇ ಹೆಚ್ಚಾಗಿ ಕೊಡುತ್ತಾ ಇದ್ದೀರಿ. ಒಂದು ಸರ್ವೇ ಮಾಡಿ ನೋಡಿದರೆ ಅದು ತಮಗೇ ಗೊತ್ತಾಗುತ್ತದೆ. ಆದ್ದರಿಂದ ಈ ವರ್ಷವಾದರೂ ಹೈಸ್ಕೂಲುಗಳನ್ನು ಕೊಡುವಾಗ ಮಲೆನಾಡಿನ ಕಡೆಗೆ ಹೆಚ್ಚು ಗಮನ ಕೊಡುತ್ತೀರೆಂದು ನಂಬಿದ್ದೇನೆ. ಒಟ್ಟಿನಲ್ಲಿ ಮಲೆನಾಡಿನ ಮಕ್ಕಳ ವಿದ್ಯಾಭ್ಯಾಸಕ್ಕೆ ಸರ್ಕಾರದವರು ಇನ್ನು ಹೆಚ್ಚು ಹಣಖರ್ಚುಮಾಡಿ ಪ್ರೈಮರಿ, ಮಿಡ್ಲ್, ಹೈಸ್ಕೂಲು ಆದಿಯಾಗಿ ಕಡ್ಡಾಯ ಶಿಕ್ಷಣಕ್ಕೆ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಶ್ರೀಮಾನ್ ತಿಮ್ಮಪ್ಪಗೌಡರು ಮಾತನಾಡುತ್ತಾ ಮಿಡ್ಲ್ ಸ್ಕೂಲ್ ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ಪುನಃ ಜಾರಿಗೆ ತರಬೇಕೆಂದು ಹೇಳಿದರು. ಅದನ್ನು ನಾನು ಬಹಳ ತೀವ್ರವಾಗಿ ವಿರೋಧಿಸುತ್ತೇನೆ. ಕೆಲವು ವರ್ಷಗಳ ಹಿಂದೆ ಈ ವಿಚಾರದಲ್ಲಿ ಕೂಲಂಕಷವಾಗಿ ಯೋಚನೆ ಮಾಡಿ ಈ ಪರೀಕ್ಷೆಯನ್ನು ತೆಗೆದುಹಾಕುವುದರ ಅವಶ್ಯಕತೆಯನ್ನು ಮನಗಂಡು ತೆಗೆದುಹಾಕಲಾಯಿತು. ಇದು ಈಗಾಗಲೇ ನಾಲ್ಕಾರು ವರ್ಷಗಳಿಂದ ಜಾರಿಯಲ್ಲಿ ಬಂದಿದೆ. ಹಿಂದೆ ಎಲ್. ಎಸ್. ಪರೀಕ್ಷೆಯನ್ನಿಟ್ಟುಕೊಂಡಿದ್ದಾಗ ಪ್ರಾಥಮಿಕ ಪಾಠಶಾಲೆಗಳಿಗೆ ಎಲ್. ಎಸ್. ಪರೀಕ್ಷೆ ಪಾಸ್‌ಆದವರನ್ನು ಉಪಾಧ್ಯಾಯರುಗಳನ್ನಾಗಿ ನೇಮಕ ಮಾಡಿಕೊಳ್ಳುತ್ತಾಯಿದ್ದರು. ಆದರೆ ಈಗಿನ ಕ್ರಮದ ಪ್ರಕಾರ ಕೊನೆ ಪಕ್ಷ ಎಸ್. ಎಸ್. ಎಲ್. ಸಿ. ಆದರೂ ಆಗಿರಬೇಕು, ಎಂದು ಹೇಳಿ ವಿಧಾಯಕವಾಗಿರುವ ಸಂದರ್ಭದಲ್ಲಿ ಮಿಡ್ಲ್‌ಸ್ಕೂಲ್ ಎಲ್. ಎಸ್. ಪರೀಕ್ಷೆಯನ್ನು ಪುನಃ ಜಾರಿಗೆ ತರುವುದು ಖಂಡಿತವಾಗಿಯೂ ಸಾಧುವಾದುದಲ್ಲ. ಪಟ್ಟಣದಲ್ಲಿ ಇರತಕ್ಕವರಿಗೆ ಮತ್ತು ಮಕ್ಕಳನ್ನು ಓದಿಸಿ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಮನೋಭಾವವಿರತಕ್ಕವರಿಗೆ ಮತ್ತು ಮಕ್ಕಳನ್ನು ಓದಿಸುವುದಕ್ಕೆ ಅನುಕೂಲತೆ ಇರತಕ್ಕವರಿಗೆ ಮಿಡ್ಲ್‌ಸ್ಕೂಲ್ ಪರೀಕ್ಷೆಯಲ್ಲಿ ಫೇಲ್ ಆದರೂ ಸಹ ಓದಿಸತಕ್ಕ ಶಕ್ತಿಯಿರುತ್ತದೆ, ಓದಿಸುತ್ತಾರೆ. ಆದರೆ ಗ್ರಾಮಾಂತರಗಳಲ್ಲಿ ಓದುತ್ತಾಯಿರತಕ್ಕ ಮಕ್ಕಳಿಗೆ ಒಂದು ವೇಳೆ ಅವರೇನಾದರೂ ಎಲ್. ಎಸ್. ಪರೀಕ್ಷೆಗೆ ಕಟ್ಟಿ ಫೇಲ್ ಆದರು ಎಂದರೆ ಅವರ ವಿದ್ಯಾಭ್ಯಾಸ ಅಲ್ಲಿಗೇ ಮುಗಿಯಿತು. ಖಂಡಿತವಾಗಿಯೂ ಅವರ ವಿದ್ಯಾಭ್ಯಾಸವನ್ನು ಮುಂದುವರಿಸುವುದಿಲ್ಲ. ಗ್ರಾಮಾಂತರಗಳಲ್ಲಿರತಕ್ಕ ಜನಗಳ ಮನೋಭಾವ ನಮಗೆ ಗೊತ್ತು. ಇತ್ತೀಚೆಗೆ ಸರ್ಕಾರದವರು ಕೊನೆ ಪಕ್ಷ ಹೈಸ್ಕೂಲು ಮಟ್ಟದ ವಿದ್ಯಾಭ್ಯಾಸವನ್ನಾದರೂ ಮಕ್ಕಳಿಗೆ ಕೊಡಬೇಕಾದ್ದು ಅಗತ್ಯ ಎಂದು ಭಾವಿಸಿ ದೇಶಾದ್ಯಂತ ಅನೇಕ ಹೈಸ್ಕೂಲುಗಳನ್ನು ಸ್ಥಾಪನೆ ಮಾಡಿದ್ದಾರೆ. ಆದ್ದರಿಂದ ಮಿಡ್ಲ್ ಸ್ಕೂಲ್ ಪರೀಕ್ಷೆಯನ್ನು ಪುನಃ ಜಾರಿಗೆ ತರದೇ ಈಗಿರುವಂತೆಯೇ ಮುಂದುವರಿಸಿಕೊಂಡು ಹೋಗುವುದು ಸೂಕ್ತವಾಗಿದೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಸ್ವಾಮಿ, ಎರಡು ಅಂಶಗಳನ್ನು ಮಾತ್ರ ಮಾನ್ಯ ವಿದ್ಯಾ ಮಂತ್ರಿಗಳ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ಈಗಾಗಲೇ ಕೆಲವು ಸ್ನೇಹಿತರು ಬಹಳವಾಗಿ ಹೇಳಿದ್ದಾರೆ. ಮುನಿಸಿಪಲ್ ಮತ್ತು ಜಿಲ್ಲಾ ಬೋರ್ಡು ಹೈಸ್ಕೂಲುಗಳನ್ನು ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳಬೇಕು. ಹಾಗೆ ತೆಗೆದುಕೊಳ್ಳದೆ ಹೋದ ಪಕ್ಷದಲ್ಲಿ ಅವುಗಳನ್ನು ನಡೆಸುವುದಕ್ಕೆ ಅಸಾಧ್ಯವೆಂಬ ಅಂಶವನ್ನು ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಯಲಹಂಕ ಮಾಧ್ಯಮಿಕ ಶಾಲೆಗೆ ಕಟ್ಟಡದ ಅವಶ್ಯಕತೆ ಇದೆ ಎಂದು ಹೋದ ವರ್ಷವೇ ಹೇಳಿದ್ದೆ. ಹಾಲಿ ಈ ಸ್ಕೂಲು ಅಲ್ಲಿರುವ ಮುಸಾಫರ್‌ಖಾನೆಯಲ್ಲಿ ನಡೆಯುತ್ತಿದೆ. ಕೊಠಡಿಗಳು ಬಹಳ ಚಿಕ್ಕವು. ಹುಡುಗರಿಗೆ ಸ್ಥಳವೇ ಸಾಲದು. ಇವೊತ್ತಿನವರೆಗೂ ಕಟ್ಟಡದ ಕೆಲಸವನ್ನು ಮಾಡಲು ಜಾರಿಗೆ ಕೊಟ್ಟಿಲ್ಲ. ಮುನಿಸಿಪಾಲಿಟಿಯವರೇನೋ ಹಣವನ್ನು ಖರ್ಚುಮಾಡಿ 8 ಎಕರೆ ಜಮೀನನ್ನು ಅಕ್ವೈರ್ ಮಾಡಿದ್ದಾರೆ. ಹೈಸ್ಕೂಲು ಮತ್ತು ಮಿಡಲ್‌ಸ್ಕೂಲು ಎರಡು ಕಟ್ಟಡಗಳಿಗೂ ಬೇಕಾಗುವಷ್ಟು ಸ್ಥಳವಿದೆ, ಈಗಿರುವ ಕಟ್ಟಡದಲ್ಲಿ ಬೇಸಿಗೆಯಲ್ಲಿ ಪಾಠ ಪ್ರವಚನಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಆದುದರಿಂದ ಸ್ಕೂಲು ಕಟ್ಟಡ ಜಾಗ್ರತೆಯಾಗಿ ತಯಾರಾಗಲು ಏರ್ಪಾಡು ಮಾಡಬೇಕು.

Social Welfare Board ಗೆ ಒಂದು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಒದಗಿಸಿದ್ದಾರೆ. ಅಲ್ಲಲ್ಲಿ ನರ್ಸರಿ ಶಾಲೆಗಳನ್ನು ತೆರೆದು ಸಣ್ಣ ಬಾಲಕರಿಗೆ ಅದರಲ್ಲೂ ಸ್ವಲ್ಪ ಕಡಮೆ ಮಟ್ಟದಲ್ಲಿರುವವರಿಗೆ ಅನುಕೂಲ ಮಾಡಿಕೊಡಬೇಕು.

ಈ ರೀತಿಯಲ್ಲಿ ನರ್ಸರಿ ಶಾಲೆಗಳನ್ನು ತೆರೆಯುವುದರಿಂದ ಹಳ್ಳಿಗಾಡಿನ ಜನರಿಗೆ ಬಹಳ ಪ್ರಯೋಜನವಾಗುತ್ತದೆ. ಅದಕ್ಕಾಗಿ ಬರತಕ್ಕ social workers

(ಶ್ರೀ ಕೆ. ವಿ. ಬೈರೇಗೌಡ).

ಎಲ್ಲರೂ S.S.L.C. ಮಟ್ಟದ ಶಿಕ್ಷಣವನ್ನು ಪಡೆದಿರಬೇಕು. ಇಂಥಾ ವಿದ್ಯಾವಂತರಾದ ಕಾರ್ಯಕರ್ತರು ಬಂದರೆ ಹಳ್ಳಿಗಾಡಿನ ಮಕ್ಕಳಿಗೆ ನರ್ಸರಿ ಶಾಲೆಗಳಲ್ಲಿಯೇ ವಿದ್ಯಾಭ್ಯಾಸವೂ ಸರಿಯಾಗಿ ದೊರಕುತ್ತದೆ. ಈ ಶಾಲೆಗಳನ್ನು ತೆರೆಯಲು ಎಷ್ಟು ಖರ್ಚಾದರೂ ಕೂಡ ನಾವು ಹಿಂಜರಿಯಬಾರದು. ಇದರಿಂದ ಬಹಳ ಒಳ್ಳೆಯದಾಗುವುದರಿಂದ Social Welfare Board ಗೆ ಒದಗಿಸಿರುವ ಹಣವನ್ನು ಇಂತಹ ಕಾರ್ಯಗಳಿಗೆ ಉಪಯೋಗಿಸಬೇಕೆಂದು ತಿಳಿಸುತ್ತೇನೆ.

ವಿಶ್ವವಿದ್ಯಾನಿಲಯದಲ್ಲಿ ರಾಜಕೀಯ ತುಂಬಿದೆ. ದೇಶದ ಭದ್ರತೆಗೆ ವಿದ್ಯಾಭ್ಯಾಸದ ಮೇಲೆನಿಲ್ಲಬೇಕು. ಪ್ರತಿಯೊಂದು ಕಡೆಯೂ ರಾಜಕೀಯ ಜಾಸ್ತಿಯಾಗಿದೆ ವಿಶ್ವವಿದ್ಯಾನಿಲಯದಲ್ಲಿಯೂ ರಾಜಕೀಯ ಹೊಕ್ಕಿರುವುದು ವಿಷಾದದ ಸಂಗತಿ. ವಿದ್ಯಾಸಂಸ್ಥೆಗಳಲ್ಲಿ ರಾಜಕೀಯವು ಹೋದ ಹೊರತು ಅದರ ಆಡಳಿತ ಸರಿ ಹೋಗುವುದಿಲ್ಲ. ಅದುದರಿಂದ ವಿದ್ಯಾ ಸಂಸ್ಥೆಗಳಲ್ಲಿಯೂ, ವಿಶ್ವವಿದ್ಯಾನಿಲಯಗಳಲ್ಲಿಯೂ ರಾಜಕೀಯವಿರುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

Mr. DEPUTY SPEAKER.—This House has fixed a time limit and many Hon'ble Members have made important observations. The Hon'ble Minister will require at least ten minutes to reply. We will have to close the discussion on this demand at 4-30. I cannot help it. The Hon'ble Minister will now reply.

*ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅದರಲ್ಲಿ ಮುಖ್ಯವಾದ ಕೆಲವು ಪ್ರಶ್ನೆಗಳಿಗೆ ನಾನು ಜವಾಬು ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಮೊದಲನೆಯದಾಗಿ ವಿಶ್ವವಿದ್ಯಾನಿಲಯದಲ್ಲಿನ ಲೆಕ್ಚರರುಗಳು, ಅಸಿಸ್ಟೆಂಟ್ ಪ್ರೊಫೆಸರುಗಳು ಇತ್ಯಾದಿಗಳ ವಿಷಯ.

[SRI A. V. NARASIMHA REDDY in the Chair].

ಇದಕ್ಕೆ ಈಗಾಗಲೇ ಮುಖ್ಯ ಮಂತ್ರಿಗಳು ಜವಾಬು ಕೊಟ್ಟಿದ್ದಾರೆ. ಹಾಗೇನಾದರೂ ಅನ್ಯಾಯವಾಗಿದ್ದರೆ ಯಾರಿಗೆ ಅನ್ಯಾಯವಾಗಿದೆಯೋ ಅವರಿಂದ ಒಂದು ಅರ್ಜಿಯೂ ಬಂದಿಲ್ಲ; ನೇರವಾಗಿಯೂ ಬಂದಿಲ್ಲ; ವೈಸ್ ಛಾನ್ಸಲರ ಮುಖಾಂತರವೂ ಬಂದಿಲ್ಲ. ಆ ರೀತಿ ಅರ್ಜಿ ಬಂದರೆ ಅದನ್ನು ಪರಿಶೀಲನೆ ಮಾಡಲು ಸಿದ್ಧರಾಗಿದ್ದೇವೆ.

ಮತ್ತೆ Compulsory education ವಿಷಯದಲ್ಲಿ ಕೆಲವು ಸದಸ್ಯರು ಬಹಳವಾಗಿ ಮಾತನಾಡಿದರು. ನಾನು ಒಂದು ವಿಷಯವನ್ನು ಮಾತ್ರ ಅವರ ಗಮನಕ್ಕೆ ತರಲು ಇಷ್ಟ ಪಡುತ್ತೇನೆ. Compulsory education ಎಂದರೆ ಎಲ್ಲೆಲ್ಲಿ ಜನಗಳು ವಿದ್ಯಾಭ್ಯಾಸವನ್ನು ಹೊಂದಲು ಮುಂದೆ ಬರುವುದಿಲ್ಲವೋ ಅಲ್ಲೆಲ್ಲ ಕಡ್ಡಾಯವಾಗಿ ವಿದ್ಯಾಭ್ಯಾಸ ಮಾಡಿಸುವುದು ಅತ್ಯಾವಶ್ಯಕ. ಆದರೆ ಈಗ ಪರಿಸ್ಥಿತಿ ಏನಾಗಿದೆ ಎಂದು ನೋಡೋಣ. ವಿದ್ಯಾಭ್ಯಾಸ ಪಡೆಯಲು ಮುಂದೆ ಬರುವವರಿಗೇ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಕಷ್ಟವಾಗಿದೆ. ಮಾನ್ಯ ಸದಸ್ಯರಿಗೆಲ್ಲ ಗೊತ್ತಿರುವ ಹಾಗೆ ಬಹಳ ಕಡೆಗಳಿಂದ ಜನರು ನಮಗೊಂದು ಸ್ಕೂಲು ಕೊಡಿ ಎಂದು ಬರುತ್ತಿದ್ದಾರೆ. ಆದರೆ ಹಾಗೆ ಎಲ್ಲ ಕಡೆಗಳಲ್ಲಿಯೂ ಸ್ಕೂಲುಗಳನ್ನು ಕೊಡುವುದಕ್ಕಾಗಿಲ್ಲ! ಈಗ ಪ್ರಜೆಗಳೆಲ್ಲರೂ ಜಾಗೃತಿಗೊಂಡಿದ್ದಾರೆ ಮತ್ತು ತಾವಾಗಿಯೇ ವಿದ್ಯಾಭ್ಯಾಸ ಪಡೆಯಲು ಮುಂದೆ ಬರುತ್ತಿದ್ದಾರೆ. ಆದರೆ ಕಾರಣಾಂತರದಿಂದ ಶಾಲೆಗೆ ಬಾಲಕರನ್ನು ಸೇರಿಸದೆ ಇರಬಹುದು. ಕಡಮೆ ಹುಡುಗರಿರುವ ಪಕ್ಷದಲ್ಲಿ Compulsory Scheme ಒತ್ತಾಯ ಮಾಡಿ ತರುವ ಕಾಲಬರುತ್ತದೆ. ಅವಾಗ ಆ ವಿಚಾರ ನೋಡೋಣ. ಈಗ ಇರುವಷ್ಟು ಡಿಮ್ಯಾಂಡಿಗೆ ಒದಗಿಸಿದರೆ ನಾವು ಕೃತಾರ್ಥರಾಗುತ್ತೇವೆಂದು ಹೇಳುತ್ತೇನೆ.

ಉಪಾಧ್ಯಾಯರುಗಳಿಗೆ extension ಕೊಡುವ ವಿಚಾರವನ್ನು ಪ್ರಸ್ತಾಪ ಮಾಡಿದರು. 60 ವರ್ಷದವರೆಗೂ ಉಪಾಧ್ಯಾಯರುಗಳಿಗೆ extension ಕೊಡುತ್ತಿಲ್ಲ; 58 ವರ್ಷದವರೆಗೆ ಮಾತ್ರ ಕೊಟ್ಟಿದೆ. ಯಾರಿಗೆ ಟ್ರೈನಿಂಗ್ ಕ್ವಾಲಿಫಿಕೇಷನ್ ಆಗಿದೆಯೋ, ಯಾರಿಗೆ ಕೆಲಸಮಾಡುವುದಕ್ಕೆ ಇನ್ನೂ ಶಕ್ತಿ ಮತ್ತು ಸಾಮರ್ಥ್ಯಗಳಿವೆಯೋ ಅಂಥವರಿಗೆ ಪಾಠ ಹೇಳಿಕೊಡುವುದಕ್ಕೆ 3 ವರ್ಷಗಳಕಾಲ, ಒಂದೊಂದು ವರ್ಷದಂತೆ extension ಕೊಡಬೇಕು ಎಂದು ಮಾಡಿದೆ. ಇದರ ಮುಖ್ಯ ಉದ್ದೇಶವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. Qualification ಇದ್ದು, 55 ವರ್ಷಗಳ ಮೇಲ್ಪಟ್ಟು ವಯಸ್ಸಾಗಿದ್ದರೆ ಅಂಥವರ qualification, ಮತ್ತು ಅನುಭವ ಇತರರಿಗೆ ದೊರಕಲಿ ಎಂಬ ಉದ್ದೇಶದಿಂದ extension ಕೊಡುತ್ತಿದ್ದೇವೆ. ಉಪಾಧ್ಯಾಯ ವೃತ್ತಿಯಲ್ಲಿರುವವರಿಗೆ ಅನುಭವವಿದ್ದು, ಟ್ರೈನಿಂಗ್ ಆಗಿದ್ದರೆ ಆ ಅನುಭವ ಮತ್ತು ಟ್ರೈನಿಂಗ್ ಇನ್ನೂ ಮೂರು ವರ್ಷಗಳ ಕಾಲ ದೊರಕಲಿ ಎಂಬ ಉದ್ದೇಶದಿಂದ ಕೊಟ್ಟಿದೆ. ಇನ್ಸ್ಪೆಕ್ಟರಾಗಿರುವವರು ಟ್ರೈನಿಂಗ್ ಪಡೆದಿದ್ದು ಅವರನ್ನೂ ಉಪಾಧ್ಯಾಯರಂತೆ ಉಪಯೋಗಿಸಿಕೊಂಡು 3 ವರ್ಷಗಳಕಾಲ extension ಕೊಡುವುದಕ್ಕೆ ಅಡ್ಡಿ ಇಲ್ಲ, ಈ ಇಲಾಖೆಯವರಿಗೆ ಕೊಟ್ಟಿರುವ ವಿನಾಯಿತಿಯಿಂದ ಇತರ ಇಲಾಖೆಯವರಿಗೆ ಅಸಮಾಧಾನವಾಗಿದೆ. ಆದರೆ ಅವರ ಮಕ್ಕಳಿಗೇ ಸರಿಯಾದ ವಿದ್ಯಾಭ್ಯಾಸವಾಗಬೇಕು ಎಂದು ಟ್ರೈನಿಂಗ್ ಆಗಿರುವವರು, ಶಕ್ತಿ ಇರುವವರು, ಮಾತ್ರ ಉಪಾಧ್ಯಾಯರುಗಳಾಗಿ ಮೂರು ವರ್ಷ ಕಾಲ ಹೆಚ್ಚಿಗೆ ಇರುವುದಕ್ಕೆ ಅವಕಾಶ ಕೊಟ್ಟಿದೆ ಎರಡು ವಿವರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಭೂದಾನದ ವಿಷಯದಲ್ಲಿ ಮಾನ್ಯ ಸದಸ್ಯರನೇಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯದಲ್ಲಿ ಸರ್ಕಾರದವರು ಬಹಳ ಶ್ರದ್ಧೆ ವಹಿಸಿಕೊಂಡು, ಈ ಜಮೀನು ಪೋಲಾಗಬಾರದು, ಅದರಲ್ಲಿ ಉತ್ಪತ್ತಿ ಸರಿಯಾಗಿ ಆಗಬೇಕು, ಯಾವ ಕೆಲಸಕ್ಕಾಗಿ ಕೊಟ್ಟಿದ್ದಾರೆಯೋ ಅದು ನೆರವೇರಿ ಇದೂ ಒಂದು ಆಧಾರವಾಗಿರಬೇಕು, ವಿದ್ಯಾರ್ಥಿಗಳಿಗೆ ಮತ್ತು ಉಪಾಧ್ಯಾಯರುಗಳಿಗೆ ಅನುಕೂಲವಾಗಬೇಕು ಎಂಬ ಕಾರಣಗಳಿಂದ ಒಬ್ಬ Land Utilisation Officer ನೇಮಕ ಮಾಡಿದ್ದೇವೆ. ಮತ್ತು ವ್ಯವಸಾಯ ಇಲಾಖೆಯವರು ಶ್ರದ್ಧೆವಹಿಸಿ ಮುಂದೆ ಬಂದಿದ್ದಾರೆ. ಎಲ್ಲೆಲ್ಲಿ ಸ್ಕೂಲುಗಳಿವೆಯೋ, ಎಲ್ಲೆಲ್ಲ ಭೂಮಿ ಸಿಕ್ಕಿದೆಯೋ ಅಲ್ಲೆಲ್ಲ, ಟ್ರೈನಿಂಗ್ ಆಗಿರತಕ್ಕ ಅಗ್ರಿಕಲ್ಚರಲ್ ಇನ್ಸ್ಪೆಕ್ಟರುಗಳನ್ನು ಪಾಠ ಪ್ರವಚನಗಳನ್ನು ಹೇಳಿಕೊಡುವುದಕ್ಕೆ ಕಳುಹಿಸುತ್ತೇವೆ ಎಂದು ತಿಳಿಸಿದ್ದಾರೆ. ಅಗ್ರಿಕಲ್ಚರಲ್ ಇನ್ಸ್ಪೆಕ್ಟರುಗಳು ಇದುವರೆಗೂ ಯಾವ ಕೆಲಸವಿತ್ತೋ ಅದನ್ನೂ ಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಅವರನ್ನು ಉಪಯೋಗಿಸಿಕೊಂಡು ಕೆಲಸ ಮಾಡುತ್ತೇವೆ. ಈಗಾಗಲೇ 40 per cent of

schools have been covered and 60 per cent of the schools have yet to be covered. ಇದನ್ನು ಸುವ್ಯವಸ್ಥಿತ ರೀತಿಯಲ್ಲಿ ತಂದು ಬಂದಿರುವ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡು ಮುಂದುವರಿಯಲು ಬೇಕಾದ ಕಾರ್ಯ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ.

ಇಂಟರ್‌ಮೀಡಿಯಟ್ ಕಾಲೇಜನ್ನು ಸ್ಥಾಪನೆ ಮಾಡತಕ್ಕ ವಿಷಯದಲ್ಲಿ ತಿಪಟೂರಿನಿಂದ ಬಹಳ ಒತ್ತಾಯ ಬರುತ್ತಿದೆ. ಈಗ ಮಾನ್ಯ ಸದಸ್ಯರಿಗೆ ತಿಳಿದಿರುವ ಹಾಗೆ University Draft Bill ಸೆಲೆಕ್ಟ್ ಕಮಿಟಿಯ ಮುಂದೆ ಇದೆ. ಅದರ ಪ್ರಕಾರ ಇಂಟರ್‌ಮೀಡಿಯಟ್ ಕಾಲೇಜುಗಳು ಇರುವುದಿಲ್ಲ. ಇದು ತೀರ್ಮಾನವಾಗುವವರೆಗೂ ಹೊಸದಾಗಿ ಇಂಟರ್‌ಮೀಡಿಯಟ್ ಕಾಲೇಜುಗಳನ್ನು ಸ್ಥಾಪನೆ ಮಾಡುವುದು ಸೂಕ್ತವಲ್ಲ. ಆದುದರಿಂದ ಈ ವಿಚಾರವನ್ನು ಸ್ವಲ್ಪ ಹಿಂದೆ ಬಿಡುವುದು ಸೂಕ್ತ. ಮತ್ತು ಹೊಸದಾಗಿ ಕಾಲೇಜುಗಳನ್ನು ಸ್ಥಾಪನೆ ಮಾಡಬೇಕಾದರೆ ನಾವು ಯಾವ ಕ್ರಮವನ್ನನುಸರಿಸಬೇಕು ಎನ್ನುವುದನ್ನು ಕೂಡ ಈ ಸಭೆಯವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಮೈಸೂರಿನಲ್ಲಿ ಕಾರಣಾಂತರದಿಂದ ಅನೇಕ ಸರ್ಕಾರಿ ಕಾಲೇಜುಗಳಿವೆ. ಈಗ 8-10 ವರ್ಷಗಳಿಂದ ಅನೇಕ ಕಾಲೇಜುಗಳಾಗಿವೆ. ಇದೇ ಕಾಲದಲ್ಲಿ ಮದರಾಸಿನ ವಿಷಯ ತೆಗೆದುಕೊಂಡರೆ ಅಲ್ಲಿ 44 ಕಾಲೇಜುಗಳಾಗಿವೆ. ಅವುಗಳನ್ನು ಸ್ಥಾಪನೆ ಮಾಡಬೇಕಾದರೆ ಸರ್ಕಾರದ ಸಹಾಯ ಬಹಳ ಕಡಿಮೆ. ಹೆಚ್ಚಾಗಿ ಸಾರ್ವಜನಿಕರು ಭಾಗ ವಹಿಸಿಕೊಂಡದ್ದರಿಂದ ಅಲ್ಲಿ ಕಾಲೇಜು ವಿದ್ಯಾಭ್ಯಾಸ ಜಾಸ್ತಿಯಾಗಿದೆ. ಡಾಕ್ಟರ್ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರ ಸಂಗಡ ಚರ್ಚೆ ಮಾಡುವಾಗ ಈ ವಿಷಯ ತಿಳಿಯಿತು. ಪ್ರತಿಯೊಂದು ಕಾಲೇಜು ಸ್ಥಾಪನೆ ಯಾಗಬೇಕಾದರೂ 5 ಲಕ್ಷ ರೂಪಾಯಿ equipment ಗಾಗಿ ಕೊಡಬೇಕು ಮತ್ತು 5 ಲಕ್ಷ ರೂಪಾಯಿ ಕೊಡಬೇಕು. ಈ ಕಾರಣದಿಂದ ಅಲ್ಲಿಯ ಕಾಲೇಜುಗಳು ಸುವ್ಯವಸ್ಥಿತ ರೀತಿಯಲ್ಲಿ ಮುಂದುವರಿಯುವುದಕ್ಕೆ ಅವಕಾಶವಾಗಿದೆ. ಸರ್ಕಾರದ ಮೇಲೆ ಅದರ ಹೊರೆ ಕಡಿಮೆ. ಹೀಗೆ ಸರ್ಕಾರದ ಮತ್ತು ವಿಶ್ವವಿದ್ಯಾನಿಲಯದ ಮೇಲೆ ಕಾಲೇಜು ವಿದ್ಯಾಭ್ಯಾಸದ ಹೊರೆ ಕಡಿಮೆಯಾಗಿರುವುದರಿಂದ Secondary Education ವಿಷಯದಲ್ಲಿ ಹೆಚ್ಚಿಗೆ ಗಮನ ಕೊಡುವುದಕ್ಕೆ ಸಾಧ್ಯವಾಗಿದೆ. ಇಲ್ಲಿ ಕಾಲೇಜುಗಳಿಗೆ ಕೊಡತಕ್ಕ ಸಹಾಯವನ್ನೂ, ಮದರಾಸಿನಲ್ಲಿ ಕಾಲೇಜುಗಳಿಗೆ ಕೊಡತಕ್ಕ ಸಹಾಯವನ್ನೂ ಹೋಲಿಕೆ ಮಾಡಿ ನೋಡಿದರೆ ಅಲ್ಲಿಗಿಂತಲೂ ಇಲ್ಲಿ ಉತ್ತಮವಾಗಿದೆ. ಸಾರ್ವಜನಿಕರ ಮೇಲೆ ಅವಲಂಬಿಸುವುದನ್ನು ತಪ್ಪಿಸಿ, ಸರ್ಕಾರದ ಮೇಲೆ ಅವಲಂಬಿಸಿದರೆ ಬಹಳ ಕಷ್ಟವಾಗುತ್ತದೆ, ಅಸಾಧ್ಯವಾಗುತ್ತದೆ ಮತ್ತು ಒಳ್ಳೆಯದಲ್ಲವೆಂದು ನನ್ನ ಅಭಿಪ್ರಾಯ. ಕಾಲೇಜು ವಿದ್ಯಾಭ್ಯಾಸಕ್ಕೆ ಸರ್ಕಾರದಿಂದ ಹೆಚ್ಚಿಗೆ ಹಣವನ್ನು ಖರ್ಚುಮಾಡಿದರೆ ಪ್ರೈಮರಿ ಮತ್ತು ಸೆಂಕಡರಿ ವಿದ್ಯಾಭ್ಯಾಸವು ಕುಂಠಿತವಾಗುತ್ತದೆ. ಆದುದರಿಂದ ಈ ವಿಷಯವನ್ನು ವಿಧಾನಸಭೆಯವರು ಖಂಡಿತವಾಗಿಯೂ ಒಪ್ಪುತ್ತಾರೆಂದು ನಂಬಿದ್ದೇನೆ. ಇಷ್ಟು ಹಣ ಉಳಿದರೆ ಅದನ್ನು ಉಳಿಸಿದರೆ, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರದಲ್ಲಿ ಸರ್ಕಾರದವರ ನೀತಿ ಏನಿದೆಯೋ ಅದನ್ನು ಒಪ್ಪುತ್ತಾರೆಂದು ನಂಬಿದ್ದೇನೆ.

ಇನ್ನು Occupational Institutions ವಿಚಾರ. ಈಗ ಸಾಮಾನ್ಯವಾಗಿ ಎಲ್ಲ ಜಿಲ್ಲೆಗಳಲ್ಲಿಯೂ ಒಂದೊಂದು Occupational Institute ಇರುವುದು ಒಳ್ಳೆಯದೆನ್ನುವ ದೃಷ್ಟಿಯಿಂದ ಈಗಾಗಲೇ ಯಾವ ಯಾವ ಜಿಲ್ಲೆಗಳಲ್ಲಿ ಈ ಶಾಲೆಗಳಿವೆಯೋ ಅವನ್ನು ಬಿಟ್ಟು ಉಳಿದ ಜಿಲ್ಲೆಗಳಲ್ಲಿ ಕೊಡಬೇಕೆಂಬುದು ಸರ್ಕಾರದ ಉದ್ದೇಶ. ಈಗ ಶಾಲೆಗಳಿರುವ ಜಿಲ್ಲೆಗಳವರು ಮುಂದೆ ಬಂದ ರೀತಿಯಲ್ಲಿ ಬಾಕಿ ಜಿಲ್ಲೆಗಳವರೂ ಮುಂದೆ ಬಂದರೆ ಬಹಳ ಜಾಗ್ರತೆಯಾಗಿ ಶಾಲೆಗಳನ್ನು ಪ್ರಾರಂಭಿಸಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಕಟ್ಟಡವನ್ನು ಐದಾರು ವರ್ಷಗಳ ಹಿಂದೆಯೇ ಬಿಟ್ಟುಕೊಟ್ಟಿದ್ದಾರೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಮತ್ತೆ ಇದೇ ಸಂದರ್ಭದಲ್ಲಿ ಚಿಕ್ಕಮಗಳೂರು ಜಿಲ್ಲೆಯನ್ನು ಪ್ರತಿನಿಧಿಸಿ ಶ್ರೀಮತಿ ಸುಬ್ಬಮ್ಮನವರು ಉದಾರವಾಗಿ ಏನೇನು ಸಹಾಯಬೇಕೋ ಆ ಸಹಾಯವನ್ನೆಲ್ಲ ಮಾಡುವುದಕ್ಕೆ ಸಿದ್ಧರಾಗಿದ್ದೇವೆಂದು ಹೇಳಿದುದನ್ನು ಮೆಚ್ಚಿಕೊಳ್ಳಬೇಕಾಗಿದೆ. ಇದರಿಂದ ಹೆಚ್ಚು ಸಹಾಯ ಎಲ್ಲಿಂದ ಬರುತ್ತದೆಯೋ ಅಲ್ಲಿಗೆ ಮೊದಲು Occupational Institute ಬರುತ್ತದೆ ಎಂದು ಹೇಳಬಹುದಾಗಿದೆ.

Hindi part-time teachers ವಿಷಯವನ್ನು ಕುರಿತು ಬಹಳವಾಗಿ ಹೇಳಿದರು. ಒಬ್ಬ ಉಪಾಧ್ಯಾಯರಿಗೆ ಪೂರ್ತಿಯಾಗಿ ಆಗುವಷ್ಟು ಕೆಲಸ ಇದ್ದರೆ ಆಗ full-time ಉಪಾಧ್ಯಾಯರನ್ನು ತೆಗೆದುಕೊಳ್ಳುವುದು ಸಾಧುವಾದದ್ದು ಎಂದು ಹೇಳುತ್ತೇನೆ. ಆದರೆ ದಿವಸಕ್ಕೆ 3-4 ಘಂಟೆಗಳ ಕೆಲಸಮಾತ್ರವಿದ್ದರೆ ಆಗ full time ಉಪಾಧ್ಯಾಯರುಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಪೂರ್ತಿ ಕೆಲಸವಿರತಕ್ಕ ಕಡೆ full-time ಉಪಾಧ್ಯಾಯರುಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇವೆ. ಹತ್ತು, ಹದಿನೈದು ವರ್ಷಗಳ ಕಾಲ part-time teachers ಆಗಿ ಕೆಲಸಮಾಡಿದ್ದಾರೆಂದು ಹೇಳಿದರು. ಅದಕ್ಕೇನಾದರೂ ಪರಿಹಾರವನ್ನೊದಗಿಸುವುದಕ್ಕೆ ಸಾಧ್ಯವಿದ್ದರೆ ಯೋಚನೆಮಾಡುತ್ತೇನೆ.

ಆಮೇಲೆ ದೇವಸ್ಥಾನಗಳಲ್ಲಿ ಸ್ಕೂಲುಗಳು ನಡೆಯುತ್ತಿವೆ, ಅಲ್ಲಿಹರಿಜನರಿಗೆ ಅವಕಾಶವಿಲ್ಲವೆಂಬ ವಿಷಯವನ್ನು ಗಮನಕ್ಕೆ ತಂದಿದ್ದಾರೆ. ದೇವಸ್ಥಾನದಲ್ಲಿ ಸ್ಕೂಲು ಮಾಡತಕ್ಕದ್ದು ಕೆಟ್ಟದ್ದಲ್ಲ. ಅನೇಕ ಕಡೆ ಹಿಂದಿನಿಂದಲೂ ದೇವಸ್ಥಾನಗಳಲ್ಲಿ ನಡೆಯುತ್ತಿದೆ. ಇತರ ಕಡೆಗಳಲ್ಲಿಯೂ ನಡೆಯುತ್ತಿದೆ. ಅದರ ಜೊತೆಗೆ ಹರಿಜನ ವಿದ್ಯಾರ್ಥಿಗಳನ್ನೂ ದೇವಸ್ಥಾನದೊಳಕ್ಕೆ ಬಿಡಿಸುವುದು ಒಳ್ಳೆಯ ಪದ್ಧತಿ. ಆದುದರಿಂದ ಎಲ್ಲೆಲ್ಲಿ ಈ ಕಷ್ಟದ ಅನುಭವ ಉಂಟಾಗಿದೆಯೋ ಅದನ್ನು ಪರಿಶೀಲನೆಮಾಡಿ ಪರಿಹಾರ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಸ್ಕೂಲು ಕಟ್ಟಡಗಳ ವಿಷಯದಲ್ಲಿ ಒಂದು ಮುಖ್ಯವಾದ ವಿಷಯವನ್ನು ಸಭೆಯ ಗಮನಕ್ಕೆ ತರುತ್ತೇನೆ. Cheap but durable buildings, new type buildings ಕಟ್ಟುವುದಕ್ಕೆ ಪ್ರಾರಂಭಮಾಡಿದ್ದೇವೆ. ಅದಕ್ಕೆ ಒಂದು ಕೊಠಡಿಗೆ 1,500 ರೂಪಾಯಿ ಮಾತ್ರ ಖರ್ಚಾಗುತ್ತದೆ. ಈಗ 500 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ ಇನ್ನುಮುಂದೆ ಸರ್ಕಾರದವರು 750 ರೂಪಾಯಿಗಳನ್ನೂ, ಖಾಸಗಿಯವರು 750 ರೂಪಾಯಿಗಳನ್ನೂ ಕೊಟ್ಟರೆ ಜಾಗ್ರತೆಯಾಗಿ ಕಟ್ಟಡ ಪೂರ್ತಿಯಾಗುತ್ತದೆಂದು ಈ ಸಭೆಯ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಉಳಿದ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳಿ ಈ ಡಿಮ್ಯಾಂಡಿಗೆ ಸಭೆಯವರು ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

4-30 P.M.

Mr. CHAIRMAN (SRI A. V. NARASIMHA REDDY).—The question is :

"That a sum not exceeding Rs. 4,87,53,000 be granted to the Government to defray the charges which will come in course of payment during the year ending 31st day of March 1957, in respect of 'Education'."

The motion was adopted.

DEMAND No. 28—MISCELLANEOUS DEPARTMENTS.

47. MISCELLANEOUS DEPARTMENTS.

Mr. CHAIRMAN (SRI A. V. NARASIMHA REDDY).—The motion moved :

"That a sum not exceeding Rs. 45,04,100 be granted to the Government to defray the charges which will come in course of payment during the year ending 31st day of March 1957, in respect of 'Miscellaneous Departments'."

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.-ನರಸೀಪುರ).—ಸ್ವಾಮಿ, ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ. ಇಂಗ್ಲೆಂಡಿನಲ್ಲಿ ಟ್ರೇಡ್ ಕಮಿಷನರ ಆಫೀಸೆಂಬುದೊಂದು ಇದೆ. ಅದು ಎಲ್ಲರಿಗೂ ಗೊತ್ತಿದೆ. ಬಹಳ ದಿವಸಗಳಿಂದಲೂ ಇದೆ, 1888ರಿಂದ ಅಥವಾ ಅದರ ಹಿಂದಿನಿಂದ ಇರಬಹುದು, ಖಚಿತವಾಗಿ ಗೊತ್ತಿಲ್ಲ. ಅಲ್ಲಿ ಆ ಆಫೀಸನ್ನಿಟ್ಟುಕೊಳ್ಳುವುದಕ್ಕೆ ಆಗಿನ ಸನ್ನಿವೇಶ ಬೇರೆಯಾಗಿತ್ತು. ಮೈಸೂರು ರಾಜ್ಯದಲ್ಲಿ ರೆಸಿಡೆಂಟ್ ಇದ್ದರು, ಇಂಗ್ಲೀಷರ ಆಡಳಿತವಿತ್ತು. ವ್ಯಾಪಾರದ ವಿಚಾರದಲ್ಲಿ ಮೇಲ್ವಿಚಾರಣೆಗಾಗಿ ಇರಲಿ ಎಂದು ನಮ್ಮ ದೇಶದ ಹಿತದೃಷ್ಟಿಯಿಂದ ಅಲ್ಲಿ ಆ ಆಫೀಸಿತ್ತು. ಅದಕ್ಕೀಗ ವರ್ಷೇ ವರ್ಷ 1,03,050 ರೂಪಾಯಿಗಳು ಖರ್ಚಾಗುತ್ತಿವೆ. ಇಷ್ಟು ಖರ್ಚು ಮಾಡಿಕೊಂಡು ಅಲ್ಲಿ ಆ ಆಫೀಸನ್ನೇಕೆ ಇಡಬೇಕು ! ಈಗ ಇಂಡಿಯಾ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಇಂಡಿಯಾ ಸರ್ಕಾರದ ಪರವಾಗಿ ಹೈಕಮಿಷನರ ಆಫೀಸು ಲಂಡನ್ನಲ್ಲಿದೆ. ಅವರ ಮುಖಾಂತರ ವ್ಯಾಪಾರ ಮಾಡುವುದಕ್ಕೆ ಅವಕಾಶವಿದೆ, ಹಾಗಿರುವಾಗ ಮೈಸೂರು ಸರ್ಕಾರ ಕನ್ಸಾಲಿಡೇಟೆಡ್ ಫಂಡಿನಿಂದ ಈ ಬಾಬಿಗೇಕೆ ಖರ್ಚುಮಾಡಬೇಕೆಂದು ಪ್ರಶ್ನೆ ಮಾಡುತ್ತೇನೆ.

ಎರಡನೆಯದು ಈ ಸಂಸ್ಥಾನದಲ್ಲಿ ಸಹಸ್ರಾರು ದೇವಸ್ಥಾನಗಳಿವೆ. ಅವಕ್ಕಾಗಿ ಸುಮಾರು 2,35,000 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಈಹೊತ್ತು ಈ ಭಾಗದಲ್ಲಿ ಇದು ಸೇರಿದೆ. ಈ ದೇವಸ್ಥಾನಗಳಲ್ಲಿ ನೌಕರರಿಗೆ ಸಂಬಳ ಹೇಗಿದೆಯೆಂದರೆ ಒಂದು ತಿಂಗಳಿಗೆ ಆರು ಕಾಸು ಸಂಬಳ ಬರುವವರೂ ಇದ್ದಾರೆ, ತಿಂಗಳೆಲ್ಲಾ ಕೆಲಸಮಾಡಿದರೆ ಅವರಿಗೆ ಬರುವ ಬಟವಾಡೆಯಿದು, ಕೆಲವುಕಡೆ ಆರು ರೂಪಾಯಿ ಕೊಟ್ಟರೆ ಅದೇ ಹೆಚ್ಚು ಎಂದು ಕಾಣುತ್ತದೆ. ಇದನ್ನು ಯಾವ ಕಾಲದಲ್ಲಿ ಹೇಗೆ ಗೊತ್ತುಮಾಡಿದರೋ ಏನೋ ತಿಳಿಯದು. ಬಹುಶಃ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 1800ನೆಯ ಇಸವಿಯಲ್ಲಿ ಗೊತ್ತುಮಾಡಿದರೆಂದು ಕಾಣುತ್ತದೆ. ಈ ಸಂಬಳ ಬಹಳ ಕಡಮೆ. ಇದನ್ನು ವಿಮರ್ಶೆಮಾಡಬೇಕೆಂದು ಸಲಹೆಮಾಡುತ್ತೇನೆ.

ಇನ್ನೊಂದು ಬಹಳ ದೇವಸ್ಥಾನಗಳಿಗೆ ಸರ್ಕಾರ ಕೊಡುವ ಕ್ಯಾಷ್ ಗ್ರ್ಯಾಂಟೇ ಮುಖ್ಯ ಆಧಾರ ಅದರಲ್ಲೂ ನಾನು ಬರುತ್ತಿರುವ ಕ್ಷೇತ್ರದಲ್ಲಿರುವ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಇದೇ ಆಧಾರ. ಈ ಬಗ್ಗೆ ಸಲಹೆ ಕೊಡುವುದಕ್ಕೆ ಧರ್ಮದರ್ಶಿಗಳನ್ನು ನೇಮಕಮಾಡಿದ್ದಾರೆ. ಧರ್ಮದರ್ಶಿಗಳ ಸಮಿತಿಯಿದೆ. ಆ ಸಮಿತಿ ಹೇಗಿದೆಯೆಂದರೆ ಬೇಕಾದರೆ ಸಲಹೆ ಕೊಡಬಹುದು, ಇಲ್ಲದಿದ್ದರೆ ಇಲ್ಲ, ಈ ಸ್ವಭಾವದಲ್ಲಿದೆ. ಇದರಿಂದ ಬಹಳ ತೊಂದರೆಯಾಗಿದೆ. ಮುಜರಾಯಿ ಅಧಿಕಾರಿಗಳು ಕಾಲಕ್ಕೆ ಸರಿಯಾಗಿ ಪೂಜೆ ಪುನಸ್ಕಾರ, ಇತರ ಕಾರ್ಯಕಲಾಪ ನಡೆಯುತ್ತಿದೆಯೋ ಎಂದು ನೋಡುವುದಕ್ಕಾಗುವುದಿಲ್ಲ. ಧರ್ಮದರ್ಶಿಗಳಿಗೆ ಪ್ರವೇಶಮಾಡಿ ಹೇಳುವುದಕ್ಕೆ ಅಧಿಕಾರವಿಲ್ಲ; ಕೇವಲ ಸಲಹಾರೂಪವಾಗಿ ವಿಷಯ ಹೇಳಬಹುದು, ಅವರ ಅಭಿಪ್ರಾಯ ಪಡೆದು ಮಾಡಬಹುದು ಎಂದು ಮುಜರಾಯಿ ಮ್ಯಾನ್ಯುಯಲ್‌ನಲ್ಲಿದೆ. ಇದು ಹಿಂದಿನಕಾಲಕ್ಕೆ ಸರಿಹೋಗುತ್ತಿತ್ತು. ಈಗ ದೇವಸ್ಥಾನದ ಪ್ರವೇಶಕ್ಕೆ ಯಾರಿಗೂ ಯಾವ ವಿಧವಾದ ಅಡ್ಡಿಯೂ ಇಲ್ಲ, ಎಲ್ಲರೂ ದೇವರ ದರ್ಶನ ಮಾಡಬಹುದು. ಒಳ್ಳೆಯ ಆಡಳಿತವಿದ್ದರೆ ಎಲ್ಲರಿಗೂ ಅನುಕೂಲವಾಗುತ್ತದೆ, ಆದ್ದರಿಂದ ಧರ್ಮದರ್ಶಿಗಳ ಕಮಿಟಿಗಳಿಗೆ ಶಾಸನಬದ್ಧವಾದ ಕೆಲವು ಅಧಿಕಾರ ಕೊಡುವುದು ಉತ್ತಮ. ಇದಕ್ಕೆ ಬೇಕಾದ ಶಾಸನವನ್ನು ಸರ್ಕಾರದವರು ಮಂಡಿಸಬೇಕೆಂಬ ದೃಷ್ಟಿಯಿಂದ ವಿರೋಧವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಮೂಡಿಗೆರೆ-ಅನುಸೂಚಿತ ಜಾತಿಗಳು).—ಸ್ವಾಮಿ, ಖೋತಾ ನಿರ್ಣಯಗಳನ್ನು ಕಳುಹಿಸುವಾಗ ಕೆಲವು ರಚನಾತ್ಮಕ ಸಲಹೆಗಳನ್ನು ಮಾನ್ಯ ಸದಸ್ಯರು ಕೊಡಬೇಕೆಂದು ಇಚ್ಛೆಯುಳ್ಳವರಾಗಿರುತ್ತಾರೆ. ಅಂಥವರಿಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕದಿದ್ದರೆ ಬಹಳ ನೊಂದುಕೊಳ್ಳುತ್ತಾರೆ ಎಂದು ಹೇಳಿ ಈಗ ಅವಕಾಶ ಸಿಕ್ಕಿರುವುದಕ್ಕಾಗಿ ವಂದಿಸುತ್ತಾ ಖೋತಾ ನಿರ್ಣಯದಮೇಲೆ ಮಾತನಾಡುತ್ತೇನೆ.

ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಮುಜರಾಯಿ ದೇವಸ್ಥಾನಗಳೇನಿವೆಯೋ ಅವುಗಳಲ್ಲಿ ಹರಿಜನರನ್ನು ಧರ್ಮದರ್ಶಿಗಳಾಗಿ ನಾಮಕರಣ ಮಾಡಿಕೊಳ್ಳಬೇಕೆಂದು ಸರ್ಕಾರಿ ಆಜ್ಞೆಯಿದೆ. ಕೆಲವು ಕಡೆಗಳಲ್ಲಿ ಹರಿಜನ ಸದಸ್ಯರನ್ನು ನಾಮಕರಣ ಮಾಡಿಕೊಳ್ಳದಿರುವುದು ಈ ಮಾನ್ಯ ಸಭೆಯ ಅನೇಕ ಸದಸ್ಯರಿಗೆ ತಿಳಿದಿರಬಹುದೆಂದು ಭಾವಿಸುತ್ತೇನೆ. ಈಗ ಕೆಲವು ಸದಸ್ಯರನ್ನು ಮುಜರಾಯಿ ದೇವಸ್ಥಾನಗಳಿಗೆ ನಾಮಕರಣ ಮಾಡಿದರೂ ಸಹ ಅವರನ್ನು ಮುಜರಾಯಿ ದೇವಸ್ಥಾನಗಳಿಗೆ ಬರಮಾಡಿಕೊಳ್ಳುವುದಾಗಲಿ ಅಥವಾ ದೇವಸ್ಥಾನದ ಆಡಳಿತದ ವಿಚಾರದಲ್ಲಿ ಅವರು ಭಾಗವಹಿಸುವುದೇ ಆಗಲಿ ಯಾವುದೂ ನಡೆಯುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಅವರನ್ನು ದೇವಸ್ಥಾನಕ್ಕೆ ಸೇರಿಸದಿರುವುದು, ಆಡಳಿತ ವಿಚಾರದಲ್ಲಿ ಉದ್ದೇಶಪೂರ್ವಕವಾಗಿ ಅವರಿಗೆ ಮನವರಿಕೆ ಕೊಡದಿರು

ವುದು ನಮಗೆ ತಿಳಿದುಬಂದಿದೆ. ಇದು ತುಂಬಾ ವಿಷಾಧಕರ, ಈಗಲಾದರೂ ಸರ್ಕಾರದವರು ಯಾವ ಒಂದು ಸದುದ್ದೇಶದಿಂದ ದೇವಸ್ಥಾನಗಳಿಗೆ ಹರಿಜನ ಧರ್ಮದರ್ಶಿಗಳನ್ನು ನಾಮಕರಣ ಮಾಡುತ್ತಾರೋ ಆ ಉದ್ದೇಶ ನೆರವೇರುವಂತಾಗಲು ಎಲ್ಲ ಮುಜರಾಯಿ ದೇವಸ್ಥಾನಗಳಿಗೂ ಕೂಡ ಹರಿಜನ ಸದಸ್ಯರನ್ನು ಕಡ್ಡಾಯವಾಗಿ ನಾಮಕರಣ ಮಾಡಿಕೊಳ್ಳಬೇಕೆಂಬ ತಿಳಿವಳಿಕೆಯನ್ನು ಕೊಡುವುದೂ ಅಲ್ಲದೆ ನಾಮಕರಣ ಮಾಡಲ್ಪಟ್ಟ ಹರಿಜನ ಸದಸ್ಯರು ದೇವಸ್ಥಾನಗಳ ಆಡಳಿತದಲ್ಲಿಯೂ ನೇರವಾಗಿ ಭಾಗವಹಿಸುವಂತೆ ಸರಿಯಾದ ರೀತಿಯಲ್ಲಿ ಎಲ್ಲ ಕಾರ್ಯಕ್ರಮಗಳನ್ನೂ ಕೈಕೊಳ್ಳಬೇಕು ಎಂದು ಈ ಸಮಯದಲ್ಲಿ ಹೇಳುತ್ತೇನೆ. ಅಲ್ಲದೆ ಮುಜರಾಯಿ ದೇವಸ್ಥಾನಗಳಲ್ಲಿ ಅನೇಕ ಪುರಾತನ ದೇವಸ್ಥಾನಗಳಿವೆ. ಸಂಸ್ಥಾನವಲ್ಲಿ ಈಗ ಚಿಕ್ಕಮಗಳೂರು ಟೌನಿಗೆ ಸೇರಿದ ಹಿರೇಮಗಳೂರಿನ ಶ್ರೀ ಕೋದಂಡರಾಮಸ್ವಾಮಿ ದೇವಸ್ಥಾನ ಬಹಳ ಪುರಾತನ ದೇವಸ್ಥಾನ. ಅನೇಕ ಪುರಾತನ ದೇವಸ್ಥಾನಗಳು ಇಂಡಿಯಾ ಸರ್ಕಾರಕ್ಕೆ ಸೇರಿವೆ. ಯಾವ ಕಾರಣದಿಂದ ಹಿರೇಮಗಳೂರು ದೇವಸ್ಥಾನ ಇಂಡಿಯಾ ಸರ್ಕಾರಕ್ಕೆ ಸೇರಿಲ್ಲವೋ ಗೊತ್ತಿಲ್ಲ. ಈಗ ದೇವಸ್ಥಾನಗಳು ಎಷ್ಟುಮಟ್ಟಿಗೆ ಅಭಿವೃದ್ಧಿಯಾಗಬೇಕೋ ಅಷ್ಟುಮಟ್ಟಿಗೆ ಆಗುತ್ತಿಲ್ಲ. ಇದಕ್ಕೆ ಸರ್ಕಾರದವರು ಸರಿಯಾದ ಕಾರ್ಯಕ್ರಮಗಳನ್ನು ಕೈಕೊಂಡು ಹಳೆಯ ದೇವಸ್ಥಾನಗಳು ಸರಿಯಾದ ರೀತಿಯಲ್ಲಿ ಕೆಲಸಮಾಡುವಂತೆಯೂ, ದೇವಸ್ಥಾನಗಳ ಕಟ್ಟಡಗಳು ಹಾಳಾಗದಂತೆಯೂ, ಅನೇಕ ರೀತಿಯಲ್ಲಿ ಎಲ್ಲರೂ ಸಂತೋಷಪಡುವಂತೆಯೂ, ನೋಡುವುದಕ್ಕೆ ರಮ್ಯವಾಗಿಯೂ ಇದ್ದು ಪೂಜೆ ಪುನಸ್ಕಾರಾದಿಯಾಗಿ ಎಲ್ಲ ವಿಚಾರಗಳಲ್ಲೂ ಸಮರ್ಪಕವಾಗಿರುವಂತೆಯೂ ಏರ್ಪಾಡು ಮಾಡಿ ಕಲಾಕೌಶಲ್ಯವುಳ್ಳ ಇಂತಹ ದೇವಸ್ಥಾನಗಳಿಗೆ ಪ್ರೋತ್ಸಾಹ ಕೊಡುವುದು ಸರ್ಕಾರದ ಕರ್ತವ್ಯವೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ನಾನು ಈ ಮೇಲೆ ಹೇಳಿರುವ ಹಿರೇಮಗಳೂರು ಶ್ರೀ ಕೋದಂಡರಾಮಸ್ವಾಮಿ ದೇವಸ್ಥಾನವನ್ನು ಅಜಮಾಯಷಿ ಮಾಡಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಈ ಸಂದರ್ಭದಲ್ಲಿ ಎರಡು ಮೂರು ವಿಷಯಗಳನ್ನು ಹೇಳಬೇಕಾಗಿದೆ. ನಮ್ಮ ದೇವಸ್ಥಾನಗಳ ಆಡಳಿತ ವಿಚಾರ ಮೊದಲನೆಯದು, ದೇವಸ್ಥಾನಗಳ ಕಟ್ಟಡಗಳು ಶಿಥಿಲವಾಗುತ್ತಿರುವುದನ್ನು ದುರಸ್ತುಮಾಡಿ ಅವುಗಳನ್ನು ಒಳ್ಳೆಯ ಸ್ಥಿತಿಯಲ್ಲಿಡತಕ್ಕದು ಎರಡನೆಯದು, ಮೂರನೆಯದು ಅಸ್ಪೃಶ್ಯತಾ ನಿವಾರಣೆಯ ಸಂಬಂಧವಾಗಿ ಎಲ್ಲ ದೇವಾಲಯಗಳಿಗೂ ಹರಿಜನರನ್ನು ಬಿಡಬೇಕೆಂಬುದು. ಈ ಮೂರು ವಿಷಯಗಳನ್ನೂ ಪ್ರಸ್ತಾಪಮಾಡಿ ಈ ವಿಷಯಗಳಲ್ಲಿ ಸರ್ಕಾರದವರು ಕೈಕೊಳ್ಳಬೇಕಾದ ಕಾರ್ಯ ಕ್ರಮವನ್ನು ತಿಳಿಸಬೇಕಾಗಿದೆ. ದೇವಸ್ಥಾನಗಳ ವಿಷಯದಲ್ಲಿ ಹಿಂದೆ ಸರ್ಕಾರದವರು ಎಷ್ಟೋ ಶ್ರದ್ಧೆವಹಿಸಿ ಅವುಗಳ ಮೇಲ್ವಿಚಾರಣೆ ನೋಡಿಕೊಂಡು ಕಟ್ಟಡಗಳನ್ನು ಕಾಪಾಡಿಕೊಂಡು ಬರುತ್ತಿದ್ದರು ಮತ್ತು ಅವುಗಳು ಇನ್ನೂ ಅಭಿವೃದ್ಧಿಯಾಗುವಂತೆ ಏರ್ಪಾಡು ಮಾಡುತ್ತಿದ್ದರು ಆದರೆ ಈ ವಿಷಯದಲ್ಲಿ ಈಗಿನ ಸರ್ಕಾರದ ಕಟ್ಟುಪಾಡಿನ ರೀತಿ ಬಹಳ ನಿರಾಶೆಯನ್ನುಂಟುಮಾಡಿದೆ. ಇದು ಕಾಲಧರ್ಮ. ಇದು ಸೆಕ್ಯುಲರ್ ಸ್ಟೇಟ್ ತತ್ವಕ್ಕೆ ವಿರೋಧವಾಗಿದೆ, ದೇವಸ್ಥಾನಗಳ ವಿಚಾರದಲ್ಲಿ ಹೆಚ್ಚು ಮಮತೆ ತೋರದೆ ಈಗಿನ ಸರ್ಕಾರದವರು ಬಹಳ ಉದಾಸೀನ ಮಾಡಿದ್ದಾರೆ ಎಂದು ನಾನು ಹೇಳಬೇಕಾಗಿದೆ. ಆದರೆ ಇದಕ್ಕೆ ನಾನು ಸಲಹೆ ಮಾಡುವುದು ಸರ್ಕಾರದವರು ದೇವಸ್ಥಾನಗಳ ಆಡಳಿತವನ್ನು ಬೇರೆ ಸಂಸ್ಥೆಗಳಿಗೆ ವಹಿಸಿಬಿಡುವುದು ಯುಕ್ತವಾಗಿದೆ. ದೇವಸ್ಥಾನಗಳನ್ನು ಕಾಪಾಡಿಕೊಂಡು ಬರುವುದಕ್ಕೆ ಯಾವನೀತಿಯನ್ನನುಸರಿಸಬೇಕು ಮತ್ತು ಅವುಗಳನ್ನು ಇನ್ನೂ ಹೆಚ್ಚು ಅಭಿವೃದ್ಧಿ ಮಾಡಬೇಕಾದರೆ ಎಷ್ಟು ಹಣ ಸಂಗ್ರಹ ಮಾಡ ಮಾಡಬೇಕು ಎಂಬುದನ್ನು ದೇವಸ್ಥಾನದ ಸಮಿತಿ ಮುಜರಾಯಿ ಇಲಾಖೆಗೆ ತಿಳಿಸಬೇಕು. ಆ ಸಮಿತಿಯನ್ನು ಸರ್ಕಾರದಿಂದ ಬೇರೆ ಮಾಡಿ ಸೆಕ್ಯುಲರ್ ಸ್ಟೇಟು ತತ್ವಗಳಿಗೆ ಏನೂ ತೊಂದರೆಯಿಲ್ಲದಿರುವ ಹಾಗೆ ಹಿಂದೂ ದೇವಾಲಯಗಳು ಚೆನ್ನಾಗಿ ನಡೆದುಕೊಂಡು ಬರುವ ರೀತಿಯಲ್ಲಿ ಏರ್ಪಾಡು ಮಾಡಬೇಕು. ಇದು ಕಾನೂನಿಗೆ ಸಂಬಂಧಪಟ್ಟ ವಿಷಯ ಮತ್ತು ದೂರದೃಷ್ಟಿಯಿಂದ ನಡೆಸಬೇಕಾದ ಕ್ರಮ. ಇದನ್ನು ಈಗಲೇ ನಾವು ಯೋಚನೆ ಮಾಡುತ್ತಾ ಬರಬೇಕು. ಏಕೆಂದರೆ ಸೆಕ್ಯುಲರ್ ಸ್ಟೇಟ್‌ಗೆ ತೊಂದರೆಯಾಗಬಾರದು. ದೇವಾಲಯಗಳ ಕೆಲಸ ಕಾರ್ಯಗಳೂ ಕೂಡ ತಮ್ಮಷ್ಟಕ್ಕೆ ತಾವೇ ಸರ್ಕಾರಕ್ಕೆ ಯಾವ ತೊಡಕೂ ಇಲ್ಲದೆ ನಡೆದುಕೊಂಡು ಹೋಗುವುದಕ್ಕೂ ಆಯಾ ಮತ ಸಂಪ್ರದಾಯ ಸರಿಯಾಗಿ ನಡೆದುಕೊಂಡು ಹೋಗುವುದಕ್ಕೂ ಒಂದು ಏರ್ಪಾಡು ಮಾಡುವುದು ಅವಶ್ಯಕ. ಇದು ಮುಂದೆ ಮಾಡಬೇಕಾದ್ದು ಯಾವರೀತಿ ಮಾಡಬೇಕೆಂಬುದನ್ನು ಯೋಚನೆ ಮಾಡೋಣ. ಈಗ ದೇವಾಲಯಗಳು ಶಿಥಿಲವಾಗುತ್ತಿವೆ. ಅವುಗಳ ಕಡೆ ಗಮನ ಕೊಡಬೇಕಾಗಿದೆ. ಇಂಡಿಯಾದಲ್ಲಿ ಎಷ್ಟೋ ದೇವಾಲಯಗಳನ್ನು, ಬಹಳ ದೊಡ್ಡ ದೇವಾಲಯಗಳನ್ನು ಬಹಳ ವ್ಯವಸ್ಥಿತವಾಗಿ ಹಿಂದಿನವರು ಕಟ್ಟಿಸಿದ್ದರು. ಈಗೇನಾದರೂ ಕಲ್ಲು ಸಡಿಲವಾದರೆ, ಯಾವುದಾದರೂ ಕಂಬ ಬಿದ್ದುಹೋಗುವಹಾಗಿದ್ದರೆ ಅದನ್ನು ಸರಿಪಡಿಸಬೇಕಾದ್ದು ಅತ್ಯಂತ ಆವಶ್ಯಕ. ಹಾಗೆಯೇ ಬಿಟ್ಟರೆ ಆ ದೇವಾಲಯಗಳಿಗೆ ಪೂಜೆ ಪುನಸ್ಕಾರಗಳಿಗೆ ಹೋಗುವ ಭಕ್ತರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂಥ ಆ ವಿಷಯದಲ್ಲಿ ಸರ್ಕಾರದವರು ಏನಾದರೂ ಒಂದು ವ್ಯವಸ್ಥೆ ಮಾಡಬೇಕು.

ಎರಡನೆಯದು ಅಸ್ಪೃಶ್ಯತಾ ನಿವಾರಣೆಗೆ-ಹರಿಜನರು ದೇವಾಲಯಗಳಿಗೆ ಪ್ರವೇಶಮಾಡಬೇಕೆಂಬುದು. ಅಸ್ಪೃಶ್ಯತೆ ವಿಷಯದಲ್ಲಿ ಕಾನೂನು ನಿರ್ಬಂಧ ಹಾಕಿದ್ದರೂ ಕೂಡ ಕಾಲೋಚಿತವಾಗಿ ನಮ್ಮ ಸರ್ಕಾರ ಈ ವಿಷಯದಲ್ಲಿ ಮುಂದೆ ನುಗ್ಗಿ ಒಂದು ಕಾರ್ಯಕ್ರಮ ಅನುಸರಿಸಬೇಕಾದರೆ ಅಮಲ್ದಾರರುಗಳಿಗೆ ಒಂದು ತಾಕೀತು ಮಾಡಬೇಕು. ಯಾವುದಾದರೂ ಸಂದರ್ಭಗಳಲ್ಲಿ ಹರಿಜನರನ್ನು ದೇವಾಲಯಗಳಿಗೆ ಕರೆದುಕೊಂಡು ಹೋಗುವ ಒಂದು ಸಮಾವೇಶವನ್ನು ಆವಶ್ಯಕವಾಗಿ ಕಲ್ಪಿಸಿಕೊಳ್ಳಬೇಕು. ಏಕೆಂದರೆ ಪೂರ್ವದಿಂದ ಬಂದಿರುವ ಸಂಪ್ರದಾಯ ಹೋಗಬೇಕಾದರೆ ಒಂದು ಹೊಸ ವ್ಯವಸ್ಥೆಯಾಗಬೇಕು. ಇದನ್ನು ಸಮಾಜಕ್ಕೇ ಬಿಟ್ಟರೆ ಆಗುವುದಿಲ್ಲ. ಸರ್ಕಾರ ಅಸ್ಪೃಶ್ಯತೆ ನಿವಾರಣೆ ಮಾಡಬೇಕೆಂದು ರಾಜ್ಯಾಂಗದಲ್ಲೇ ಹೇಳಿರುವುದರಿಂದ ಇದನ್ನು ಮಾಡಲೇಬೇಕು. ಇದು ಧರ್ಮದ ವಿಷಯವಲ್ಲ, ಇದು ಜನಾಂಗ ತೀರ್ಮಾನ ಮಾಡುವ ವಿಷಯ. ಆದ್ದರಿಂದ ಇದಕ್ಕೆ ಸರ್ಕಾರದವರು ಕಾಲೋಚಿತವಾಗಿ ಕೆಲವು ಒಳ್ಳೆಯ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಇದಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ದೇವಾಲಯಗಳಿಗೆ ಹರಿಜನರನ್ನು ಕರೆದುಕೊಂಡು ಹೋಗುವ ಕೆಲಸವನ್ನು ಅಮಲ್ದಾರರುಗಳಿಗೇ ಬಿಡಬೇಕು. ಅವರೇ ಈ ಕೆಲಸಮಾಡಲಿ ಎಂದು ಇದಕ್ಕೆ ಬೇಕಾದ ಏರ್ಪಾಡು ಮಾಡಿದರೆ ಎರಡು ಮೂರು

(ಶ್ರೀ ಪಿ. ಆರ್. ರಾಮಯ್ಯ.)

ವಿಷಯದಲ್ಲಿ ಯಾವ ಒಂದು ಅಡ್ಡಿಯಿದೆ ಅದು ಮಾಯವಾಗಿ ಅಸ್ಪೃಶ್ಯತೆ ಸಂಪೂರ್ಣವಾಗಿ ನಿವಾರಣೆಯಾಯಿತೆಂಬ ನಂಬಿಕೆ ಸಮಾಜಕ್ಕೆ ಬರುತ್ತದೆ. ಆದ್ದರಿಂದ ಈ ಸಲಹೆಗಳನ್ನು ನಾನು ಕೊಡುತ್ತೇನೆ.

ನಾನು ಈಗ ತಮಗೆ ಇನ್ನೊಂದು ವಿಷಯ ಹೇಳಬೇಕೆಂದಿದ್ದೇನೆ. ನಮ್ಮ ಸಂಸ್ಥಾನದಲ್ಲಿ ಚಾಮುಂಡಿ ದೇವಸ್ಥಾನ ಇತ್ಯಾದಿ ಕೆಲವು ದೇವಾಲಯಗಳು ಬಹಳ ಪ್ರಖ್ಯಾತಿಯಾದಂಥವುಗಳಾಗಿವೆ. ಈ ದೇವಾಲಯಗಳಲ್ಲಿರತಕ್ಕಂಥ ಶಿಲ್ಪಕಲಾ ಕೌಶಲ್ಯಗಳನ್ನು ನೋಡಬೇಕೆಂಬ ಉತ್ಸಾಹದಿಂದ ಅನೇಕ ಪರದೇಶದ ಜನರುಗಳು ಇಲ್ಲಿಗೆ ಕಾರಣಾಂತರಗಳಿಂದ ಬಂದಾಗ್ಗೆ, ಬರುತ್ತಾರೆ. ಆದರೆ ಇಲ್ಲಿ ಏನೋ ಒಂದು ಹಳೇ ಸಾಂಪ್ರದಾಯವನ್ನಿಟ್ಟುಕೊಂಡು ಹೊರಗಡೆ ದೇಶದ ಜನರನ್ನು ಒಳಕ್ಕೆ ಬಿಡುತ್ತಿಲ್ಲ. ಕೆಲವು ದೇವಾಲಯಗಳಲ್ಲಿ ಈಗಲೂ ಬಿಡುತ್ತಿಲ್ಲ. ಮೊನ್ನೆ ಇಲ್ಲಿಗೆ ECAFE ಸಮ್ಮೇಳನಕ್ಕೆ ಬಂದಿದ್ದಂಥ ಕೆಲವರು ಹಾಗೆ ಈ ದೇವಾಲಯಗಳನ್ನು ನೋಡುವುದಕ್ಕೆ ಹೋಗಿದ್ದಾಗ ಅವರನ್ನು ವಿದೇಶೀಯ ಜನರೆಂದು ಅವರನ್ನು ಒಳಕ್ಕೆ ಬಿಡಲಿಲ್ಲವೆಂದು ಹೇಳಿದರು. ನಾವು ಈ ದಿವಸ ಇಲ್ಲಿ ಈ ಅಸ್ಪೃಶ್ಯತಾ ನಿವಾರಣೆ ಮಾಡಬೇಕೆಂದು ಹೇಳುತ್ತಿರುವಾಗ ಈ ದೇವಾಲಯಗಳಲ್ಲಿರುವ ವಾಸ್ತವ ಚಿತ್ರಕಲೆಗಳನ್ನು ನೋಡಲು ಬರತಕ್ಕವರೆಲ್ಲರಿಗೂ ಒಳಕ್ಕೆ ಬರಲು ಅವಕಾಶವಿರಬೇಕು. ಈ ಅಂಶಕ್ಕೆ ಸರ್ಕಾರದವರು ಗಮನಕೊಡಬೇಕೆಂದು ಸೂಚಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ನಮ್ಮ ಮದ್ದೂರು ಟೌನಿನಲ್ಲಿರತಕ್ಕ ಶ್ರೀ ಉಗ್ರನರಸಿಂಹಸ್ವಾಮಿಯ ಮುಜರಾಯಿ ದೇವಾಲಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಮದ್ದೂರಿನಲ್ಲಿ ಇದೊಂದು ಬಹಳ ಪುರಾತನವಾದಂಥ ಮುಜರಾಯಿ ದೇವಾಲಯ. ಈ ದೇವಾಲಯವನ್ನು ಕಟ್ಟಿ ಒಂದು ಸಾವಿರ ವರ್ಷಕ್ಕೂ ಮೇಲಾಗಿದೆ ಎಂದು ಅಲ್ಲಿನ ಜನರು ಹೇಳುತ್ತಿದ್ದಾರೆ. ಈ ದೇವಾಲಯಕ್ಕೆ ಬೇಕಾದಷ್ಟು ಮಾನ್ಯ—ಮಿರಾಸೆಗಳೂ, ಇನಾಂತಿ ಜಮೀನುಗಳೂ ಇರುತ್ತವೆ. ಈಗ ಈ ದೇವಸ್ಥಾನ ಬಹಳ ಶಿಥಿಲವಾಗಿದೆ. ದೊಡ್ಡ ಗೋಪುರವೆಲ್ಲಾ ಬಿರುಕುಬಿಟ್ಟಿದೆ; ಒಳಕ್ಕೆ ಹೋಗತಕ್ಕವರು ಪ್ರಾಣದ ಮೇಲಿನ ಆಶೆಯನ್ನು ತೊರೆದು ಹೋಗಬೇಕು ಎನ್ನುವಷ್ಟರ ಮಟ್ಟಿಗೆ ಈ ದೇವಸ್ಥಾನ ಶಿಥಿಲವಾಗಿದೆ. ಸರ್ದಾರ್ ಶ್ರೀ ಕಾಂತರಾಜೇ ಅರಸಿನವರು ಈ ದೇವರ ಒಕ್ಕಲು, ಅವರ ಸಂತತಿಯವರು ಈಗಲೂ ಈ ದೇವಸ್ಥಾನಕ್ಕೆ, ಕಾಣಿಕೆ, ಮುಡುಪು ಇತ್ಯಾದಿಗಳನ್ನು ವಿಶೇಷವಾಗಿ ಕೊಡುತ್ತಿದ್ದಾರೆ. . . . .

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಾದರೆ ಅದೇನು ಏನ್‌ಷೆಂಟ್ ಮಾನ್ಯುಮೆಂಟೋ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಲ್ಲಿ ಆ ವಿಧವಾದ ಬೋರ್ಡನ್ನೇನೂ ಹಾಕಿಲ್ಲ. ಅಂತೂ ಇದೊಂದು ಬಹಳ ಪುರಾತನ ದೇವಸ್ಥಾನ; ರಾಜಮನೆತನದವರು ಬಂದು ಹೋಗುತ್ತಿರುವಂಥ ದೇವಸ್ಥಾನ. ಇಂಥ ದೇವಾಲಯ ಈ ದಿವಸ ಬಹಳ ದುರವಸ್ಥೆಯಲ್ಲಿದೆ. ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಲು ಈ ಹಿಂದೆ 60—70 ಸಾವಿರ ರೂಪಾಯಿಗಳ ಒಂದು ಅಂದಾಜನ್ನು ತಯಾರಿಸಲಾಗಿತ್ತೆಂದು ಕೇಳುತ್ತೇನೆ. ಅದೀಗ ಸರ್ಕಾರದಲ್ಲಿ ಎಲ್ಲೋ ಮೂಲೆಯಲ್ಲಿ ಬಿದ್ದಿದೆ. ಅದನ್ನು ಈಗಲಾದರೂ ದಯವಿಟ್ಟು ಈಚೆಗೆ ತೆಗೆಸಿ ಆ ದೇವಸ್ಥಾನವನ್ನು ಆ ದೇವರ ದರ್ಶನಕ್ಕಾಗಿ ಬರತಕ್ಕಂಥ ಜನರ ತಲೆಯ ಮೇಲೆ ಬೀಳದಂತೆ ಸರಿಪಡಿಸಬೇಕೆಂದು ನನ್ನ ಮೊದಲನೆಯ ಕೋರಿಕೆ.

ಇನ್ನು ನಾನು ಕೊಡಬೇಕೆಂದಿರುವ ಸಲಹೆ ಏನೆಂದರೆ—ಸಂಸ್ಥಾನಾಮುಳೆಯಿರತಕ್ಕ ಈ ಮುಜರಾಯಿ ದೇವಾಲಯಗಳ ಕಾರ್ಯಕ್ರಮಗಳನ್ನೂ ಮತ್ತು ಇವುಗಳ ಆಡಳಿತವನ್ನೂ ನೋಡಿಕೊಳ್ಳುವುದಕ್ಕಾಗಿ ಈ ದಿವಸ ಕೆಲವು ಧರ್ಮದರ್ಶಿಗಳನ್ನು ನೇಮಕ ಮಾಡಲಾಗುತ್ತಿದೆ. ಹಾಗೆ ನೇಮಕ ಮಾಡಲ್ಪಡುವ ಧರ್ಮದರ್ಶಿಗಳಿಗೂ ಈ ಮಾನ್ಯ ಸಭೆಗೂ ಏನೂ ಸಂಬಂಧವಿರುವುದಿಲ್ಲ. ಆದ್ದರಿಂದ ಆ ದೇವಾಲಯಗಳ ಆಡಳಿತ ಮತ್ತು ಅವುಗಳ ಸ್ಥಿತಿಗತಿಗಳನ್ನು ತಿಳಿದುಕೊಂಡು ಮುಂದೆ ಅವುಗಳ ಬಗ್ಗೆ ಏನನ್ನಾದರೂ ಮಾಡಬೇಕೆಂಬ ಸಲಹೆ ಮಾಡುವುದಕ್ಕೆ ಈ ಸಭೆಯವರಿಗೆ ಅವಕಾಶವಿರುವುದಿಲ್ಲ. ಅದಕ್ಕಾಗಿ ಈ ಮಾನ್ಯ ಸಭೆಯ ಸದಸ್ಯರ ಪೈಕಿ ಒಬ್ಬರು ಆ ಧರ್ಮದರ್ಶಿಗಳ ಸ್ಥಾನದಲ್ಲಿದ್ದರೆ ಆ ದೇವಸ್ಥಾನಗಳ ವಿಚಾರವನ್ನು ಈ ಸಭೆಯ ಗಮನಕ್ಕೆ ತರಲು ಅವಕಾಶವಾಗುತ್ತದೆ. ಇಂಥ ಒಂದು ಅವಕಾಶವನ್ನು ಈ ಸಭೆಯ ಸದಸ್ಯರಿಗೆ ದೊರೆಯುವಂತೆ ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. CHAIRMAN.—I want to know what time the Hon'ble Minister requires to reply ?

Sri A. G. RAMACHANDRA RAO.—Sri. Channabasappa requires a few minutes and myself another few minutes.

Mr. CHAIRMAN.—Let both of you together have five minutes.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ನಾನು ಈ ಡಿಮ್ಯಾಂಡನ್ನು ವಿರೋಧಿಸುತ್ತ ಒಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ತರಲು ಅಪೇಕ್ಷಿಸುತ್ತೇನೆ. ಈಗ ನಾನು ಆ ಲೇಬರ್ ವೆಲ್‌ಫೇರ್ ಇಲಾಖೆಯ ವಿಷಯದಲ್ಲಿ ಒಂದೆರಡು ವಿಷಯಗಳನ್ನು ಪ್ರಸ್ತಾಪಿಸಬೇಕೆಂದಿದ್ದೇನೆ.

ನಮ್ಮ ಮೈಸೂರು ಸರ್ಕಾರದವರು ಅನೇಕ ಸಂದರ್ಭಗಳಲ್ಲಿ ಈ ಕಾರ್ಮಿಕರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಿಲ್ಲ ಎನ್ನುವುದಾಗಿ ನನ್ನ ಗಮನಕ್ಕೆ ಬಂದಿದೆ. ರಾಜೀ ಸಂಧಾನದ ಪ್ರಯತ್ನಗಳು ಮುರಿದುಬಿದ್ದು ಹೋದ ನಂತರ ಆ ಕಾರ್ಮಿಕರು ಅವರ ಬೇಡಿಕೆಯನ್ನು ಒಂದು ಟ್ರಿಬ್ಯುನಲ್‌ಗೆ ಒಪ್ಪಿಸಿ ಎಂಬುದಾಗಿ ಅವರು ಕೇಳಿಕೊಂಡಿದ್ದರೂ ಅದನ್ನು ಅನೇಕ ಸಂದರ್ಭಗಳಲ್ಲಿ ಈ ಸರ್ಕಾರ ತಳ್ಳಿಹಾಕಿದೆ; ಸಾಧ್ಯವಿಲ್ಲವೆಂದು ಹೇಳಿದ್ದರ ಮೇಲೆ ಅನೇಕ ಸ್ಟ್ರೈಕುಗಳೂ ಕೂಡ ನಡೆದಿವೆ. ಎಲೆಕ್ಟ್ರಿಕ್ ಇಲಾಖೆಯ ನೌಕರರ ಸ್ಟ್ರೈಕೇ ಇದಕ್ಕೊಂದು ಸಾಕ್ಷಿ. ಹೀಗೆ ಮಾಡತಕ್ಕದ್ದು ಬಹಳ ಹಿಂದಿನಕಾಲದ ನೀತಿಯೆಂದು ಹೇಳಬಹುದು. ಈ ನೀತಿ ಒಂದು ಮಿಡೀವಿಯಲ್ ಕಾಲದ ನೀತಿ. ಇದನ್ನು ನಮ್ಮ ಸರ್ಕಾರ ಇನ್ನೂ ಕೈಬಿಟ್ಟಿದ್ದ ಹಾಗೆ ಕಾಣುತ್ತಿಲ್ಲ. ಇದರಿಂದ ಕಾರ್ಮಿಕ ವರ್ಗಕ್ಕೆ ಬಹಳ ತೊಂದರೆಯಾಗಿದೆ. ಕಾರ್ಮಿಕರ ಹಿತರಕ್ಷಣೆಗಳ ಬಗ್ಗೆ ಇಂಡಿಯಾ ಪಾರ್ಲಿಮೆಂಟಿನಲ್ಲಿ ಪಾಸಾಗಿ ಈ ದಿವಸ ಮೈಸೂರು ಸರ್ಕಾರದವರು ಇಲ್ಲಿ ಜಾರಿಗೆ ತಂದಿರತಕ್ಕಂಥ ಕಾನೂನುಗಳು

ಎಷ್ಟರಮಟ್ಟಿಗೆ ಈ ದಿವಸ ಆ ಕಾರ್ಮಿಕರಿಗೆ ರಕ್ಷಣೆ ಕೊಡಬೇಕೋ ಅಷ್ಟನ್ನು ಕೊಡುವಂತೆ ಮಾಡಲು ಸರ್ಕಾರ ಮುಂದೆ ಬರಬೇಕಾಗಿದೆ. ಈ ಟ್ರಿಬ್ಯುನಲ್‌ಗಳು ಅವಾರ್ಡನ್ನು ಕೊಟ್ಟಾಗ ಅದರ ಫಲ ಅವರಿಗೆ ಸಲ್ಲುವ ಹಾಗೆ ಮಾಡಬೇಕು ಎಂಬುದಾಗಿ ಕಾನೂನಿನಲ್ಲಿ ತಿಳಿಸಿದ್ದರೂ ಕೂಡ ಮೈಸೂರು ಸರ್ಕಾರ ತನ್ನ ಒಂದು ಉದಾಸೀನತೆಯನ್ನು ತೋರಿಸಿ ಇವರಿಗೆ ತೊಂದರೆ ಕೊಟ್ಟಿದೆ.

ಶಿವಮೊಗ್ಗಾ ಜಿಲ್ಲೆಯಲ್ಲಿ ಈ ದಿವಸ ಈ ಷಾಪ್ಸ್ ಅಂಡ್ ಎಷ್ಟಾಬ್ಲಿಷ್‌ಮೆಂಟ್ ವರ್ಕ್ಸ್ ಆಕ್ಟ್ ಜಾರಿಯಲ್ಲಿದೆ. ಅಲ್ಲಿಯ ಜನರ ಹಿತವನ್ನು ನೋಡಿಕೊಳ್ಳುವುದಕ್ಕಾಗಿ ಒಬ್ಬ ಇನ್‌ಸ್ಪೆಕ್ಟರಿದ್ದಾರೆ. ಈ ವೆಲ್‌ಫೇರ್ ಆಫೀಸರ್ ಎನ್ನತಕ್ಕವರು ನಡೆಸುತ್ತಿರುವ ಕಾರ್ಯಕ್ರಮಗಳು ಆ ಮ್ಯಾನೇಜ್‌ಮೆಂಟಿನವರ ಹಿತಸ್ಥರೂ, ಅವರ ಆಪ್ತ ಸ್ನೇಹಿತರೂ ಎನ್ನುವ ಮಟ್ಟಕ್ಕೆ ಹೋಗಿದೆ. ಆದರೆ ಅವರು ಆ ಮಟ್ಟದಲ್ಲಿ ವರ್ತಿಸುತ್ತಿದ್ದಾರೆಂದು ಆಪಾದನೆ ಮಾಡುತ್ತಿಲ್ಲ. ಇವರು ಆ ಮ್ಯಾನೇಜ್‌ಮೆಂಟಿನವರ ಹಿತಸ್ಥರಾಗಿರುವುದರಿಂದ ಆ ನೌಕರರಿಗೆ ಏನೇನು ರಕ್ಷಣೆಗಳನ್ನು ಕೊಡಬೇಕಾಗಿತ್ತೋ, ಅವರಿಗೇನೇನು ಸಹಾಯಗಳನ್ನು ನೀಡಬೇಕಾಗಿತ್ತೋ ಅವುಗಳ ಕಡೆಗೆ ಇವರು ತಮ್ಮ ಗಮನವನ್ನು ಕೊಟ್ಟಿಲ್ಲ. ಇಂಥ ಕಾನೂನನ್ನು ಸರ್ಕಾರದವರು ಸಾಮಾನ್ಯವಾಗಿ ನಾಲ್ಕಾರು ಸಾವಿರ ಜನಸಂಖ್ಯೆ ಇರತಕ್ಕಂಥ ಎಲ್ಲಾ ಪಟ್ಟಣಗಳಲ್ಲೂ ಜಾರಿಗೆ ತರತಕ್ಕದ್ದು ಒಳ್ಳೆಯದು. ಆದರೆ ಆ ಪಟ್ಟಣದ ಜನರು ಕೇಳಿದರೆ ನಾವು ಕೊಡುತ್ತೇವೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಈ ದಿವಸ ಇದನ್ನು ಆ ಚನ್ನಗಿರಿ, ಹೊನ್ನಾಳಿ, ತೀರ್ಥಹಳ್ಳಿ, ಹೊಸನಗರ ಇತ್ಯಾದಿ ತಾಲ್ಲೂಕುಗಳಿಗೆಲ್ಲ ವಿಸ್ತರಿಸಬಹುದು, ಆ ಶಿವಮೊಗ್ಗದಲ್ಲಿರುವ ವೆಲ್‌ಫೇರ್ ಆಫೀಸರು ಈ ತಾಲ್ಲೂಕುಗಳಿಗೆಲ್ಲಾ ಹೋಗಿ ನೋಡಿಕೊಳ್ಳಬಹುದು. ಈ ವಿಷಯವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ ಸಚಿವರು).—ಸ್ವಾಮಿ, ಆ ಲಂಡನ್ ಪಟ್ಟಣದಲ್ಲಿ ನಮ್ಮ ಒಬ್ಬ ಟ್ರೇಡ್ ಏಜಂಟರು ಅಲ್ಲಿ ಇರಕ್ಕದ್ದು ಏತಕ್ಕೆ? ಇದು ಅನವಶ್ಯಕ, ಅಲ್ಲಿ ಈಗಾಗಲೇ ಒಬ್ಬರು ಇಂಡಿಯಾ ದೇಶದ ಹೈ ಕಮಿಷನರ್ ಇದ್ದಾರೆ, ಹೀಗೆ ಇವರು ಇದ್ದಾಗ್ಯೂ ನಾವು ಅಲ್ಲಿ ನಮ್ಮ ಟ್ರೇಡ್ ಏಜಂಟರನ್ನು ಇಟ್ಟುಕೊಂಡಿರುವುದರಿಂದ ನಮ್ಮ ಸರ್ಕಾರಕ್ಕೆ ವೃಥಾ ಒಂದು ಲಕ್ಷದ ಮೂವತ್ತು ಸಾವಿರ ರೂಪಾಯಿಗಳು ಖರ್ಚಾಗುತ್ತಿದೆ, ಇವರು ಅಲ್ಲಿರತಕ್ಕದ್ದು ಅನಾವಶ್ಯಕ ಎಂಬುದಾಗಿ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಹೇಳಿದರು. ನಮಗೂ ಮೊದಲು ಹೀಗೇ ಅನ್ನಿಸಿತು. ಆದರೆ ನಾವು ವಿಚಾರಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆ ಮಾಡಿದ ನಂತರ ನಮ್ಮ ಅಭಿಪ್ರಾಯಗಳನ್ನು ಬದಲಾಯಿಸಬೇಕಾಗಿ ಬಂತು. ಇವರನ್ನು ತೆಗೆದುಹಾಕತಕ್ಕದ್ದು ಅಷ್ಟು ಸುಲಭವಲ್ಲ. ಇದರಲ್ಲಿ ಅನೇಕ ಸಾಧಕ ಬಾಧಗಳಿವೆ. ಈ ದಿವಸ ನಾವು ಇವರ ಮೂಲಕ ಅನೇಕ ಮಾಲುಗಳನ್ನು ತರಿಸುತ್ತಿದ್ದೇವೆ. ನಮಗೆ ಈ ಪಾಂಚವಾರ್ಷಿಕ ಯೋಜನೆಯ ಸಂಬಂಧವಾಗಿ ಅನೇಕ ಮೆಷನರಿ ಸಾಮಾನುಗಳ ಅಗತ್ಯ ಬಹಳವಾಗಿದೆ. ನಾವು ಇವರನ್ನು ತೆಗೆದು ಹಾಕತಕ್ಕದ್ದು ಈ ಸಂದರ್ಭದಲ್ಲಿ ಲಾಭಕರವಾದದ್ದಲ್ಲ ಎಂಬ ಅಂಶಗಳನ್ನೆಲ್ಲಾ ಭಾರತ ಸರ್ಕಾರದವರಿಗೆ ತಿಳಿಸಿ ಅವರೊಡನೆ ಸಂಧಾನ ನಡೆಸಿ ಇವರನ್ನು ಈಗ ತೆಗೆದು ಹಾಕುವುದರಿಂದ ನಮಗೆ ಅನೇಕ ತೊಂದರೆಗಳುಂಟಾಗುತ್ತವೆಂದು ತಿಳಿಸಿದ್ದರಮೇಲೆ ಅವರು ನಮಗೆ ಈ ಟ್ರೇಡ್ ಏಜಂಟರನ್ನು ಇಟ್ಟುಕೊಳ್ಳಲು ಅನುಮತಿ ಕೊಟ್ಟಿದ್ದಾರೆ. ಇದರಿಂದ ನಮಗೆ ಈ ದಿವಸ ನೇರವಾಗಿ ಇವರ ಮೂಲಕ ಅನೇಕ ಸಾಮಾನುಗಳನ್ನು ಕೊಂಡುಕೊಳ್ಳಲು ತುಂಬ ಅನುಕೂಲವಿರುತ್ತದೆ. ಅದೂ ಅಲ್ಲದೆ ಆ ಪರದೇಶದಲ್ಲಿ ನಮ್ಮ ಗಂಧದ ಎಣ್ಣೆಯನ್ನು ಮಾರಾಟ ಮಾಡಲು ಮತ್ತು ನಮ್ಮೊಂದಿಗೆ ಈ ಸಂಬಂಧವಾಗಿ ಎಲ್ಲ ಪತ್ರವ್ಯವಹಾರಗಳನ್ನೂ ನಡೆಸಲು ಇವರು ಅಲ್ಲಿ ಇಲ್ಲದೆ ಇದ್ದಿದ್ದರೆ ನಾವು ಒಬ್ಬ ಟ್ರೇಡ್ ಏಜೆನ್ಸಿಯನ್ನು ಅಲ್ಲಿ ಇಟ್ಟುಕೊಳ್ಳಬೇಕಾಗಿತ್ತು ಮತ್ತು ಅದಕ್ಕಾಗಿ ನಾವು ಒಂದು ಲಕ್ಷಕ್ಕೆ ಮೀರಿ ಕಮಿಷನ್ ಕೊಡಬೇಕಾಗಿತ್ತು. ನಾವು ಪ್ರತಿವರ್ಷವೂ ಸುಮಾರು ನಮ್ಮ S.P.C. ಗೆ 62 ಲಕ್ಷದ 32 ಸಾವಿರ ರೂಪಾಯಿಗಳ ಪದಾರ್ಥಗಳನ್ನು ತರಿಸಿಕೊಳ್ಳುತ್ತಿದ್ದೇವೆ. ಇದಕ್ಕೆ ನಾವು ಅವರಿಗೆ ಶೇಕಡ 1ರ ಹಾಗೆ ಛಾರ್ಜು ಕೊಡಬೇಕಾಗುತ್ತದೆ. ಇದರಿಂದ ಭಾರತ ಸರ್ಕಾರ 52-53 ಸಾವಿರ ರೂಪಾಯಿಗಳನ್ನು ತೆರಬೇಕಾಗುತ್ತದೆ. ಇದಲ್ಲದೆ ನಾವು ಆ ಯುನೈಟೆಡ ಸ್ಟೇಟ್ಸ್ ಆಫ್ ಅಮೆರಿಕಾದವರಿಗೆ ಕಮಿಷನ್ ಬೇರೆ ಕೊಡಬೇಕಾಗುತ್ತದೆ. ಹೋದ ವರ್ಷ ನಡೆದ ವ್ಯಾಪಾರಕ್ಕಾಗಿ ಸುಮಾರು ಶೇಕಡ 2½ ಯಂತೆ 37 ಸಾವಿರ ರೂಪಾಯಿಗಳಷ್ಟು ಕಮಿಷನ್ನನ್ನೇ ಕೊಡಬೇಕಾಯಿತು. ಹೀಗೆ ಈ 37 ಸಾವಿರ ಮತ್ತು ಆ 67 ಸಾವಿರ ಸೇರಿದರೆ ಒಟ್ಟು ಒಂದು ಲಕ್ಷ ಚಿಲ್ಲರೆ ರೂಪಾಯಿಗಳಿಗೆ ಬರುತ್ತದೆ. ಇದೂ ಕೂಡ ಅಷ್ಟೇ ಆಯಿತು. ಆದರೆ ಅಲ್ಲಿ ನಮ್ಮ ಒಬ್ಬ ಟ್ರೇಡ್ ಏಜಂಟರು ಇಲ್ಲದಿದ್ದರೆ ವ್ಯಾಪಾರದಲ್ಲಿ ಬಹಳ ಏರುಪೇರು ಆಗುತ್ತದೆ ಎಂಬುದಾಗಿ ಗೊತ್ತಾಯಿತು. ನಾವು ಸಾಮಾನುಗಳನ್ನು ಖರೀದಿ ಮಾಡುವಾಗ ಅವರಿಗೆ ತಿಳಿಸಿದರೆ ಅವರು ನಮಗೆ ಈ ಬೆಲೆಗಳ ವಿಚಾರದಲ್ಲಿ ಅನೇಕ ವಿಷಯಗಳನ್ನು ಗೊತ್ತು ಮಾಡಿಕೊಂಡು ತಿಳಿಸುತ್ತಿದ್ದಾರೆ. ನಮ್ಮ ಗಂಧದ ಎಣ್ಣೆಯ ಮಾರಾಟಕ್ಕೂ ಮತ್ತು ನಮ್ಮ S.P.C. ಗೆ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುವುದಕ್ಕೂ ನಾವು ಇವರ ಮೂಲಕ ವ್ಯವಹಾರ ನಡೆಸುತ್ತಿರುವುದರಿಂದ ನಮ್ಮ ಕೆಲಸ ಕಾರ್ಯಗಳೆಲ್ಲಾ ಬೇಗ ನಡೆಸಲು ಅನುಕೂಲವಾಗುವಂತೆ ಅವರು ನಮಗೆ ಬೇಕಾದ ಎಲ್ಲ ಸಾಮಾನ್ನುಗಳನ್ನೂ ಕಳುಹಿಸುತ್ತಿದ್ದಾರೆ. ಇವರು ನಮ್ಮ ಪರವಾಗಿ ಅಲ್ಲಿರುವುದರಿಂದ ನಮಗೆ ಯಾವ ನಷ್ಟವೂ ಆಗುವುದಿಲ್ಲ. ಇನ್ನೂ ಇವರಿಂದ ನಮಗೆ ಹೆಚ್ಚು ಸಹಾಯವಾಗುತ್ತಿದೆ. ಈ ಕಾರಣಗಳಿಂದ ನಾವು ಈ ಟ್ರೇಡ್ ಎಜಂಟರನ್ನು ಅಲ್ಲಿ ಇಟ್ಟಿರುತ್ತೇವೆಂದು ತಿಳಿಸಿದರೆ ಮಾನ್ಯ ಸದಸ್ಯರ ಮನಸ್ಸಿನಲ್ಲಿದ್ದ ಸಂಶಯಗಳೆಲ್ಲ ಪರಿಹಾರವಾಗಿರುತ್ತವೆಂದು ಭಾವಿಸುತ್ತೇನೆ. ಆದುದರಿಂದ ಎಲ್ಲಾ ಮಾನ್ಯ ಸದಸ್ಯರೂ ಈ ಡಿಮ್ಯಾಂಡಿನಲ್ಲಿಕೇಳಿರತಕ್ಕ ಮೊಬಲಗಿನ ಬಗ್ಗೆ ತಮ್ಮ ಅನುಮತಿ ನೀಡಬೇಕೆಂದು ಕೇಳಿ ಕೊಳ್ಳುತ್ತೇನೆ.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖೆಗಳ ಮಂತ್ರಿಗಳು).—ಸ್ವಾಮಿ, ಈಗ ಕೆಲವು ಮಾನ್ಯ ಸದಸ್ಯರು ಮುಜರಾಯಿ ದೇವಸ್ಥಾನಗಳ ಬಗ್ಗೆ ಮಾತನಾಡಿದ್ದಾರೆ. ಇದನ್ನು ಈಗ ನಾವು ಮೂರು ಭಾಗವಾಗಿ ವಿಂಗಡಿಸಬಹುದು. ಎನ್‌ಷೆಂಟ್ ಮಾನ್ಯುಮೆಂಟ್ಸ್ ಎಂಬುದು ಮೊದಲನೆಯದು.

ಶ್ರೀ ಎ. ಭೀಮಪ್ಪನಾಯಕ್.—ಅವುಗಳನ್ನು ಇಂಡಿಯಾ ಸರ್ಕಾರ ನೋಡಿಕೊಳ್ಳುತ್ತದೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು. ಇನ್ನು ಯಾವ ಯಾವ ಮುಜರಾಯಿ ದೇವಸ್ಥಾನಗಳು ಇವೆಯೋ ಅವುಗಳಿಗೆ ಇನಾಂತಿಗಳು—ಫಂಡುಗಳು ಇತ್ಯಾದಿಗಳನ್ನು ಯಾವ ದಾನಿಗಳು ಮಾಡಿಟ್ಟಿದ್ದಾರೋ ಆ ಷರತ್ತುಗಳ ಪ್ರಕಾರ ಅವು ಅನೂಚಾನವಾಗಿ ನಡೆದುಕೊಂಡು ಬರುತ್ತಿವೆ.

ಇನ್ನು ಮೂರನೆಯವುಗಳಿಗೆ ಯಾವ ವರಮಾನವೂ ಇರುವುದಿಲ್ಲ. ಇಂಥ ದೇವಸ್ಥಾನಗಳಿಗೆ ಸರ್ಕಾರದವರು ಏನೂ ಸಹಾಯ ಮಾಡುವುದಕ್ಕಾಗುವುದಿಲ್ಲ. ಇಂಥ ದೇವಾಲಯಗಳಿಗೆ ಸಾರ್ವಜನಿಕರು ತಮ್ಮ ಒಂದು ಸೇವೆಯನ್ನು ಸಲ್ಲಿಸದಿದ್ದರೆ ಅವು ಮೂಲೆಗೆ ಬೀಳುವುದು ಸ್ವಾಭಾವಿಕ. ಈ ದಿವಸ ಇಂಥ ಪ್ರತಿಯೊಂದು ದೇವಸ್ಥಾನ, ಧರ್ಮಸಂಸ್ಥೆ ಇತ್ಯಾಧಿಗಳಿಗೆಲ್ಲ ಸರ್ಕಾರ ಬೆಂಬಲ ನೀಡಬೇಕೆಂದರೆ ಅದು ಸಾಧ್ಯವಿಲ್ಲದ ಮಾತು. ಈ ವಿಚಾರಗಳನ್ನೆಲ್ಲಾ ಹೆಚ್ಚುಮಟ್ಟಿಗೆ ಸಾರ್ವಜನಿಕರೇ ನಡೆಸಿಕೊಂಡು ಬರುವುದು ಉತ್ತಮ ಎಂಬ ಅಂಶವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಇನ್ನೂ ಬಾಕಿ ತಿಳಿಸಬೇಕಾಗಿದ್ದ ಕೆಲವು ವಿಷಯಗಳಿದ್ದವು. ಆದರೆ ಅಧ್ಯಕ್ಷರು ಇನ್ನು ಕಾಲಾವಕಾಶವಿಲ್ಲವೆಂದು ಅಪ್ಪಣೆ ಕೊಡಿಸುತ್ತಿದ್ದಾರೆ. ಆದ್ದರಿಂದ ನಾನು ಆ ವಿಷಯಗಳನ್ನು ಬೇರೆ ಸಂದರ್ಭ ಸಿಕ್ಕಿದಾಗ ಹೇಳುತ್ತೇನೆ.

Mr. CHAIRMAN.—The question is :

"That a sum not exceeding Rs. 45,04,100 be granted to the Government to defray the charges which will come in course of payment during the year ending 31st day of March 1957, in respect of 'Miscellaneous' Department."

The motion was adopted.

---

5 P.M.

Half-hour Debate on question No. 238 *re*: Implementation of Award with respect to Dispute between the Management and Labour of Mysore Spun Silk Mills, Ltd.

Mr. CHAIRMAN.—Now discussion on Question No. 238 will be taken up. I call upon Sri V. Venkatappa to make a statement.

Sri A. G. RAMACHANDRA RAO (Minister for Law and Education).—Before proceeding further, only one point I wish to bring to the notice of the Chair. The case between the parties is pending before the Court and the Government. If the Hon'ble Member wants to put forward his case, I have no objection. But whether he can take it up afterwards or now I will leave it to him.

A MEMBER.—It becomes *sub judice* then.

ANOTHER MEMBER.—It cannot be *sub judice*.

ಶ್ರೀ ಎ. ಜಿ. ರಾಮಚಂದ್ರರಾವ್.—ತಾವು ಕಳುಹಿಸಿರತಕ್ಕ ಪ್ರಶ್ನೆಯೇನಿದೆ ಆ ವಿಷಯದಲ್ಲಿ ಸರ್ಕಾರದ ಒಂದು ಕೇಸು ಇದೆ. ಅದು ತಮಗೂ ಗೊತ್ತು. ಅಲ್ಲಿ ತೀರ್ಮಾನವಾದಮೇಲೆ ಇದನ್ನು ತೆಗೆದುಕೊಂಡು ತೀರ್ಮಾನ ಮಾಡುವುದು ಉತ್ತಮವೆ ಅಥವಾ ಈಗಲೇ ಚರ್ಚೆ ಮಾಡುವುದು ಸೂಕ್ತವೆ ಎಂಬುದನ್ನು ತಮಗೇ ಬಿಡುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಪೆಂಡಿಂಗ್ ಆಗಿರುವುದು ಜಾಗ್ರತೆ ತೀರ್ಮಾನ ಆಗಬೇಕು ಎನ್ನುವುದಕ್ಕೇ ಈಗ ವಿಷಯವನ್ನು ಚರ್ಚೆ ಮಾಡಬೇಕಾಗಿದೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಜಾಗ್ರತೆ ತೀರ್ಮಾನ ಮಾಡುತ್ತೇವೆ.

Mr. CHAIRMAN.—Let us know what the Hon'ble Member has got to say.

Sri A. G. RAMACHANDRA RAO.—I have no objection.

*ಶ್ರೀ ವಿ. ವೆಂಕಟಪ್ಪ.—ಸ್ವಾಮಿ ಈ ಸಭೆಗೆ ಪ್ರಶ್ನೋತ್ತರಗಳ ಕಾಲ ಬಹು ಮುಖ್ಯವಾದ ಕಾಲ ಎಂದು ಹೇಳಿ ತಿಳಿದುಕೊಂಡು ಸರ್ಕಾರದವರು ಈ ಕಾರ್ಯಕ್ರಮವನ್ನು ಏರ್ಪಾಡುಮಾಡಿ ನಡೆಸುತ್ತಾ ಇದ್ದಾರೆ ಎನ್ನುವುದನ್ನು ಅವರ ಗಮನಕ್ಕೂ ಮತ್ತು ಸಭೆಯ ಗಮನಕ್ಕೂ ತರುತ್ತೇನೆ. ಸರ್ಕಾರದವರು ಎಷ್ಟರಮಟ್ಟಿಗೆ ತಮ್ಮ ಕಾರ್ಯನಿರ್ವಹಣೆ ಮಾಡುತ್ತಾ ಇದ್ದಾರೆ ಎಂಬುದನ್ನು ತೋರಿಸುವುದಕ್ಕೆ ಉಪಯೋಗ ಮಾಡಿಕೊಳ್ಳಬೇಕಾದ ಕಾಲ ಅದು. ಅದನ್ನು ಸರ್ಕಾರದವರು ಬಹುಮಟ್ಟಿಗೆ ಮನಸ್ಸಿಗೆ ತಂದುಕೊಂಡಿರುವಂತೆ ನನಗೆ ಕಾಣುವುದಿಲ್ಲ. ಕಾರಣ ಪ್ರಶ್ನೆಗಳಿಗೆ ಉತ್ತರವನ್ನು ಬಹಳ ಜಾಗರೂಕತೆಯಿಂದ, ಸರಿಯಾದ ರೀತಿಯಲ್ಲಿ ಅದರಲ್ಲೂ ವಾಸ್ತವಾಂಶವನ್ನು ಕೊಡಬೇಕಾದದ್ದು ಅಗತ್ಯ. ಹಾಗೆ ಆಗದೇಯಿರತಕ್ಕ ಪ್ರಸಂಗಗಳು ಅನೇಕವಿವೆ. ಅಧನ್ನು ನಾನು ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಚರ್ಚೆಗೆಯಿರತಕ್ಕ ಪ್ರಶ್ನೆ ಹೀಗಿದೆ :—

"ಚನ್ನಪಟ್ಟಣದಲ್ಲಿರುವ ಮೈಸೂರು ಸ್ಪನ್ ಸಿಲ್ಕ್ ಮಿಲ್ಸ್, ಲಿಮಿಟೆಡ್ ಕಂಪನಿಯವರಿಗೂ ಮತ್ತು ಅಲ್ಲಿನ ಕೆಲಸಗಾರರಿಗೂ ಏರ್ಪಟ್ಟ ವಿವಾದದಲ್ಲಿ (1952-53ನೆಯ ಸಾಲಿಗೆ ಐ. ಸಿ. ನಂ. 31 ಮತ್ತು 62) 'ಅವಾರ್ಡು' ತೀರ್ಪನ್ನು ಕೊಟ್ಟದ್ದು ಯಾವಾಗ" ಎಂದು ಕೇಳಿದರೆ "1.54ನೇ ಇಸವಿ ಡಿಸೆಂಬರ್ 4ನೆಯ ತಾರೀಖಿನಲ್ಲಿ" ಎಂದು ಉತ್ತರ ಕೊಟ್ಟಿದ್ದಾರೆ. ಇದು ಸರಿಯಾದ ಉತ್ತರವಲ್ಲ. ಅಕ್ಟೋಬರ್ 14ನೇ ತಾರೀಖಿನ ದಿವಸ ಅವಾರ್ಡ್ ಆಗಿರುವುದು. ಇಷ್ಟು ಸಣ್ಣ ವಿಷಯದಲ್ಲಿ ಅದೇಕೆ ಹೀಗೆ ಮಾಡಿದ್ದಾರೋ ಗೊತ್ತಾಗುವುದಿಲ್ಲ. ಈ ವಿಷಯವನ್ನು ಯಾರು ಕೊಡುತ್ತಾರೆಯೋ, ಅವರು ನೋಡಿ, ಪರಿಶೀಲನೆಮಾಡಿ ತಪ್ಪು ಉತ್ತರ ಕೊಡುವುದಕ್ಕೆ ಅವಕಾಶವಿಲ್ಲದ ಹಾಗೆ ಏಕೆ ಮಾಡುವುದಿಲ್ಲವೋ ಅರ್ಥವಾಗುವುದಿಲ್ಲ. ಸರ್ಕಾರದವರು ಬಹುಮಟ್ಟಿಗೆ ಎಚ್ಚರಿಕೆ

ಯಿಂದ, ಈ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಯಾರು ಉತ್ತರವನ್ನು ಕೊಡುತ್ತಾರೆಯೋ ಅವರು ಒಂದೆರಡು ಸಲವಾದರೂ ಗಮನಕ್ಕೆ ತೆಗೆದುಕೊಂಡು ಪರಿಶೀಲನೆ ಮಾಡಿ ನೋಡಿದರೆ ಈ ರೀತಿ ತಪ್ಪು ಉತ್ತರ ಕೊಡುವುದಕ್ಕೆ ಅವಕಾಶವಿರುವುದಿಲ್ಲ.

ಆಮೇಲೆ 'ಅವಾರ್ಡ್' ತೀರ್ಮಾನದ ಎಲ್ಲ ನಿಯಮಗಳನ್ನೂ ಜಾರಿಗೆ ತರಲಾಗಿದೆಯೋ ; ಇಲ್ಲದೇ ಇದ್ದರೆ ಕಾರಣವೇನು ? ಎಂದು ಕೇಳಿರುವುದಕ್ಕೆ ಅಧಿಕಾರವರ್ಗದವರು "ಅವಾರ್ಡ್" ತೀರ್ಪನ್ನು ಬೇರೆ ರೀತಿಯಲ್ಲಿ ಅರ್ಥ ಮಾಡಿರುತ್ತಾರೆ ಮತ್ತು ಹಣಕಾಸಿನ ಅಭಾವವನ್ನೂ ಮತ್ತು ಇತರ ಕಾರಣಗಳನ್ನೂ ಸಹ ಸೂಚಿಸಿರುತ್ತಾರೆ ಎಂದು ಹೇಳಿದ್ದಾರೆ. ಈ ರೀತಿ ಅರ್ಥ ಮಾಡುವುದಕ್ಕೆ ಅವರು ಯಾರು ? ಅವರ ಮನಸ್ಸಿಗೆ ಬಂದಂತೆ ಅರ್ಥ ಮಾಡಿಕೊಂಡು ಅವಾರ್ಡ್‌ನ್ನು ಪಾಸ್ ಮಾಡಿಲ್ಲ ಎಂದರೆ ಸರ್ಕಾರ ಸುಮ್ಮನೆ ಇತ್ತೇ ಅಥವಾ ಸಂಬಂಧಪಟ್ಟ ಅಧಿಕಾರಿಗಳು ಏನೋ ಕಾರ್ಯಕ್ರಮ ತೆಗೆದುಕೊಂಡರು, ಹಣದ ಅಭಾವದಿಂದ ಜಾರಿಗೆ ಕೊಡಲಿಲ್ಲ ಎಂದರೆ ಈ ಅವಾರ್ಡ್‌ನ್ನು ಒಪ್ಪುವಾಗ ಇದರ ಇಂಪ್ಲಿಕೇಷನ್ ಏನು ? ಎಷ್ಟು ಹಣ ಕೊಡಬೇಕಾಗುತ್ತದೆ ಎಂಬುದನ್ನು ಕಂಪೆನಿಯವರು ಯೋಚನೆ ಮಾಡಲಿಲ್ಲವೇ ? ಇದಕ್ಕಿಂತಲೂ ಹೆಚ್ಚಾಗಿ ಟ್ರಿಬ್ಯೂನಲ್ ಬೇರೆ ರೀತಿಯಲ್ಲಿ ತೀರ್ಮಾನ ಕೊಟ್ಟರೆ ಹಣ ಕೊಡಬೇಕಾಗುತ್ತದೆ. ಆದ್ದರಿಂದ ಈ ರೀತಿಯಲ್ಲೇ ಒಪ್ಪಿಕೊಳ್ಳತಕ್ಕದ್ದು ಸರಿ ಎಂದು ಹೇಳಿ ಅವರು ಈ ಅವಾರ್ಡನ್ನು ಒಪ್ಪಿಕೊಳ್ಳಲಿಲ್ಲವೇ ? ಈ ಅವಾರ್ಡಿನಲ್ಲಿ ಹೇಳಿರುವ ಪ್ರಕಾರ ಯಾವಯಾವ ವಿಷಯಗಳಲ್ಲಿ ಅವರು ಸರಿಯಾಗಿ ನಡೆದುಕೊಂಡಿಲ್ಲ ಎಂದು ಕೇಳಿದರೆ ಸುಮ್ಮನೆ ವೇಗ್ ಆಗಿ. ಈರೀತಿ ಏನೋ ಒಂದು ತರಹ ಉತ್ತರವನ್ನು ಸರ್ಕಾರದವರು ಹೇಳಿರುವುದು ಏಕೆ? ಸರ್ಕಾರಕ್ಕೆ ಈ ವಿಷಯ ನಾಲ್ಕಾರು ಸಾರಿ ಬಂದಿದೆ. ಅಧಿಕಾರಿಗಳು ತಮಗೆ ಇಷ್ಟ ಬಂದಂತೆ ಏನೋ ಒಂದು ಅರ್ಥ ಮಾಡಿಕೊಂಡಿದ್ದಾರೆ ಎನ್ನುವುದಕ್ಕೆ ಅವಕಾಶವೇ ಇಲ್ಲ. ಸರ್ಕಾರದವರು ಅವರು ತಪ್ಪುಮಾಡಿದ್ದಾರೆಯೇ, ಅವಾರ್ಡಿಗನುಸಾರವಾಗಿ ನಡೆದುಕೊಂಡಿದ್ದಾರೆಯೇ ಇಲ್ಲವೇ ಎಂಬುದನ್ನು ತಮ್ಮ ಡಿಪಾರ್ಟ್‌ಮೆಂಟಿನವರನ್ನು ಕನ್ಸಲ್ಟ್‌ಮಾಡಿ ಅವರು ಮಾಡಿರತಕ್ಕದ್ದು ಸರಿಯಲ್ಲ ಎಂದು ಹೇಳಿ ಅವರ ಅಭಿಪ್ರಾಯವನ್ನು ಪಡೆದು, ಈ ರೀತಿ ಸರಿಯಾಗಿ ನಡೆಯದೇಯಿರುವುದಕ್ಕಾಗಿ ನಿಮ್ಮನ್ನೇಕೆ ಪ್ರಾಸಿಕ್ಯೂಟ್ ಮಾಡಬಾರದು ಎಂದು ಹೇಳಿ ಸರ್ಕಾರದಿಂದ ಅವರಿಗೆ ನೋಟೀಸ್ ಹೋಗಿದ್ದರೂ ಕೂಡ ಅವರ ಲೆಕ್ಕದ ಪ್ರಕಾರ 1,300 ಜನರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ಈ ಸಾವಿರಾರು ಜನರ ಜೀವನ ಹೇಗೆ ನಡೆಯಬೇಕು ? ಈ ಅವಾರ್ಡಿನಲ್ಲಿ ಯಾರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆಯೋ ಅವರನ್ನು ಆದಷ್ಟು ಜಾಗ್ರತೆ ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ಇದೆ. ಅವರನ್ನು ತೆಗೆದು ಹಾಕಿದಮೇಲೆ ಹೊಸದಾಗಿ ಯಾರನ್ನಾದರೂ ಸೇರಿಸಿಕೊಂಡಿದ್ದರೆ, ಅವರೆಲ್ಲರನ್ನೂ ತೆಗೆದುಹಾಕಿ ಹಿಂದೆ ಯಾರನ್ನು ತೆಗೆದುಕೊಂಡಿದ್ದರೋ ಅಂಥವರನ್ನೇ ಸೇರಿಸಿಕೊಳ್ಳಬೇಕೆಂದು ಅವಾರ್ಡಿನಲ್ಲಿದ್ದರೆ ಅದನ್ನು ಲಕ್ಷ್ಯಕ್ಕೆ ತೆಗೆದುಕೊಂಡಿಲ್ಲ. ಅವಾರ್ಡ್ ಆದ ಒಂದು ತಿಂಗಳಿನಲ್ಲೇ 30 ಜನರನ್ನು ಕೆಲಸದಿಂದ ತೆಗೆದಿದ್ದಾರೆ. ಅವರು ಎಂಥವರು ? ಅವರನ್ನು ತೆಗೆಯುವುದಕ್ಕೆ ಅಧಿಕಾರವೇ ಇಲ್ಲ. ಮಿಲ್ಲು ಹುಟ್ಟಿದಾಗಿನಿಂದ ಯಶಸ್ವಿಯಾಗಿ ಕೆಲಸ ಮಾಡಿಕೊಂಡು ಬಂದಿರುವವರು ಅವರು. ಹೊರಗಡೆಯಿಂದ ಬಂದ ಪ್ರವೀಣರು ಹಿಂದೆ ಇದ್ದಂಥ ಕೆಲಸಗಾರರನ್ನು ಕರೆಸಿಕೊಂಡು ಅವರ ಕೆಲಸವನ್ನು ನೋಡಿ ಇಂಥ ಒಳ್ಳೆಯ ಕೆಲಸಗಾರರನ್ನು ಹೇಗೆ ತೆಗೆದರು ಎಂದು ಹೇಳಿ ಆಶ್ಚರ್ಯಪಟ್ಟಿದ್ದಾರೆ. ಅಂಥವರನ್ನು ಪಾರ್ಟಿಫೀಲಿಂಗ್ ಮೇಲೆ ಇತರರ ಮಾತನ್ನು ಕೇಳಿಕೊಂಡು ಕೆಲಸದಿಂದ ತೆಗೆದಿದ್ದಾರೆ.

ಆಮೇಲೆ ಎರಡೆರಡಾಣೆ ಇಂಕ್ರಿಮೆಂಟ್ ಕೊಡಬೇಕೆಂದು ಹೇಳಿ ನಿಯಾಮಕವಾಗಿದೆ. ಈ ಎರಡಾಣೆ ಇಂಕ್ರಿಮೆಂಟನ್ನೂ ಕೂಡ ಕೊಟ್ಟಿಲ್ಲ. ಕೆಲವರಿಗೆ ಒಂದಾಣೆ ಮಾತ್ರ ಕೊಟ್ಟಿದ್ದಾರೆ. ಕೆಲಸಕ್ಕೆ ಸೇರಿಸಿಕೊಂಡವರಿಗೂ ಕೂಡ ಹಿಂದೆ ಎಷ್ಟುಕಾಲ ಬಿಟ್ಟಿದ್ದರೋ ಅದನ್ನೂ ಸೇರಿಸಿಕೊಂಡು ಕೊಡಬೇಕೆಂದು ಒಪ್ಪಿಗೆ ಮಾಡಿಕೊಂಡಿದ್ದರು ; ಅದನ್ನು ಕೂಡ ಮಾಡಿಕೊಟ್ಟಿಲ್ಲ. ಮತ್ತು 16 ಜನರನ್ನು ಒಂದು ವಾರದ ಒಳಗಾಗಿ ಕೆಲಸಕ್ಕೆ ನಿಯಮಿಸಿಕೊಳ್ಳಬೇಕು ಎಂದು ಒಪ್ಪಿಕೊಂಡಿದ್ದರು. ಅದರಂತೆ 16 ಜನರನ್ನು ಕೆಲಸಕ್ಕೆ ತೆಗೆದುಕೊಂಡು 15 ದಿವಸದೊಳಗಾಗಿ ತೆಗೆದುಕೊಂಡವರ ಪೈಕಿ ಒಬ್ಬರನ್ನು ಕೆಲಸದಿಂದ ತೆಗೆದಿದ್ದಾರೆ. ಯಾವ ಆಧಾರದಮೇಲೆ ತೆಗೆದರು ? ಕಾರಣ ಏನೆಂದರೆ ಅವನು ಕುಡಿದಿದ್ದ ಎಂಬ ಕಾರಣದ ಮೇಲೆ ತೆಗೆದಿದ್ದಾರೆ. ಕುಡಿದಿದ್ದರೆ ಪೋಲೀಸ್‌ನವರಿಗೆ ತಿಳಿಸಬೇಕಾಗಿತ್ತು. ಆ ಊರಿನಲ್ಲಿ ಪಾನನಿರೋಧ ಜಾರಿಯಲ್ಲಿದೆ. ಆದ್ದರಿಂದ ಅವನು ಕುಡಿದಿದ್ದಾನೆ, ತಕ್ಸೀರು ಮಾಡಿದ್ದಾನೆ ಎಂದು ಪೋಲೀಸ್‌ನವರಿಗೆ ತಿಳಿಸಿದ್ದರೆ ಅವರು ವಿಚಾರಣೆಮಾಡಿ ತಕ್ಕ ಶಿಕ್ಷೆ ಕೊಡುತ್ತಿದ್ದರು. ಈರೀತಿ ಮನಸ್ಸಿಗೆ ಬಂದಂತೆ ಒಂದು ವರ್ಷದಮೇಲೆ ಐದಾರು ತಿಂಗಳಾಗಿದ್ದರೂ ಕೂಡ ಯಾವ ಒಂದು ನಿಯಮವನ್ನೂ ಸರಿಯಾಗಿ ಪಾಲಿಸದೆ ಬಂದಿರುವುದು ಸರ್ಕಾರದವರ ಗಮನಕ್ಕೆ ಮೂರು ನಾಲ್ಕು ವೇಳೆ ಬಂದಿದ್ದರೂ ಕೂಡ ಇದನ್ನು ಪುನಃ ಹಿಂದಕ್ಕೆ ಕಳುಹಿಸುವುದು ಮುಂದಕ್ಕೆ ತರುವುದು ಈರೀತಿ ಮಾಡುತ್ತಾಯಿರುವುದರಿಂದ ಏನು ಅಭಿಪ್ರಾಯ ಬಂದಿದೆ ಎಂದರೆ ಸರ್ಕಾರದವರು ಒಂದು ಪಕ್ಷವನ್ನು ವಹಿಸಿ ಕೆಲಸ ಮಾಡುತ್ತಾ ಇದ್ದಾರೆಯೋ ಏನೋ ಎಂಬ ಅನುಮಾನಕ್ಕೆ ಆಸ್ಪದವಾಗಿದೆ. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ, ನಮ್ಮ ಚೀಫ್ ಮಿನಿಸ್ಟರ್‌ರವರು, ಅಲ್ಲಿ ಎರಡು ಯೂನಿಯನ್‌ಗಳು ಇವೆ; ಒಂದು ಲೇಬರ್ ಅಸೋಸಿಯೇಷನ್, ಇನ್ನೊಂದು ಲೇಬರ್ ಯೂನಿಯನ್. ಲೇಬರ್ ಅಸೋಸಿಯೇಷನ್‌ನವರು ಮಿಲ್‌ನವರ ಜೊತೆಗೆ ಸೇರಿಕೊಂಡು ಲೇಬರ್ ಯೂನಿಯನ್ನಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ವರ್ಕ್ಸ್‌ಡೇ ಮಾಡುತ್ತಾ ಇದ್ದಾರೆ. ಆದ್ದರಿಂದ ಸರ್ಕಾರದವರು ಯಾರಿಗಾದರೂ ಆಗಲಿ ಅನುಕೂಲವಾಗಿದ್ದಾರೆ ಎಂಬ ಮನೋಭಾವ ಬರುವ ರೀತಿಯಲ್ಲಿ ನಡೆದುಕೊಳ್ಳಬಾರದು ಎಂದು ಹೇಳಿ ಚೀಫ್ ಮಿನಿಸ್ಟರ್‌ಅವರಿಗೆ ಹೇಳಿದರೂ ಕೂಡ ಅವರು ವರ್ಕ್ಸ್‌ಡೇಗೆ ಪ್ರಿಸೈಡ್ ಮಾಡುತ್ತೇನೆ ಎಂದರು. ಅವರ ಗಮನಕ್ಕೆ ಈ ವಿಷಯವನ್ನು ತಂದಮೇಲೆ ಬೇಡವೆಂದು ಹೇಳಿದರು. ಮುಖ್ಯಮಂತ್ರಿಗಳು ಪುನಃ ಒಪ್ಪಿಕೊಂಡಿದ್ದಾರೆ, ಅವರೇ ಬರುತ್ತಾರೆಂದು ಅಲ್ಲಿ ಹೇಳಿಕೊಳ್ಳುತ್ತಿದ್ದಾರೆ. ಏತಕ್ಕೆ ಈ ಹೆಸರುಗಳನ್ನು ಉಪಯೋಗಿಸಿಕೊಳ್ಳುತ್ತಾರೆಂದರೆ ಸರ್ಕಾರದಲ್ಲಿ ಬೇಕಾದಷ್ಟು ಸಹಾನುಭೂತಿ ಇದೆ, ನಾವು ಹೇಳುವುದನ್ನೆಲ್ಲ ಸರ್ಕಾರದವರು ಕೇಳಿ ಏನು ಬೇಕಾದರೂ ಮಾಡಬಹುದು ಎಂದು ಕೆಲಸ ಮಾಡುತ್ತಿದ್ದಾರೆ. ಲೇಬರ್ ಯೂನಿಯನ್‌ನಲ್ಲಿ ವೈಸ್‌ಪ್ರೆಸಿಡೆಂಟರಾಗಿ ಯಾರು ಇದ್ದಾರೆಯೋ ಅವರು ಇವೊತ್ತಿನ ದಿವಸ ಮಿಲ್‌ನವರ ಜೊತೆಯಲ್ಲಿ ಸೇರಿಕೊಂಡು ಈ ಕೆಲಸ

(ಶ್ರೀ ವಿ. ವೆಂಕಟಪ್ಪ.)

ಮಾಡುತ್ತಿದ್ದಾರೆ. ಶ್ರೀಮಾನ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿ ಯಾವಾಗ ಎಂ.ಪಿ.ಸಿ.ಸಿ. ಮೀಟಿಂಗಿಗೆ ಆ ಊರಿಗೆ ಬಂದರೂ ಅವರನ್ನು ಮೆರವಣಿಗೆ ಮಾಡಿ ಕರೆದುಕೊಂಡು ಹೋಗುತ್ತಾರೆ. ಅಂಥವರ ಜೊತೆಯಲ್ಲಿ ಇವರು associate ಮಾಡಿಕೊಳ್ಳುತ್ತಿದ್ದಾರೆ. ಹಾಗೆಯೇ ಶ್ರೀ ಎ. ಜಿ. ರಾಮಚಂದ್ರರಾಯರ ವಿಷಯದಲ್ಲಿಯೂ ಕೆಲವು ವಿಷಯಗಳನ್ನು ಹೇಳುತ್ತಿದ್ದಾರೆ. ಅದನ್ನು ನಾನು ಹೇಳುತ್ತೇನೆ. ಅದು ನಿಜವಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸ್ವಲ್ಪ ದಿವಸಗಳ ಕೆಳಗೆ ಅವರು ಮಿಲ್ಲಿಗೆ ಹೋಗಿದ್ದರು. ಅಲ್ಲಿ ಹೋಗಿದ್ದಾಗ ಕೆಲವು ಬಟ್ಟೆಗಳನ್ನು ತೆಗೆದುಕೊಂಡರು. ಬಿಲ್‍ಹಾಕಿ ಎಂದರೆ, ರೇಟ್‍ನೋಡಿ ಹಾಕುತ್ತೇವೆ ಎಂದು ಹೇಳಿದರು. ಇವರು ಬಂದನಂತರ ಅಲ್ಲಿಯ ಜನಗಳು ಮಂತ್ರಿಗಳಿಗೇ ತಲೆ ಸವರಿಬಿಟ್ಟಿದ್ದೇವೆಂದು ಹೇಳಿಕೊಂಡರು. ಈ ರೀತಿ ಅವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

Sri A. G. RAMACHANDRA RAO.—I have sent the cheque and I have paid.

ಶ್ರೀ ವಿ. ವೆಂಕಟಪ್ಪ.—ಅನೇಕ ವಿಧದಲ್ಲಿ ಅಲ್ಲಿನ ಕೆಲಸಗಾರರಿಗೆ ತೊಂದರೆ ಕೊಟ್ಟದ್ದರಿಂದ ಅಸಮಾಧಾನವುಂಟಾಗಿದೆ. ಇವೊತ್ತಿನ ದಿವಸ ಇಂಡಿಯಾ ದೇಶದಲ್ಲೆಲ್ಲ, South East Asiaದಲ್ಲೆಲ್ಲ ಇಂಥ ಒಂದು ಮಿಲ್ ಇಲ್ಲವೆಂದು ಹೇಳುತ್ತೇನೆ. ಅಂಥ ಮಿಲ್ ಇವೊತ್ತು ಕೆಲಸಮಾಡಬೇಕಾದರೆ ಯಾರಾದರೂ ಅದನ್ನು ತೆಗೆದುಕೊಂಡು ನಡೆಸಬೇಕು. ಇಂಥ ಸ್ಥಿತಿಗೆ ಬಂದಿದೆ. ಸರ್ಕಾರದವರು, ಶ್ರೀ ಸಿದ್ಧವೀರಪ್ಪನವರು ಕೈಗಾರಿಕೆ ಮಂತ್ರಿಗಳಾಗಿದ್ದಾಗ ಇದನ್ನು ತೆಗೆದುಕೊಳ್ಳುವುದಕ್ಕೆ ಕೆಲವು ಪ್ರಯತ್ನಗಳು ನಡೆದುವು. ಅದು ಪೂರ್ಣವಾಗಲಿಲ್ಲ. ಈಗ ಶ್ರೀ ಚನ್ನಬಸಪ್ಪನವರು ಬಂದಿದ್ದಾರೆ. ಅವರೂ ಕೂಡ ಇದನ್ನು ಯೋಚನೆ ಮಾಡುತ್ತೇನೆಂದು ಹೇಳಿದರು. ಈಗ ಅದು ಯಾವ ಘಟ್ಟಕ್ಕೆ ಬಂದಿದೆ, ಇನ್ನು ಯಾರಿಗಾದರೂ ವಹಿಸಿ ಬಿಡುತ್ತಾರೆಯೇ ಅಥವಾ ಸರ್ಕಾರದವರೇ ವಹಿಸಿಕೊಳ್ಳುತ್ತಾರೆಯೇ ಎಂದು ಯೋಚನೆ ಮಾಡುತ್ತಿದ್ದೇನೆ. ಅದರ ವಿಚಾರವಾಗಿ ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಅನೇಕ ಸಂದರ್ಭಗಳಲ್ಲಿ ಅಲ್ಲಿರುವ ಕೆಲಸಗಾರರಿಗೆ ಅನ್ಯಾಯವಾಗುತ್ತಿದೆ ಎಂದು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದಿದ್ದೇವೆ. ಅಲ್ಲದೆ ಅವಾರ್ಡ್‍ಆಗಿ ಬಹಳ ದಿನಗಳಾದರೂ ಕೂಡ ಅದನ್ನು ಜಾರಿಗೆ ತರದೆ ಇದ್ದಮೇಲೆ, ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಇದ್ದಮೇಲೆ, ಸರ್ಕಾರದವರು ಒತ್ತಾಸೆಯಾಗಿದ್ದಾರೆ ಎಂಬ ಮನೋಭಾವ ಬರುತ್ತದೆ. ಇದರಿಂದ ಅನೇಕರಿಗೆ ತೊಂದರೆಯಾಗಿದೆ.

ಆ ಕಾರ್ಖಾನೆ ಈಗ ಬಹಳ ದುಸ್ಥಿತಿಗೆ ಬಂದಿದೆ. ಅಲ್ಲಿ ಒಳ್ಳೆಯ ಕೆಲಸಗಾರರು, ಒಳ್ಳೆಯ ಸುಶಿಕ್ಷಿತ, ನುರಿತ technical men ಇಲ್ಲ. ಇದೆಲ್ಲವನ್ನೂ ನೋಡಿದರೆ ಆ ಕಾರ್ಖಾನೆಯನ್ನು ಮಾರುವುದಕ್ಕೆ ಇಟ್ಟಿದ್ದಾರೆಯೇ ಇಲ್ಲವೇ ಅಭಿವೃದ್ಧಿ ಮಾಡುವುದಕ್ಕೆ ಇಟ್ಟಿದ್ದಾರೆಯೇ ಎಂದು ಕೇಳುತ್ತೇನೆ. ಇಷ್ಟೇ ಅಲ್ಲದೆ ಕಾರ್ಖಾನೆ ವಿಷಯ ಏನೂ ಗೊತ್ತಿಲ್ಲದೆ ಇರತಕ್ಕ ಒಬ್ಬ ಸ್ಟೆನೋಗ್ರಾಫರ್‍ನನ್ನು ಮ್ಯಾನೇಜರ್ ಕೆಲಸಕ್ಕೆ ನೇಮಿಸಿದ್ದಾರೆ. ಈ ವಿಚಾರವನ್ನು ಸರ್ಕಾರದ ಮತ್ತು ಇಲಾಖೆಯ ಗಮನಕ್ಕೆ ತಂದರೂ ಸಹ ಅವರು ಯಾವ ಬದಲಾವಣೆಯನ್ನೂ ಮಾಡಿಲ್ಲ. ಕಾರ್ಖಾನೆಯನ್ನು ಸರಿಯಾಗಿ ನೋಡಿಕೊಳ್ಳದೆ ಇರುವುದರಿಂದಲೂ, ಇದು ಟೆಕ್ನಿಕಲ್ ಕೆಲಸವಾಗಿ ಆತನಿಗೆ ಮಾಹಿತಿ ಇಲ್ಲದೆ ಇರುವುದರಿಂದಲೂ ಕಾರ್ಖಾನೆ ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು ತಿಳಿದು ಬಂದಿದೆ. ಮೈಸೂರು ದೇಶದಲ್ಲಿ ರೇಷ್ಮೆ ಕೈಗಾರಿಕೆಯಲ್ಲಿ ಕೆಲಸ ಮಾಡುವವರಿಗೆ ಈ ಕಾರ್ಖಾನೆಯಿಂದ ಸ್ವಲ್ಪಮಟ್ಟಿಗೆ ಸಹಾಯವಾಗಿದೆ. ಈ ಕಾರ್ಖಾನೆಯನ್ನು ಅಭಿವೃದ್ಧಿ ಪಡಿಸಬೇಕು ಎನ್ನುವ ದೃಷ್ಟಿಯಿಂದ ಎಷ್ಟು ಪ್ರಯತ್ನ ಮಾಡಿದರೂ ಬಹಳ ಉದಾಸೀನ ಮನೋಭಾವದಿಂದ ಇದನ್ನು ನೋಡುತ್ತಿದ್ದಾರೆ. ಸರ್ಕಾರದವರು ಕೊಟ್ಟಿರುವ ಉತ್ತರಗಳು ಸರಿಯಿಲ್ಲ. ಈ ರೀತಿಯಲ್ಲಿ ಮನಸ್ಸಿಗೆ ಸರಿ ಎಂದು ತೋರುವ ರೀತಿಯಲ್ಲಿ ಸರ್ಕಾರದವರು ಉತ್ತರಗಳನ್ನು ಕೊಡದೆ evasive, ಪೂರ್ಣವಾಗಿಲ್ಲದಿದ್ದರೂ ತಪ್ಪು ಉತ್ತರಗಳನ್ನು ಕೊಟ್ಟಿರತಕ್ಕದ್ದು ಬಹಳಮಟ್ಟಿಗೆ ಅಸಮಾಧಾನವನ್ನುಂಟು ಮಾಡಿದೆ.

*ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಮೊದಲನೆಯದಾಗಿ I have issued the cheque on 22-2-1956 immediately on receipt of the Bill. ಇದರಲ್ಲಿ ಒಂದು ವಿಷಯವನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಅವಾರ್ಡ್ ತಾರೀಖು 14-10-1954 ಇರಬೇಕೆಂದು ಹೇಳಿದ್ದಾರೆ. ಇದು ಏಕೆ ತಪ್ಪುಬಿದ್ದಿದೆ ಎಂದು ವಿಚಾರಿಸುತ್ತೇನೆ. ಎರಡನೆಯದಾಗಿ ಅವಾರ್ಡ್ ಆದ ತಕ್ಷಣ ನೋಟಿಫಿಕೇಷನ್ ಆಗಬೇಕು. ನೋಟಿಫಿಕೇಷನ್ ಆದ ಎರಡು ತಿಂಗಳಿಗೆ ಲೆಕ್ಕಾಚಾರ ಪ್ರಾರಂಭವಾಗುತ್ತದೆ.

ಶ್ರೀ ವಿ. ವೆಂಕಟಪ್ಪ.—ಅವಾರ್ಡ್ ಆದ ದಿವಸದಿಂದ ಜಾರಿಗೆ ಬರಬೇಕು ಎಂದು ಒಪ್ಪಿಕೊಂಡಿದ್ದಾರೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಕಾನೂನು ಪ್ರಕಾರ regulate ಆಗಿದೆ. ಅವಾರ್ಡ್ ಪಾಸ್‍ಮಾಡಿದ ತಕ್ಷಣ ಜ್ಯಾರಿಗೆ ಬರುವುದಿಲ್ಲ.

ಶ್ರೀ ವಿ. ವೆಂಕಟಪ್ಪ.—ಅವಾರ್ಡ್ ಇಂಥ ದಿವಸದಿಂದ ಜಾರಿಗೆ ಬರಬೇಕೆಂದು ತೀರ್ಮಾನವಾಗಿದೆ. ಆದ್ದರಿಂದ, ಆ ದಿವಸದಿಂದಲೇ ಜಾರಿಗೆ ಬರಬೇಕು. ಒಪ್ಪಿಕೊಂಡಿದ್ದಮೇಲೆ ಹೀಗೆ ಹೇಳುವುದು ಸರಿಯಲ್ಲ.

Sri A. G. RAMACHANDRA RAO.—Sir, Government is not a party to it. The award after it is secured by the parties, will have to be notified in case the time-limit has been fixed under the law from which date it will become effective for implementation. Regarding this award he says the answer given is 4-12-1954 Sri Venkatappa contends it is 14th October 1954.

ಶ್ರೀ ವಿ. ವೆಂಕಟಪ್ಪ.—ಇದು ನಿಜವಲ್ಲವೆ ಎಂದು ಕೇಳುತ್ತೇನೆ. ನಿಜವಾಗಿರುವುದನ್ನು ಒಪ್ಪಿಕೊಳ್ಳದೆ 'contends' ಎಂದರೆ ಹೇಗೆ ಸ್ವಾಮಿ?

Sri A. G. RAMACHANDRA RAO.—As to why 4-12-1954 has been put instead of 14th October 1954 is a matter which I have to examine.

After the award is passed, it has to be implemented by the party,

particularly when it is by an agreement of parties. Apparently it was referred to the Labour Commissioner on 29th July, 1955. On the report received from the Commissioner of Labour on the above subject, he stated that as the award given by the Industrial Tribunal in this case envisaged Industrial peace for a period of one year, the Management was not expected to retrench any workers and had committed a breach of the award. The action of the Management was detrimental to the interests of the workers. He requested that his interpretation might be further examined and the correct position intimated to him.

The Chairman, Industrial Tribunal, who was consulted, was unable to furnish an opinion for the reason that the matter was liable to different interpretations and views and may lead to conciliation proceedings and a reference being made by the Government for adjudication and award.

That was the position. They did not agree about the interpretation of the Labour Commissioner and the Chairman of the Conciliation Board. In the meanwhile the President, Spun Silk Mills Labour Association—it may be noted here that there are two labour Associations there . . . .

Sri S. GOPALA GOWDA (Sagar-Hosanagar).—I would like one clarification, whether both the associations have been recognised and are functioning regularly.

Sri A. G. RAMACHANDRA RAO.—Yes. That Labour Association was constituted on 22-10 and it stated that the Management have duly implemented the terms of the Award and no congnisance be taken of the allegations made by the rival Unions, *viz.*, the Mysore Spun Silk Mills Employees' Union against the Management. The Secretary of the Employees' Union requested that the period of operation of the award may be extended for a year more from 14th October 1955 as the terms of the Award are not fully implemented.

Therefore between these two Labour Associations there was *inter se* conflict; one party said it has been implemented and the other party said and urged that it should be extended to a further period of one year.

On 12th December 1955 the Commissioner of Labour reported that the Managemant did not accept that there was a breach. He reported that the terms remaining to be implemented related to the reinstatement of 30 workers, reduction of wages to jobbers and oilers and collection of amount towards charitable purposes.

As there are different interpretations about the implementation of the Award on the side of labour itself, the Government have been trying to bring about an understanding between the Management and Employees' Union which complains of non-implementation and to secure relief to the members thereof.

That is the position.

Mr. CHAIRMAN.—The House will now adjourn and meet at Twelve on Friday, the 23rd March.

The House adjourned at Twenty-five Minutes past Five of the Clock to meet again at Twelve of the Clock on Friday, the 23rd March 1956.

WD 2896—GPB—550—22-6-56.